ಗಡಿನಾಡಿನ ಅನುಪಮ ಪ್ರಕಾಶನದ ಅಧ್ಯಯನ

(ಕನ್ನಡ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು :

ಶ್ರೀ ಮಹಾಲಿಂಗಪ್ಪ. ಭೀ. ಮರಡಿ

ಕನ್ನಡ ಉಪನ್ಯಾಸಕರು

ಶ್ರೀ ಚ.ವಿ.ವ. ಸಂಘದ ಕಲಾ ಪದವಿ ಮಹಾವಿದ್ಯಾಲಯ,

ಮುಗಳಖೋಡ, ಜಿ. ಬೆಳಗಾವಿ

ನೋಂದಣಿ ಸಂಖ್ಯೆ : BRDH / K004

ಮಾರ್ಗದರ್ಶಕರು :

ಡಾ. ಅಶೋಕ ನರೋಡೆ

ಕೆ.ಎಲ್.ಇ. ಸಂಸ್ಥೆಯ ಪದವಿ ಮಹಾವಿದ್ಯಾಲಯ,

ಮಹಾಲಿಂಗಪುರ ಜಿ. ಬಾಗಲಕೋಟ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ

ತಾ : ರಾಯಬಾಗ, ಜಿ. ಬೆಳಗಾವಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬

೨೦೧೨

ಗಡಿನಾಡಿನ ಅನುಪಮ ಪ್ರಕಾಶನದ ಅಧ್ಯಯನ

(ಕನ್ನಡ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು :

ಶ್ರೀ ಮಹಾಲಿಂಗಪ್ಪ. ಭೀ. ಮರಡಿ

ಕನ್ನಡ ಉಪನ್ಯಾಸಕರು

ಶ್ರೀ ಚ.ವಿ.ವ. ಸಂಘದ ಕಲಾ ಪದವಿ ಮಹಾವಿದ್ಯಾಲಯ,

ಮುಗಳಖೋಡ, ಜಿ. ಬೆಳಗಾವಿ

ನೋಂದಣಿ ಸಂಖ್ಯೆ : BRDH / K004

ಮಾರ್ಗದರ್ಶಕರು :

ಡಾ. ಅಶೋಕ ನರೋಡೆ

ಕೆ.ಎಲ್.ಇ. ಸಂಸ್ಥೆಯ ಪದವಿ ಮಹಾವಿದ್ಯಾಲಯ,

ಮಹಾಲಿಂಗಪುರ ಜಿ. ಬಾಗಲಕೋಟ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ

ತಾ : ರಾಯಬಾಗ, ಜಿ. ಬೆಳಗಾವಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩.೨೭೬

೨೦೧೨

ಪ್ರಮಾಣ ಪತ್ರ

"ಗಡಿನಾಡಿನ ಅನುಪಮ ಪ್ರಕಾಶನದ ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವನ್ನು **ಡಾ. ಅಶೋಕ ನರೋಡೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುವೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ ಅಥವಾ ಬಿಡಿಯಾಗಿಯಾಗಲಿ ಪ್ರಕಟಿಸಿರುವುದಿಲ್ಲ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ: ೧೪/೦೬/೨೦೧೨

ಶ್ರೀ ಮಹಾಲಿಂಗಪ್ಪ. ಭೀ. ಮರಡಿ
ಸಂಶೋಧನಾ ವಿದ್ಯಾರ್ಥಿ
ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ ತಾ॥ ರಾಯಬಾಗ ಜಿ॥ ಬೆಳಗಾವಿ

ದೃಢೀಕರಣ ಪತ್ರ

ಶ್ರೀ ಮಹಾಲಿಂಗಪ್ಪ. ಭೀ. ಮರಡಿ ಇವರು **"ಗಡಿನಾಡಿನ ಅನುಪಮ ಪ್ರಕಾಶನದ ಅಧ್ಯಯನ"** ಎಂಬ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗೆ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ ಅಥವಾ ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ: ೧೪/೦೬/೨೦೧೨

ಡಾ. ಅಶೋಕ ನರೋಡೆ

ಮಾರ್ಗದರ್ಶಕರು

ಕೆ.ಎಲ್.ಇ. ಸಂಸ್ಥೆಯ

ಪದವಿ ಮಹಾವಿದ್ಯಾಲಯ,

ಮಹಾಲಿಂಗಪುರ ಜಿ॥ ಬಾಗಲಕೋಟ

[illegible]

ಅರಿಕೆ

ಶ್ರೀ ಚನ್ನಬಸವೇಶ್ವರ ವಿದ್ಯಾವರ್ಧಕ ಸಂಘದ ಕಲಾ ಪದವಿ ಮಹಾವಿದ್ಯಾಲಯ ಮುಗಳಖೋಡದಲ್ಲಿ ಉಪನ್ಯಾಸಕನಾಗಿ ಕಾರ್ಯ ನಿರ್ವಹಿಸುತ್ತಿರುವೆ. ಎಂ.ಫಿಲ್. ಪದವಿ ಪಡೆಯಲು ಪ್ರೇರಣಾ ಶಕ್ತಿಯಾಗಿ ಮಾರ್ಗದರ್ಶನ ನೀಡಿ ನಿಬಂಧ ರೂಪಿಸಲು ಸಹಕರಿಸಿದ ಡಾ. ಅಶೋಕ ನರೋಡೆಯವರಿಗೆ ತುಂಬು ಹೃದಯದಿಂದ ಅಭಿನಂದನೆ ಸಲ್ಲಿಸುತ್ತೇನೆ.

ಉನ್ನತ ವ್ಯಾಸಂಗಕ್ಕೆ ಪ್ರೇರಣೆಯನ್ನು ನೀಡಿ ಏನೇ ಸಮಸ್ಯೆಗಳು ಬಂದರೂ ಎದೆಗುಂದದೆ ಅವುಗಳನ್ನು ಎದುರಿಸಿ ಮನ್ನಡೆಯಲು ಆತ್ಮಸ್ಥೈರ್ಯವನ್ನು ತುಂಬಿದ ಸಂಶೋಧನಾ ಕೇಂದ್ರದ ಸಂಯೋಜಕರಾದ **ಡಾ. ವ್ಹಿ. ಎಸ್. ಮಾಳಿ** ಗುರುಗಳಿಗೆ ಚಿರಋಣಿಯಾಗಿದ್ದೇನೆ.

ಎಂ.ಫಿಲ್. ಪದವಿ ಅಧ್ಯಯನ ಮಾಡಲು ಪೂರಕ ಸಾಮಗ್ರಿ ಸಂಗ್ರಹಿಸಲು ಅಥಣಿಯ ಅನುಪಮ ಪ್ರಕಾಶನ ಸಂಸ್ಥೆಗೆ ಭೇಟಿಯಿತ್ತಾಗ ಸೂಕ್ತ ಸಲಹೆ ನೀಡಿ, ನೆರವು ನೀಡಿದ **ಶ್ರೀ ಎಸ್. ಬಿ. ಉತ್ನಾಳರಿಗೂ** ಗೌರವಾದರದ ನಮನಗಳು.

ನಮ್ಮ ಸಂಸ್ಥೆಯ ಅಧ್ಯಕ್ಷರಾದ **ಡಾ. ಸಿ. ಬಿ. ಕುಲಿಗೋಡ** ಹಾಗೂ ಎಲ್ಲ ಆಡಳಿತ ಮಂಡಳಿಯ ಸದಸ್ಯರಿಗೂ ಮತ್ತು ಕಾಲೇಜಿನ ಉಪನ್ಯಾಸಕರಾದ **ಡಾ. ಪಿ. ಬಿ. ಕೊರವಿ, ಶ್ರೀ ಎಚ್. ಎನ್. ಸಯ್ಯದ, ಶ್ರೀ ಎಸ್. ಎಸ್. ಮದಾಳೆ, ಶ್ರೀ ಎಮ್. ಕೆ. ಬೀಳಗಿ, ಶ್ರೀ ಆರ್. ಜಿ. ಹುಬ್ಬಳ್ಳಿ, ಎನ್. ಎಮ್. ಗಡಗಿ** ಹಾಗೂ ಬಿ. ಎನ್. ಕೆ. ಹೈಸ್ಕೂಲಿನ ಎಲ್ಲ ಶಿಕ್ಷಕರಿಗೂ ಋಣಿಯಾಗಿದ್ದೇನೆ.

ಸಂಶೋಧನಾ ಕೇಂದ್ರದ ರೂವಾರಿಯಾದ ಶ್ರೀ ಬಿ. ಆರ್. ದರೂರ ಅವರನ್ನು ಸ್ಮರಿಸುವೆ **ಶ್ರೀ ಶಂಕರ ಘಟ್ನಟ್ಟಿ** ಹಾಗೂ ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿದ ಶ್ರೀ ವಸಂತ. ಭ. ಕಾಂಬಳೆ ಅವರಿಗೂ ನನ್ನ ವಂದನೆಗಳು.

ಹಾರೂಗೇರಿ

ದಿನಾಂಕ:೧೪-೦೬-೨೦೧೨

ಶ್ರೀ ಮಹಾಲಿಂಗಪ್ಪ. ಭೀ. ಮರಡಿ
ಶ್ರೀ ಚ. ವಿ. ವ. ಸಂಘದ ಕಲಾ
ಮಹಾವಿದ್ಯಾಲಯ, ಮುಗಳಖೋಡ
ತಾ॥ ರಾಯಬಾಗ ಜಿ॥ ಬೆಳಗಾವಿ

ಪರಿವಿಡಿ

ಅಧ್ಯಾಯ – ಒಂದು :

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ – ಒಂದು :

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಪೀಠಿಕೆ :

ಪ್ರಪಂಚದ ಎಲ್ಲ ಕ್ಷೇತ್ರಗಳಲ್ಲಿ ಅನೇಕ ಪ್ರಕಾರದ ಅಧ್ಯಯನ ಶಾಖೆಗಳು ಬೆಳಕನ್ನು ಕಂಡಿವೆ. ಅಂತಹ ಕ್ಷೇತ್ರಗಳಲ್ಲಿ ಪ್ರಕಾಶನವು ಒಂದಾಗಿದೆ. ಕನ್ನಡದ ಪ್ರಕಾಶನ ಸಂಸ್ಥೆಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನಿಸಬೇಕಾಗಿದೆ.

ಸಾಹಿತ್ಯಕ್ಕೂ ಪ್ರಕಾಶನ ಕಲೆಗೂ ಅತ್ಯಂತ ನಿಕಟ ಸಂಬಂಧವಿದೆ. ಅರುಣೋದಯ ಕಾಲದ ಸಾಹಿತ್ಯವೂ ಆರಂಭವಾಗುವುದಕ್ಕೂ ಅದು ಇಷ್ಟೊಂದು ವ್ಯಾಪಕವಾಗಿ ಬೆಳೆಯಲು ಪ್ರಕಾಶನವೇ ಕಾರಣ. ಕನ್ನಡದಲ್ಲಿ ಪ್ರಕಾಶನ ಆರಂಭವಾದ ರೀತಿ ಅದು ಸಾಹಿತ್ಯ ಸೃಷ್ಟಿಗೆ ನೆರವಾದ ಬಗೆಯನ್ನು ಅರಿತುಕೊಳ್ಳುವುದು. ಸಾಹಿತ್ಯ ಚರಿತ್ರೆಯ ಮತ್ತು ಸಂಶೋಧನೆಯ ದೃಷ್ಟಿಯಿಂದ ಅವಶ್ಯಕವಾಗಿದೆ.

ಮಾನವನ ಬರವಣಿಗೆಯ ಹುಟ್ಟಿನೊಂದಿಗೆ ಗುರುತಿಸಿಕೊಂಡಿರುವ ಪ್ರಕಾಶನಗಳು ರಾಜಕೀಯ, ಸಾಮಾಜಿಕ, ಧಾರ್ಮಿಕ ಹಿನ್ನೆಲೆಯಿಂದ ಅವುಗಳಲ್ಲಿ ಹುದುಗಿರುವ ಜ್ಞಾನವನ್ನು ಹೊರ ತೆಗೆಯಬೇಕಿದೆ. ಇಂದಿನ ಸಾಹಿತ್ಯ ಸಂದರ್ಭದಲ್ಲಿ ಅಗತ್ಯವಾಗಿ ಆಗಬೇಕಾಗಿದೆ.

ಅಧ್ಯಯನದ ಉದ್ದೇಶ :

ಜಗತ್ತಿನಾದ್ಯಂತ ಕುತೂಹಲ ಕೆರಳಿಸುತ್ತಿರುವ ಅಧ್ಯಯನಗಳಲ್ಲಿ ಪ್ರಕಾಶನಗಳ ಅಧ್ಯಯನವೂ ಒಂದಾಗಿದೆ. ಮಾನವನ ಬದುಕಿನಲ್ಲಿ ಬೆಳೆದು ಬಂದಿರುವ ಪ್ರಕಾಶನಗಳನ್ನು

ಸಾಮಾಜಿಕ ಮನ್ನಣೆ ಹಾಗೂ ಸಾಹಿತ್ಯಕ ಮೌಲ್ಯಗಳ ವಿವೇಚನೆಯನ್ನು ಪರಿಶೀಲಿಸುವುದು, ಅದರ ಮಹತ್ವವನ್ನು ಗುರುತಿಸುವುದು ಈ ಅಧ್ಯಯನದ ಉದ್ಧೇಶವಾಗಿದೆ.

ಎಂಬತ್ತರ ದಶಕದಲ್ಲಿ ಪ್ರಕಾಶನಕ್ಕೆ ಕ್ಷೇತ್ರದಲ್ಲಿ ಪ್ರವೇಶಿಸಿದ 'ಅನುಪಮ ಪ್ರಕಾಶನ'ವು ಪ್ರಮುಖವಾಗಿದೆ. ಗಡಿನಾಡಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಜೀವ ತುಂಬಿದವರು ಅನುಪಮ ಪ್ರಕಾಶನವು ಕಳೆದ ೨೫ ವರ್ಷಗಳಿಂದ ನಾಡಿನ ಉದ್ದಗಲಕ್ಕೂ ಹರಡಿದ ಖ್ಯಾತ ಸಾಹಿತಿಗಳ ಪುಸ್ತಕಗಳನ್ನು ಲೋಕಾರ್ಪಣೆ ಮಾಡಿದೆ.

ಆಧುನಿಕ ಕಾಲವನ್ನು ವೈಜ್ಞಾನಿಕ ಕಂಪ್ಯೂಟರ್ ಯುಗವೆಂದು ಕರೆಯುವುದು ವಾಡಿಕೆಯಾಗಿದೆ. ಹಾಗೆ ಪ್ರಕಾಶನಗಳ ಅಧ್ಯಯನವು ಪ್ರಕಟಣೆಗೊಳ್ಳುವ ಪುಸ್ತಕಗಳ ದೃಷ್ಟಿಯಿಂದ ಜ್ಞಾನದ ಹೊಸ ಶಾಖೆಗಳನ್ನು ಪರಿಚಯಿಸಿ ಅದನ್ನು ವಿಸ್ತರಿಸುತ್ತಲಿದೆ.

'ಪುಸ್ತಕ ಸಂಸ್ಕೃತಿ' ಎಂಬುದು ಒಂದು ಅರ್ಥಪೂರ್ಣ ಪರಿಕಲ್ಪನೆಯಾಗಿದೆ. ಅದು ನಮ್ಮ ಬದುಕಿನ ಜೀವನಾಡಿಯಾಗಿದೆ. ನಾಡು-ನುಡಿ, ಸಂಗೀತ, ಕಲೆ, ಜನಪದ, ತಂತ್ರಜ್ಞಾನ, ದೇಶ ಪ್ರಜ್ಞೆ ಮುಂತಾದವುಗಳು ಎಷ್ಟು ಮುಖ್ಯವೋ ಪ್ರಕಾಶನ ಸಂಸ್ಕೃತಿಯೂ ಅಷ್ಟೇ ಮುಖ್ಯವಾದುದಾಗಿದೆ.

ಪುಸ್ತಕಗಳು ಜನರಿಗೆ ಧರ್ಮ ಹಾಗೂ ಸಂಸ್ಕೃತಿಗಳ ಬಗ್ಗೆ ಅರಿವನ್ನು ಮೂಡಿಸುತ್ತವೆ. ಪುಸ್ತಕಗಳನ್ನು ಓದಿದರೆ ಸಾಲದು ಅವುಗಳಿಂದ ಮೌಲ್ಯವನ್ನು ಬೆಳೆಸಿಕೊಳ್ಳಬೇಕು, ಜೀವನದರ್ಶನ ಪಡೆಯಬೇಕು. ಓದುಗರು ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಜಾಣತನ ತೋರಬೇಕು. ಇದು ಪ್ರಕಾಶನದ ಸಂಸ್ಕೃತಿ ಎನಿಸಿಕೊಳ್ಳುತ್ತದೆ.

ಸಾಹಿತ್ಯವೂ ಲೇಖಕರಿಗೆ, ಪ್ರಕಾಶಕರಿಗೆ ಹಾಗೂ ಮಾರಾಟಗಾರರ ನಡುವೆ ಸಂಬಂಧವನ್ನು ಏರ್ಪಡಿಸುವುದು. ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಬೆಳೆಸಿ ಓದುಗರಿಗೆ ಒಳ್ಳೆಯ ಪುಸ್ತಕಗಳು ದೊರೆಯುವಂತೆ ಮಾಡುವುದು. ಪ್ರಕಾಶನಗಳು ಜನಪರವಾಗಿ ಹಾಗೂ ದೃಢವಾಗಿ ಬೆಳೆದು ಭದ್ರವಾಗಿ ಬೇರೂರುವಂತೆ ಮಾಡುವುದು ಪ್ರಕಾಶನ ಅಧ್ಯಯನದ ಉದ್ದೇಶವಾಗಿದೆ.

ಸಾಹಿತ್ಯದಲ್ಲಿ ಭಾಷೆ, ಸಂಸ್ಕೃತಿ, ಕಲೆ, ವಿಜ್ಞಾನ ವಿವಿಧ ಜ್ಞಾನ ಇವುಗಳ ಬಗ್ಗೆ ವ್ಯಾಪಕವಾದ ಅರಿವು ಮೂಡಿಸುವುದು. ಸಮಾಜಕ್ಕೆ ಅಗತ್ಯವಿರುವ ಎಲ್ಲ ಬಗೆಯ ಮೂಲಭೂತ ಶೈಕ್ಷಣಿಕ ಪುಸ್ತಕಗಳನ್ನು ಪ್ರಕಟಿಸುವುದು. ಅನುವಾದ, ಸಂಪಾದನೆ ಪ್ರಕಟಣೆಗಳಿಗೆ ಉತ್ತೇಜನ ನೀಡುವುದು. ಪ್ರಕಾಶನ ಸಂಸ್ಥೆಯ ಅಧ್ಯಯನದ ಉದ್ದೇಶವಾಗಿದೆ.

ಪ್ರಕಾಶನಗಳು ಪುಸ್ತಕಗಳ ಬರವಣಿಗೆಯ ಹಿನ್ನೆಲೆಯಿಂದ ಜನ್ಮತಾಳುತ್ತವೆ. ಇವುಗಳ ಅಧ್ಯಯನವು ಮಾನವನ ಸಮಸ್ತ ಸಂಸ್ಕೃತಿಯ ಸತ್ಯತೆಯನ್ನು ಶೋಧಿಸುವುದೇ ಆಗಿದೆ. ಕವನ ಸಂಕಲನ, ಕಥಾ ಸಂಕಲನ, ನಾಟಕಗಳು, ಕಥೆಗಳು, ವ್ಯಕ್ತಿ ಪರಿಚಯ ಇತ್ಯಾದಿ ವಿವರಗಳು ಪ್ರಕಾಶನ ಅಧ್ಯಯನದಿಂದ ತಿಳಿದು ಬರುವವು.

ಅನುಪಮ ಪ್ರಕಾಶನವು ಪುಸ್ತಕಗಳನ್ನು ಬಿಡುಗಡೆ ಮಾಡಿ ಉತ್ತಮ ಸಾಹಿತ್ಯವನ್ನು ಜನರಿಗೆ ತಲುಪಿಸುವ ಮಹದುದ್ದೇಶವನ್ನು ಹೊಂದಿದೆ.

ಪ್ರಕಾಶನದ ಪ್ರಕಟಣೆಗಳು ಮುಂದುವರೆದರೆ ಭೌದ್ಧಿಕ ವಾತಾವರಣ ನಿರ್ಮಾಣವಾಗುತ್ತದೆ. ಸಾಹಿತ್ಯಿಕ ಭಾಷೆಯು ಕೇವಲ ಮಾತಿನಿಂದ ಬೆಳೆಯದೇ ಕ್ರಿಯೆಯಿಂದಲೂ ಬೆಳೆಯಬೇಕು, ಮಾತನಾಡಿದ್ದು ಮರೆಯಾಗುತ್ತದೆ. ಆದರೆ ಕೆಲಸ ಮಾಡಿದ್ದು ಉಳಿಯುತ್ತದೆ. ಸಾಹಿತ್ಯವನ್ನು ಉಳಿಸಿ ಬೆಳೆಸುವ ಬಗ್ಗೆ ಅನುಪಮ ಪ್ರಕಾಶನವು ಮಹತ್ತರವಾದ ಕಾರ್ಯ ಮಾಡಿದೆ.

ಓದುವ ವರ್ಗವು ವಿಶಿಷ್ಟವಾದದ್ದು ಮತ್ತು ಸಂಕೀರ್ಣವಾದದ್ದು, ಅದರ ವಿಸ್ತರಣೆ ಅಗತ್ಯ ಆ ಕೆಲಸವನ್ನು ಅನುಪಮ ಪ್ರಕಾಶನ ಕೈಗೆತ್ತಿಕೊಂಡಿದೆ. ಪುಸ್ತಕ ಪ್ರಕಟಣೆಗಳ ಮುಖಾಂತರ ಓದುವ ಕ್ರಿಯೆಯನ್ನು ಬೆಳೆಸುವ ವಾಚನಾಭಿರುಚಿ ಹೆಚ್ಚಿಸುವ ಕಾರ್ಯವನ್ನು ಒಂದು ವ್ರತದಂತೆ ಮಾಡುತ್ತ ಬಂದಿದೆ.

ಅನುಪಮ ಪ್ರಕಾಶನವು ಸಾಹಿತ್ಯದ ಎಲ್ಲ ರೂಪಗಳನ್ನು ಪ್ರಕಟಿಸುತ್ತ ಬಂದಿದೆ. ಸಾಹಿತ್ಯ ಸಂಶೋಧಕರನ್ನು ಪುಸ್ತಕ ಸಂಗ್ರಹಕಾರರನ್ನು ಒಂದು ಕಡೆ ಕೂಡಿಸುವ ಕಾರ್ಯವಾಗಿದೆ. ಪ್ರಕಾಶನವು ಕೇವಲ ಒಬ್ಬರಿಗಷ್ಟೇ ಪರಿಚಯಿಸದೇ ಇಡಿ ಸಮಾಜಕ್ಕೆ ನೀತಿ–ನಿಯಮಗಳನ್ನು ಪರಿಚಯಿಸುವ ಕಾರ್ಯ ಮಾಡುತ್ತದೆ. ಅನುಪಮ ಪ್ರಕಾಶನವು ಎಂಬತ್ತರ ದಶಕದಲ್ಲಿ ಪ್ರಾರಂಭವಾಗಿ ಇಲ್ಲಿಯವರೆಗೆ ೪೧ ಪುಸ್ತಕಗಳನ್ನು ಪ್ರಕಟಿಸುವಲ್ಲಿ ಯಶಸ್ವಿಯಾಗಿದೆ.

ಈ ಭಾಗದ ಜನರಲ್ಲಿ ಕನ್ನಡದ ಬಗ್ಗೆ ಆಸಕ್ತಿ ಮೂಡಲು ಕನ್ನಡ ಭಾಷೆ ಬೆಳೆಯಲು ಈ ಪ್ರಕಾಶನವು ಪ್ರಮುಖವಾಗಿದೆ. ಹೆಸರಾಂತ ಸಾಹಿತಿಗಳನ್ನು ಅಥಣಿಗೆ ಕರೆಸಿಕೊಂಡು ಉಪನ್ಯಾಸ ಏರ್ಪಡಿಸುವುದು. ಕನ್ನಡ ಜಾಗೃತಿಗಾಗಿ ಸಮಾರಂಭ ನಡೆಸುವುದರಿಂದಾಗಿ ಇಂದು ಈ ಭಾಗದಲ್ಲಿ ಕನ್ನಡ ಜನಪರವಾಗಿದೆ. ಕನ್ನಡ ಶಕ್ತಿಯಾಗಿ ಕಾರ್ಯ ನಿರ್ವಹಿಸಿದೆ.

ಅಧ್ಯಯನದ ಸ್ವರೂಪ :

"ದೇಶ ನೋಡು ಇಲ್ಲವೇ ಕೋಶ ಓದು" ಎಂಬ ಗಾದೆ ಮಾತಿನಂತೆ ಪುಸ್ತಕ ಓದುವ ಸಂಸ್ಕೃತಿಯು ಪ್ರಕಾಶನದಿಂದ ಪ್ರಕಟಣೆಗೊಂಡಿರುವ ಪುಸ್ತಕಗಳಿಂದ ಬೆಳೆದು ಬಂದಿದೆ. ಜನರ

ಅಭಿರುಚಿಗೆ ಅನುಗುಣವಾಗಿ ಪುಸ್ತಕಗಳು ಪ್ರಕಟಣೆಗೊಳ್ಳುತ್ತವೆ. ಜನರಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸುತ್ತವೆ.

ಪ್ರಕಾಶನದ ಕುರಿತು ಅಧ್ಯಯನ ನಡೆದರೂ ಅದೊಂದು ಬತ್ತಲಾರದ ಒರತೆಯು ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಪ್ರಕಾಶನಗಳ ಬಗ್ಗೆ ಆಯಾ ನಗರಗಳ ಪ್ರದೇಶಕ್ಕನುಗುಣವಾಗಿ ಪ್ರಕಾಶನಗಳ ಸ್ವರೂಪ ರಚನೆ ಬೆಳೆದು ಬಂದ ಬಗೆಯೂ ಈ ಎಲ್ಲ ಸಾಹಿತ್ಯ ಭಾಷೆಗಳ ವೈಜ್ಞಾನಿಕತೆಯಿಂದ ಬಳಕೆಗೆ ಬಂದುದಾಗಿದೆ.

ಕನ್ನಡ ನಾಡು ಸುಮಾರು ೨೦೦೦ ವರ್ಷಗಳ ಐತಿಹಾಸಿಕ ಪರಂಪರೆಯನ್ನು ಒಳಗೊಂಡಿದೆ. ಪ್ರಕಾಶನಗಳು ಬೆಳೆದು ಬಂದ ಪರಂಪರೆ ಇರುವುದು. ಈ ಅವಧಿಯಲ್ಲಿ ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ಅನುಪಮ ಪ್ರಕಾಶನವನ್ನು ಪ್ರಾರಂಭ ಮಾಡಿದರು.

ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳ ತಪಸ್ಸಿನ ಫಲವಾಗಿ ಪಾವಿತ್ರ್ಯ ಹೊಂದಿ ಆಧ್ಯಾತ್ಮಿಕ ಕ್ಷೇತ್ರವಾಯಿತು. ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದೆ. ಮಹಾಮಹಿಮರನ್ನು ಕ್ಷೇತ್ರಕ್ಕೆ ತಪಗೈಯಲು ಬರಮಾಡಿಕೊಂಡಿದೆ. ಅನುಪಮ ಪ್ರಕಾಶನ ಕಳೆದ ೨೫ ವರ್ಷಗಳಿಂದ ನಾಡಿನ ಉದ್ದಗಲಕ್ಕೂ ಹರಡಿದ ಖ್ಯಾತ ಲೇಖಕರ, ಲೇಖಕಿಯರ ಕೃತಿಗಳನ್ನು ಪ್ರಕಟಿಸುತ್ತಾ ಬಂದಿದೆ. ಸಾಹಿತ್ಯ ಸಂಸ್ಕೃತಿಗಳು ಸಮೃದ್ಧವಾಗಿ ಬೆಳೆದು ಈ ನಾಡಿನ ಇತಿಹಾಸವನ್ನು ಭವ್ಯವಾಗಿಸಿದೆ.

ಪ್ರಕಾಶನವು ಪ್ರಾಚೀನ ಜನರ ಬರವಣಿಗೆಗಳ ನೆಲೆಗಳು. ಅವುಗಳ ಕುರಿತು ಅವರಲ್ಲಿರುವ ಸಾಹಿತ್ಯ, ಭಾಷೆ ಇನ್ನಿತರ ಸ್ವರೂಪವು ನಿರ್ಮಾಣಗೊಂಡಿರುತ್ತದೆ. ಅಧ್ಯಯನದಿಂದ ಒಂದು ಪ್ರಕಾಶನದ ಪ್ರಾಚೀನತೆ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಸಂಸ್ಕೃತಿಯನ್ನು ತಿಳಿಯುವುದಾಗಿದೆ.

ಅಧ್ಯಾಯ ಎರಡರಲ್ಲಿ ಅನುಪಮ ಪ್ರಕಾಶನದ ಸ್ಥೂಲ ಪರಿಚಯ ಮಾಡಿ ಅದರ ಪ್ರಕಟಣೆಗಳ ಬಗೆಗೆ ಪರಿಚಯಿಸಲಾಗುವುದು. ಈ ಪ್ರಕಾಶನವು ಪ್ರಕಾಶಿಸಿದ ಪದ್ಯ ಸಾಹಿತ್ಯ, ಗದ್ಯ ಸಾಹಿತ್ಯ ಹಾಗೂ ಇತರ ಸಾಹಿತ್ಯವನ್ನು ಕುರಿತು ಅವಲೋಕಿಸಲಾಯಿತು.

ಅಧ್ಯಯನದ ವ್ಯಾಪ್ತಿ :

'ವಿಷಯದ ವ್ಯಾಪ್ತಿ' ಎಂದರೆ ಆ ಕ್ಷೇತ್ರದ ವೈಶಾಲ್ಯತೆ ಹರವು ಅಧ್ಯಯನದ ಸೀಮಾರೇಖೆ ಎಂದರ್ಥ. ಅಥಣಿಯು ಬೆಳಗಾವಿ ಜಿಲ್ಲೆಯ ಉತ್ತರದಲ್ಲಿದೆ. ಇದು ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳು ಸಂಗಮಿಸುವ ಗಡಿ ಭೂಭಾಗ. ಇಲ್ಲಿಯ ಜನಕ್ಕೆ ಮರಾಠಿ ಮತ್ತು ಮಹಾರಾಷ್ಟ್ರದೊಂದಿಗೆ ನಿತ್ಯದೊಡನಾಟ. ಮರಾಠಿಯ ದಟ್ಟ ಪ್ರಭಾವದಲ್ಲಿಯೂ ಕನ್ನಡ ಸಾಹಿತ್ಯ

ಸಂಸ್ಕೃತಿಗಳನ್ನು ಅರ್ಥಪೂರ್ಣವಾಗಿ ಜೀವಂತವಾಗಿಡುವ ಕಾರ್ಯ ಅತ್ಯಂತ ಪ್ರಸ್ತುತ. ಇದನ್ನು ಅನುಪಮ ಪ್ರಕಾಶನವು ಮಾಡುತ್ತ ಬಂದಿದೆ.

ಅನುಪಮ ಪ್ರಕಾಶನಕ್ಕೆ ಸಂಬಂಧಿಸಿದಂತೆ ಲಭ್ಯವಾದ ಎಲ್ಲ ಗ್ರಂಥಗಳನ್ನು ಅವಲೋಕಿಸಲಾಗಿದೆ. ನಾಡಿನ ತುಂಬ ವ್ಯಾಪ್ತಿಯನ್ನು ಹೊಂದಿರುವ ಪ್ರಕಾಶನವು ಸಮಾಜದ ಒಳಿತಿಗಾಗಿ ಅನೇಕ ಪ್ರಕಟಣೆಗಳನ್ನು ಕೈಗೊಂಡಿದೆ. ತನ್ನ ಪ್ರಕಟಣೆಯ ಮೂಲಕ ಸಾಮಾಜಿಕ ಸಾಂಸ್ಕೃತಿಕ ಸಾಹಿತ್ಯಿಕ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿದೆ. ಒಂದು ಪ್ರಕಾಶನವು ಯಾವ ರೀತಿಯಲ್ಲಿ ಕಾರ್ಯ ಸಾಧನೆಯನ್ನು ಮಾಡುತ್ತದೆ ಎಂಬುದನ್ನು ಇಲ್ಲಿ ಚರ್ಚಿಸಲಾಗುವುದು.

ಅನುಪಮ ಪ್ರಕಾಶನವು ೧೯೮೭ರಲ್ಲಿ ಪ್ರಾರಂಭವಾಗಿ ಇಲ್ಲಿಯವರೆಗೆ ೪೧ ಪುಸ್ತಕಗಳನ್ನು ಲೋಕಾರ್ಪಣೆ ಮಾಡಿದೆ. ಈ ಪ್ರಕಾಶನವು ಗಡಿನಾಡಿನಲ್ಲಿ ಅಷ್ಟೇ ಅಲ್ಲದೇ ನಾಡಿನ ಜನರಿಗೆ ಹಲವಾರು ತೆರನಾದ ಪುಸ್ತಕಗಳ ಸೌಲಭ್ಯವನ್ನು ಕೊಡಲು ಮುಂದಾಗಿದೆ ಎಂಬುದು ಕೃತಿಗಳಿಂದ ಅರಿತುಕೊಳ್ಳಬಹುದಾಗಿದೆ. ಅನುಪಮ ಪ್ರಕಾಶನವು ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದ ಕೃತಿಗಳು ಮಹತ್ತರವಾಗಿದೆ. ಪ್ರಕಾಶನ ಆ ಪ್ರಕಟಣೆಗಳನ್ನು ಸಾಹಿತ್ಯಿಕವಾಗಿ ಅಧ್ಯಯನಿಸಲಾಗಿದೆ.

❖❖❖❖❖

ಅಧ್ಯಾಯ – ಎರಡು :

ಅನುಪಮ ಪ್ರಕಾಶನ ನಡೆದು ಬಂದ ದಾರಿ

ಅಧ್ಯಾಯ – ಎರಡು :

ಅನುಪಮ ಪ್ರಕಾಶನ ನಡೆದು ಬಂದ ದಾರಿ

ಪ್ರವೇಶ :

"ಅನುಪಮ ಪ್ರಕಾಶನ"ವು ಕರ್ನಾಟಕದ ಬೆಳಗಾವಿ ಜಿಲ್ಲೆಯ ಉತ್ತರದ ಅಥಣಿ ಪ್ರದೇಶದಲ್ಲಿದೆ. ಇಂದು ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳ ಗಡಿ ಭೂಭಾಗವಾಗಿದೆ. ಇಲ್ಲಿಯ ಜನಕ್ಕೆ ಮರಾಠಿ ಮತ್ತು ಮಹಾರಾಷ್ಟ್ರದೊಂದಿಗೆ ನಿತ್ಯದೊಡನಾಟ. ಮರಾಠಿಯ ಪ್ರಭಾವ–ವಿಜೃಂಭಣೆಗಳ ಮಧ್ಯೆ ಕ್ನನಡ ಸಾಹಿತ್ಯ ಸಂಸ್ಕೃತಿಗಳನ್ನು ಅರ್ಥಪೂರ್ಣವಾಗಿ ಜೀವಂತವಾಗಿಡುವ ಕಾರ್ಯ ಅತ್ಯಂತ ಪ್ರಸ್ತುತ ಮತ್ತು ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ವೃತ್ತಿಯಿಂದ ಕನ್ನಡ ಅಧ್ಯಾಪಕರಾದ ಪ್ರೊ. ಸಿದ್ದಣ್ಣ ಉತ್ನಾಳ ಪ್ರವೃತ್ತಿಯಿಂದ ಕನ್ನಡ ಕೈಂಕರ್ಯ ದೀಕ್ಷಾ ವ್ರತವನ್ನು ತೊಟ್ಟ ಋಜು ಸ್ವಭಾವದ ಧೀಮಂತ ವ್ಯಕ್ತಿ. ಕನ್ನಡ ಸಾಹಿತ್ಯ–ಸಂಸ್ಕೃತಿಗಳ ಪ್ರಚಾರ–ಪ್ರಸಾರ ಕೈಕೊಳ್ಳುವ ನಿಟ್ಟಿನಲ್ಲಿ ಇವರು ಕಳೆದ ಮೂರು ದಶಕಗಳಿಂದ ತಮ್ಮ 'ಅನುಪಮ ಪ್ರಕಾಶನ'ದ ಮೂಲಕ ಗಡಿನಾಡಿನಲ್ಲಿ ಕನ್ನಡ ಸಾಹಿತ್ಯ ಸಂವರ್ಧನೆಯ ಉದಾತ್ತ ಸೇವೆಯನ್ನು ಕೈಗೊಂಡಿದ್ದಾರೆ.

ಅನುಪಮ ಪ್ರಕಾಶನದ ಉದಯ :

ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳ ಗಡಿಭೂಭಾಗವಾದ ಅಥಣಿಯಲ್ಲಿ ಪ್ರೊ. ಸಿದ್ದಣ್ಣ ಉತ್ನಾಳ ಅವರು ೧೯೮೭ರಲ್ಲಿ 'ಅನುಪಮ ಪ್ರಕಾಶನ' ಸಂಸ್ಥೆಯನ್ನು ಸ್ಥಾಪಿಸಿದರು. ಈ ಪ್ರಕಾಶನದ ಮೂಲಕ ಕನ್ನಡ ಪುಸ್ತಕಗಳನ್ನು ಪ್ರಕಟಿಸುವ ಸಾಹಸಕ್ಕೆ ಕೈ ಹಾಕಿದ ಪ್ರೊ. ಉತ್ನಾಳ ಅವರು ಈವರೆಗೆ ೪೧ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಹವ್ಯಾಸಿ ಪ್ರಕಾಶನ ಸಂಸ್ಥೆಯನ್ನು ನಡೆಸುವುದು ದುರ್ಭರವಾದ ಕ್ರಮಸಾಧ್ಯವಾದ ಕಾರ್ಯವೆಂದು ಗೊತ್ತಿದ್ದು ಅದನ್ನು ತುಂಬ

ಪ್ರೀತಿ, ಆಸಕ್ತಿಗಳಿಂದ ಮುನ್ನಡೆಸಿಕೊಂಡು ಬರುತ್ತಿರುವುದು ಇವರ ಸಾಹಸಿ ಸ್ವಭಾವಕ್ಕೆ ಪ್ರತೀಕವಾಗಿದೆ.

೧೯೯೦ರಲ್ಲಿ ಏಕಕಾಲದಲ್ಲಿ ೧೨ ಪುಸ್ತಕಗಳನ್ನು ಪ್ರಕಾಶನಗೊಳಿಸಿ ಕನ್ನಡ ಸಾರಸ್ವತ ಲೋಕದಲ್ಲಿ ಐತಿಹಾಸಿಕ ಸಾಧನೆ ಮಾಡಿದ್ದಾರೆ. ನಾಡಿನ ಅನೇಕ ಖ್ಯಾತ ಸಾಹಿತಿಗಳ ಪುಸ್ತಕಗಳನ್ನು ತಮ್ಮ ಅನುಪಮ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ.

ಕರ್ನಾಟಕ ಗಡಿ ಪ್ರದೇಶದಲ್ಲಿರುವ ಅಥಣಿ ಸಮೃದ್ಧ ಐತಿಹಾಸಿಕ ಹಿನ್ನೆಲೆ ಹೊಂದಿರುವ ನಗರ. ಇಂದು ಕನ್ನಡಿಗರ ಭದ್ರ ಕೋಟೆಯಾಗಿದೆ. ಅಥಣಿ ಶಿವಶರಣರ ನೆಲೆಬೀಡು, ವಿಜಯನಗರ ಚಕ್ರವರ್ತಿ ಪ್ರೌಢದೇವರಾಯನ ಕಾಲದಲ್ಲಿ ಪಲ್ಲವಿಸಿದ ನೂರೊಂದು ವಿರಕ್ತ ಮಠಗಳಲ್ಲಿ ಅಥಣಿಯ ಗಚ್ಚಿನ ಮಠವು ಒಂದಾಗಿದೆ. ಶ್ರೀಮಠದ ಧಾರ್ಮೀಕ, ಸಾಮಾಜಿಕ ಕ್ಷೇತ್ರಗಳಲ್ಲಿ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಮಠದ ಚೈತನ್ಯ ಶಕ್ತಿಯೇ ಪರಮ ತಪಸ್ವಿ ಶ್ರೀ ಮುರುಘೇಂದ್ರ ಶಿವಯೋಗಿಗಳವರು.

ಕನ್ನಡ ವಾಙ್ಮಯ ಪ್ರಪಂಚದಲ್ಲಿಯೂ ಅಥಣಿ ಸುಧೀರ್ಘ ಇತಿಹಾಸ ಹೊಂದಿದೆ. ಬಾಣಭಟ್ಟನ ಕಾದಂಬರಿಯನ್ನು ಕ್ನನಡಕ್ಕೆ ಅನುವಾದಿಸಿದ ಗಂಗಾಧರ ಮಡಿವಾಳೇಶ್ವರ ತುರುಮುರಿಯವರು ಅಥಣಿಯ ಪರಿಸರದವರು. ದಿ. ಮಿರ್ಜಿ ಅಣ್ಣಾರಾಯ, ದಿ. ಮನೋಹರ ದೇಶಪಾಂಡೆ, ಆರ್. ಪಿ. ಕುಲಕರ್ಣಿ, ಭುಜೇಂದ್ರ ಮಹಿಷವಾಡಿಗಿ, ಡಾ. ಬುದ್ದಣ್ಣ ಹಿಂಗಮಿರೆ, ಡಾ. ಎಸ್. ಪಿ. ಪಾಟೀಲ ಕನ್ನಡ ಕಾಳಿದಾಸರೆಂದೇ ಖ್ಯಾತರಾದ ಶ್ರೀ ಮಲ್ಲಿಕಾರ್ಜುನ ಮೋಟಗಿ ಪುರಾಣ ರಚನಾಕಾರ ಶ್ರೀ ಮೋಹನ ಅಣೆಪ್ಪನವರ ಮುಂತಾದ ಸಾಹಿತಿಗಳನ್ನು ಅಥಣಿಯು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದೆ.

ಅಥಣಿಯ ಸಾಹಿತ್ಯಿಕ ಪರಂಪಯು ನಿರಂತರವಾಗಿದೆ. ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ, ಸುಭಾಷ ಮೋಟಗಿ, ಸಿದ್ಧರಾಜ ಪೂಜಾರಿ, ವಸಂತ ಕುಲಕರ್ಣಿ, ಡಾ. ಎಂ. ಬಿ. ಹೂಗಾರ, ಡಾ. ವ್ಹಿ. ಎಸ್. ಮಾಳಿ, ಡಾ. ಅಶೋಕ ನರೋಡೆ, ಡಾ. ಬಾಳಾಸಾಹೇಬ ಲೋಕಾಪೂರ, ಪ್ರಕಾಶ ಖೋತ, ಅಪ್ಪಾಸಾಹೇಬ ಅಲಿಬಾದಿ, ಎಸ್. ಕೆ. ಹೊಳೆಪ್ಪನವರ, ಡಾ. ಜೆ. ಪಿ. ದೊಡ್ಡಮನಿ ಮುಂತಾದವರು ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಗಮನಾರ್ಹವಾಗಿದೆ.

'ಅನುಪಮ ಪ್ರಕಾಶನ' ೧೯೮೭ರಲ್ಲಿ ಸ್ಥಾಪನೆಯಾಗಿ ಪ್ರಕಾಶನದ ಪ್ರಥಮ ಕೃತಿ ಪ್ರೊ. ಸಿದ್ದಣ್ಣ ಉತ್ನಾಳರ "ಶರಣ ಸೌರಭ" ಪ್ರಕಟವಾಯಿತು. ಎರಡನೆಯ ವರ್ಷದ ಅವಧಿಯಲ್ಲಿ ಮರು ಮುದ್ರಣವಾಯಿತು. ಖ್ಯಾತ ಸಾಹಿತಿ ಡಾ. ಸಿದ್ದಯ್ಯ ಪುರಾಣಿಕರ 'ಹಾಲ್ದೆನೆ' ಕವನ

ಸಂಕಲನವನ್ನು ಪ್ರಕಟಿಸಿದ ಕೀರ್ತಿ ಈ ಪ್ರಕಾಶನದು. ಬಾಪೂಜಿ ಜೀವನ ಕುರಿತು "ಅಹಿಂಸೆಯ ವಿಜಯ" ಬರೆದಿದ್ದಾರೆ. ಅದನ್ನು ಪ್ರಕಟಿಸಿದ ಶ್ರೇಯಸ್ಸು ಈ ಪ್ರಕಾಶನ ಸಂಸ್ಥೆಯದು.

ಶ್ರೀಮತಿ ಲೀಲಾ ಕಲಕೋಟಿ ಅವರ "ನನ್ನ ಧ್ವನಿ" ಕವನ ಸಂಕಲನ, ಶಾಂತಾದೇವಿ ಮುಳವಾಡರ ಜೀವನ ಚರಿತ್ರೆ 'ಶಾಂತಸಾಗರ'ವನ್ನು ಪ್ರಕಟಿಸಿದೆ. ಡಾ. ಎಂ. ಬಿ. ನೇಗಿನಹಾಳರು ಕೇಂದ್ರ ಸರ್ಕಾರದ ಸಹಾಯದಿಂದ ಸಮೀಕ್ಷೆ ನಡೆಸಿದ 'ಮೈಲಾರ ದೇವರ ದಿವ್ಯ ಕ್ಷೇತ್ರಗಳು' ಎಂಬ ಕೃತಿ ಹಾಗೂ ವಚನೋದ್ಯಾನ ಆಂಗ್ಲ ಭಾಷಾಂತರ ಕೃತಿಯು ಈ ಪ್ರಕಾಶನದಿಂದ ಪ್ರಕಟವಾಗಿದೆ.

ಅನುಪಮ ಪ್ರಕಾಶನ ೧೯೯೦ ಸೆಪ್ಟೆಂಬರ್ ೨೦ರಂದು ೧೨ ಕೃತಿಗಳನ್ನು ಬಿಡುಗಡೆಗೊಳಿಸಿತು. ಪ್ರಕಾಶನ ಕ್ಷೇತ್ರದಲ್ಲಿ ಇದೊಂದು ಐತಿಹಾಸಿಕ ದಾಖಲೆಯಾಗಿದೆ. ಡಾ. ಸಿದ್ದಯ್ಯ ಪುರಾಣಿಕ, ಡಾ. ಆರ್. ಸಿ. ಹಿರೇಮಠ, ಶ್ರೀಮತಿ ಶಾಂತಾದೇವಿ ಮುಳವಾಡ, ಮಹಾದೇವ ಬಣಕಾರ, ಡಾ. ಜಿ. ಎಸ್. ಸಿದ್ದಲಿಂಗಯ್ಯ, ಡಾ. ಜಚನಿ ಹಾಗೂ ಅವರ ಉತ್ತರಾಧಿಕಾರಿಯಾದ ಪ್ರೊ. ಎಸ್. ಎಂ. ವೀರಭದ್ರಯ್ಯ, ಶ್ರೀಮತಿ ಲೀಲಾ ಕಲಕೋಟಿ ಮುಂತಾದ ಸಾಹಿತ್ಯಿಕ ದಿಗ್ಗಜರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವೈಷ್ಣವ, ಜೈನ, ವೀರಶೈವ ಹಾಗೂ ಮಹಮ್ಮದೀಯ ಸಾಹಿತ್ಯ ಕೃತಿಗಳನ್ನು ಆನೆಯ ಮೇಲಿರಿಸಿ ಮೆರವಣಿಗೆ ಮಾಡಲಾಯಿತು. ಕೃತಿಗಳನ್ನು ಲೋಕಾರ್ಪಣೆ ಮಾಡಿ; ಡಾ. ಸಿದ್ದಯ್ಯ ಪುರಾಣಿಕರು "ಅಥಣಿಯ ಶ್ರೀ ಶಿವಯೋಗಿಗಳ ಪಾದಸ್ಪರ್ಶದಿಂದ ಆಧ್ಯಾತ್ಮಿಕ ಕ್ಷೇತ್ರವಾಯಿತು. ಈಗ 'ಅನುಪಮ ಪ್ರಕಾಶನ'ದಿಂದಾಗಿ ಸಾಹಿತ್ಯ ಕ್ಷೇತ್ರವಾಯಿತು" ಎಂದು ಹೃದಯ ತುಂಬಿ ನುಡಿದಿದ್ದರು. ಪ್ರಕಾಶನ ಕ್ಷೇತ್ರಗಳೆಂದರೆ ಬೆಂಗಳುರು, ಮೈಸೂರು, ಧಾರವಾಡವೆಂದು ತಿಳಿದಿದ್ದ ಜನತೆ ಅಥಣಿಯ ಕಡೆಗೆ ಬೆರಗುಗಣ್ಣುಗಳಿಂದ ನೋಡುವಂತೆ ಮಾಡಿತು. ಈ ಸಮಾರಂಭ ಎಂದು ಶಾಂತಾದೇವಿ ಮುಳವಾಡರು ಅಂತಃಕರಣ ತುಂಬಿ ನುಡಿದಿದ್ದು ಇದೀಗ ಇತಿಹಾಸವಾಗಿದೆ.

ಪ್ರೊ. ಸಿದ್ದಣ್ಣ ಉತ್ನಾಳರು ಅಥಣಿಯಲ್ಲಿ ಕನ್ನಡ ಅಧ್ಯಾಪಕರಾಗಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರಾಗಿದ್ದರು ದಣಿವರಿಯದ ಚೈತನ್ಯಚಿಲುಮೆಯಾಗಿದ್ದಾರೆ. ಅನುಪಮ ಪ್ರಕಾಶನವು ಕೃಷ್ಣಾತೀರದ ಸಾಹಿತ್ಯ ಹಾಗೂ ಕರ್ನಾಟಕ ಮಹಾರಾಷ್ಟ್ರದ ಸಂಸ್ಕೃತಿಯ ಭಾವೈಕ್ಯದ ಸಂವರ್ಧನೆಯನ್ನು ಅಭಿವ್ಯಕ್ತಿಗೊಳಿಸುವ ಸಾಹಿತ್ಯವನ್ನು ಪ್ರಕಟಿಸಲು ಈ ಪ್ರಕಾಶನವು ಸದಾ ಸಿದ್ಧವಾಗಿದೆ. ಗಡಿನಾಡಿನ ಸಾಹಿತ್ಯ ಕ್ಷೇತ್ರದಲ್ಲಿ ವಾಙ್ಮಯ ಸಂಪತ್ತಿನ ಹೊಳೆ ಹರಿಸಿ ಸಮೃದ್ಧಗೊಳಿಸಲು ನೆರವಾಗುತ್ತದೆ.

ಅನುಪಮ ಪ್ರಕಾಶನದ ಸಾಧನೆ :

ಭಾರತ ದೇಶ ಬಹು ಭಾಷೆಗಳ ತವರೂರು. ಕಾವೇರಿಯಿಂದ ಗೋದಾವರಿಯವರೆಗೆ ಬೆಳೆದ ಚೆಲುವ ಕನ್ನಡ ನಾಡು ಎಲ್ಲ ಭಾಷೆಗಳು ಸಹೋದರ ಭಾಷೆಗಳೆಂಬ ಸುವಿಚಾರದ ಸುಸಂಸ್ಕೃತವುಳ್ಳ ಕನ್ನಡಿಗರು. ಅಂತಹ ನಾಡಿನಲ್ಲಿ ಸ್ಥಾಪನೆಯಾದ 'ಅನುಪಮ ಪ್ರಕಾಶನ'ದ ಸಾಧನೆ ಅಪಾರವಾಗಿದೆ.

'ಅನುಪಮ ಪ್ರಕಾಶನ'ವು ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಮಹಾ ಮಹೀಮರ್ನನು, ಮಹಾಪುರುಷರನ್ನು ನಾಡಿಗೆ ಪರಿಚಯಿಸಿದೆ. ಪ್ರಕಾಶನದ ಮೊದಲ ಪುಸ್ತಕ ಪ್ರೊ. ಸಿದ್ದಣ್ಣ ಉತ್ನಾಳರ 'ಶರಣ ಸೌರಭ' ಕೃತಿ ಎರಡೇ ವರ್ಷದಲ್ಲಿ ಮರುಮುದ್ರಣ ಮಾಡಿದ ಶ್ರೇಯಸ್ಸು ಈ ಪ್ರಕಾಶನದಾಗಿದೆ. 'ಜನತೆಯ ಜೀವಶಕ್ತಿ', 'ಕರ್ನಾಟಕ ಕೇಸರಿ' ಐದು ಸಾವಿರ ಪ್ರತಿಗಳನ್ನು ಪ್ರಕಟಿಸಿದುದು ಗಡಿನಾಡಿನ ಕನ್ನಡ ಸಾರಸ್ವತ ಲೋಕದಲ್ಲಿ ಅವಿಸ್ಮರಣೀಯ ದಾಖಲೆಯಾಗಿದೆ.

ಪ್ರಕಾಶನವು ಕೇವಲ ಕನ್ನಡ ಸಾಹಿತ್ಯ ಕೃತಿಗಳಿಗೆ ಮೀಸಲಾಗಿರದೇ ಕಾವ್ಯಾನಂದರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿ "ವಚನೋದ್ಯಾನ"ವನ್ನು ಆಂಗ್ಲ ಭಾಷೆಯ ಪಂಡಿತ ಪ್ರಾಚಾರ್ಯ ಡಿ. ವ್ಹಿ. ಪೋತದಾರರವರಿಂದ ಇಂಗ್ಲೀಷಕ್ಕೆ ತರ್ಜುಮೆ ಮಾಡಿ ಪ್ರಕಟಿಸಿದಕ್ಕೆ ಬಹುಭಾಷಾ ಸ್ನೇಹ ಸಂವರ್ಧನದ ಕೂಟವೇ ಈ ಪ್ರಕಾಶನವೆಂದು ಹೇಳಿದರೆ ತಪ್ಪಾಗಲಾರದು. ೧೯೯೨ರಲ್ಲಿ ಏಕಕಾಲದಲ್ಲಿ ೫ ಕೃತಿಗಳನ್ನು ಪ್ರಕಾಶಿಸಿದ್ದಲ್ಲದೆ ಅದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ಜೈನ ವೀರಶೈವ, ಬ್ರಾಹ್ಮಣ ಹಾಗೂ ಮಹಮ್ಮದೀಯ ಸಾಹಿತ್ಯ "ಷಹಿದೇ ಕರ್ಬಲಾ" ಕೋಮು ಸೌಹಾರ್ದತೆಯ ಸಂಕೇತವಾದ ಈ ಕೃತಿಗಳನ್ನು ಪ್ರಕಟಿಸಿದ ಸಾಧನೆ ಈ ಪ್ರಕಾಶನದಾಗಿದೆ.

✡✡✡✡✡

ಅಧ್ಯಾಯ – ಮೂರು :

ಅನುಪಮ ಪ್ರಕಾಶನದ ಪ್ರಕಟಣೆಗಳು

ಅಧ್ಯಾಯ – ಮೂರು :

ಅನುಪಮ ಪ್ರಕಾಶನದ ಪ್ರಕಟಣೆಗಳು

ಪ್ರವೇಶ :

ಪ್ರಕಾಶನ ಕೀರ್ತಿಗೆ ಮುಕುಟ ಪ್ರಾಯವಾದ ಮತ್ತು ಜನಮಾನಸದಲ್ಲಿ ನಿರಂತರವಾಗಿ ನಿಲ್ಲಬಲ್ಲ ಮಹತ್ವದ ಇನ್ನೊಂದು ಹೆಜ್ಜೆ ಎಂದರೆ "ಅನುಪಮ ಪ್ರಕಾಶನ" ಪ್ರೊ ಸಿದ್ದಣ್ಣ ಉತ್ನಾಳರ ನೇತೃತ್ವದಲ್ಲಿ ಮುನ್ನಡೆದು ಬಂದ ಈ ಪ್ರಕಾಶನವು ಹಲವಾರು ಮೌಲಿಕ ಕೃತಿಗಳನ್ನು ಲೋಕಾರ್ಪಣೆ ಮಾಡಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ "ಅನುಪಮ ಪ್ರಕಾಶನ"ದ ಮೂಲಕ ದಿಟ್ಟ ಹೆಜ್ಜೆಗಳನ್ನಿರಿಸಿದ್ದಾರೆ.

ಸಾಮಾಜಿಕವಾಗಿ, ಸಾಹಿತ್ಯಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಎಲ್ಲ ಕ್ಷೇತ್ರಗಳಲ್ಲಿ ಹೊಸಬೆಳಕು ಮೂಡಿಸಿದೆ. ಅನುಪಮ ಪ್ರಕಾಶನದ ಸಂಸ್ಥಾಪಕರಾದ ಪ್ರೊ. ಸಿದ್ದಣ್ಣ ಉತ್ನಾಳರವರು ಇದನ್ನು ಸುವ್ಯವಸ್ಥಿತವಾಗಿ ಮುನ್ನಡೆಸಿಕೊಂಡು ಹೊರಟಿದ್ದಾರೆ. ಈ ಅನುಪಮ ಪ್ರಕಾಶವು ಇಲ್ಲಿಯವರೆಗೆ ಪುಸ್ತಕಗಳನ್ನು ಓದುಗರಿಗೆ ಅರ್ಪಣೆ ಮಾಡಿದೆ. ಅನುಪಮ ಪ್ರಕಾಶನದ ಗ್ರಂಥಗಳ ಯಾದಿಯು ಈ ಕೆಳಗಿನಂತಿದೆ.

ಅನುಪಮ ಪ್ರಕಾಶನದ ಪ್ರಕಟಣೆಗಳು ಹೀಗಿವೆ :

೧)	ಶರಣ ಸೌರಭ	–	ಪ್ರೊ. ಎಸ್. ಬಿ. ಉತ್ನಾಳ	೧೯೮೭
೨)	ಶಿವಯೋಗಿ ಶಿವಲೀಲೆ	–	ಶ್ರೀ ಎಮ್. ಎಸ್. ಆಣೆಪ್ಪನವರ	೧೯೮೯
೩)	ಷಹೀದೆ ಕರ್ಬಲಾ	–	ದಿ. ಶ್ರೀ ಜಿ. ಎಸ್. ಹುರಳಿ	೧೯೯೦
೪)	ಕನ್ನಡ ಕಾದಂಬರಿಗಳಲ್ಲಿ ಪ್ರವೇಶಿಕತೆ	–	ಪ್ರೊ. ಎಸ್. ಬಿ. ಉತ್ನಾಳ	೧೯೯೦
೫)	ಅಥಣಿಶ್ರೀ ಮುರುಘೇಂದ್ರ ಶಿವಯೋಗಿಗಳವರ ಚರಿತ್ರೆ	–	ಲೇ: ಹಿರೇಮಠದ ವೇ ರುದ್ರಾಶಾಸ್ತ್ರಿಗಳು	೧೯೯೦
		–	ಪ್ರೊ. ಎಸ್. ಬಿ. ಉತ್ನಾಳ	೧೯೯೦

೬)	ರುದ್ರಪುತ್ರ ವೀರಭದ್ರ	–	ಶ್ರೀ ಎಮ್. ಎಸ್. ಆಣೆಪ್ಪನವರ	೧೯೯೦
೭)	ಹಾಲ್ದೆನೆ	–	ಡಾ. ಸಿದ್ದಯ್ಯ ಪುರಾಣಿಕ	೧೯೯೦
೮)	ಸತ್ತಿ ವೆಂಕಟಪ್ಪನವರ ವಂಶ ರಹಸ್ಯ	–	ಶ್ರೀ ಎ. ಎಸ್. ಕುಲಕರ್ಣಿ	೧೯೯೦
೯)	ಶಾಂತ ಸಾಗರ	–	ಶ್ರೀಮತಿ ಲೀಲಾ ಕಲಕೋಟಿ	೧೯೯೦
೧೦)	ಜೈನ ಜನಪದ ಹಾಡುಗಳು	–	ಶ್ರೀ ಎಸ್. ಬಿ. ಉತ್ನಾಳ	೧೯೯೦
೧೧)	ನನ್ನ ಧ್ವನಿ	–	ಶ್ರೀಮತಿ ಲೀಲಾ ಕಲಕೋಟಿ	೧೯೯೦
೧೨)	ರುದ್ರಪುತ್ರ ಅಣಿವೀರಭದ್ರ	–	ಶ್ರೀ ಎಮ್. ಎಸ್. ಆಣೆಪ್ಪನವರ	೧೯೯೦
೧೩)	ಮರುಳಶಂಕರ ದೇವರು	–	ಶ್ರೀ ಎಮ್. ಎಸ್. ಆಣೆಪ್ಪನವರ	೧೯೯೦
೧೪)	ಕರ್ನಾಟಕ ಕೇಸರಿ	–	ಶ್ರೀ ಲಕ್ಷ್ಮಣ. ಎಸ್. ಬಳ್ಳೊಳ್ಳಿ	೧೯೯೧
೧೫)	ಮೈಲಾರ ದೇವರ ದಿವ್ಯ ಕ್ಷೇತ್ರಗಳು	–	ಡಾ. ಎಂ. ಬಿ. ನೇಗಿನಹಾಳ	೧೯೯೧
೧೬)	ವಚನೋದ್ಯಾನ	–	ಡಾ. ಸಿದ್ದಯ್ಯ ಪುರಾಣಿಕ	೧೯೯೧
೧೭)	ಬಸವಸ್ತೋತ್ರ	–	ಶ್ರೀ ಶರಣ ಸಿದ್ದರಾಮಣ್ಣನವರು	೧೯೯೧
೧೮)	ಧನ್ವಂತರಿ ಹಾಡು	–	ಡಾ. ವಸಂತ ಕುಲಕರ್ಣಿ	೧೯೯೨
೧೯)	ಅರವಳ್ಳಿ ಮಲ್ಲಿಗೆ	–	ಶ್ರೀ ಲಕ್ಷ್ಮಣ. ಎನ್. ಬಳ್ಳೊಳ್ಳಿ	೧೯೯೨
೨೦)	ಶ್ರೀ ಬಿಸಿಲಸಿದ್ಧೇಶ್ವರ ಲೀಲೆ	–	ಶ್ರೀ ಲಕ್ಷ್ಮಣ. ಎನ್. ಬಳ್ಳೊಳ್ಳಿ	೧೯೯೨
೨೧)	ಅಹಿಂಸೆಯ ವಿಜಯ	–	ಶ್ರೀ ವೀ. ಅ. ಸರಗಣಾಚಾರಿ	೧೯೯೨
೨೨)	ದಾಸ ಭಕ್ತಿ	–	ಪ್ರೊ. ಎಸ್. ಬಿ. ಉತ್ನಾಳ	೧೯೯೨
೨೩)	ಶರಣ ದಾಸರ ಭಕ್ತಿ	–	ಪ್ರೊ. ಎಸ್. ಬಿ. ಉತ್ನಾಳ	೧೯೯೨
೨೪)	ಗುಡ್ಡಾಪೂರ ದಾನಮ್ಮ	–	ಪ್ರೊ. ಎಸ್. ಬಿ. ಉತ್ನಾಳ	೧೯೯೪
೨೫)	ಗ್ರಾಮ ಸ್ವರಾಜ್ಯ	–	ಶ್ರೀ ಶಿವದೇವ ಒಡೆಯರ	೧೯೯೪
೨೬)	ಡಾ. ಎನ್. ಎಸ್. ಬಿರಾದಾರ	–	ಡಾ. ದೇವೇಂದ್ರ ಕುಮಾರ ಹಕಾರಿ	೧೯೯೭
೨೭)	ಶ್ರೀ ಮದಘಣಿ ಮುರುಘೇಂದ್ರ ಶಿವಯೋಗಿಗಳು	–	ಪ್ರೊ. ಎಸ್. ಬಿ. ಉತ್ನಾಳ	೧೯೯೭
೨೮)	ಲಚ್ಯಾಣ ಶ್ರೀ ಸಿದ್ಧಲಿಂಗ ಮಹಾರಾಜರು	–	ಪ್ರೊ. ಎಸ್. ಬಿ. ಉತ್ನಾಳ	೧೯೯೭
೨೯)	ಜನತೆಯ ಶಿವಶಕ್ತಿ	–	ಶ್ರೀ ಲಕ್ಷ್ಮಣ. ಎನ್. ಬಳ್ಳೊಳ್ಳಿ	೧೯೯೮
೩೦)	ಶಿವಶರಣ ಮಹಾಪ್ರಸಾದಿ ಡೋಹರ ಕಕ್ಕಯ್ಯ	–	ಲೇ: ಗುಂಬೀಶಂ	೨೦೦೧
೩೧)	ಕಾರ್ಗಿಲ್ ಕದನ ವೀರಗಾಥೆ	–	ಶ್ರೀ ವಾಯ್. ಸಿ. ಬನ್ನಪ್ಪಗೋಳ	೨೦೦೧

೩೨)	ದಳವಾಯಿ	–	ಪ್ರೊ. ಎಸ್. ಬಿ. ಉತ್ನಾಳ	೨೦೦೨
೩೩)	ಬಾಳ ಸಂಗಾತಿ	–	ಕು. ರಶ್ಮಿ. ದು. ಮಾಚಕನೂರ	೨೦೦೨
೩೪)	ಗಾಲಿಬ್ ಗಜಲ್	–	ಶ್ರೀ ವಿಜಯ. ಎಸ್. ಕರೋಲಿ	೨೦೦೬
೩೫)	ಸ್ಮೃತಿಗಂಧ	–	ಶ್ರೀ ವಿಜಯ. ಎಸ್. ಕರೋಲಿ	೨೦೦೬
೩೬)	ಭಕ್ತಾಮರ ಸ್ತೋತ್ರ	–	ಶ್ರೀ ವಿಜಯ. ಎಸ್. ಕರೋಲಿ	೨೦೦೬
೩೭)	ಮೂರು ರೇಡಿಯೋ ರೂಪಕಗಳು	–	ಶ್ರೀ ಆಯ್. ಬಿ. ಹಿರೇಮಠ	೨೦೦೬
೩೮)	ಶ್ರೀ ಮುರುಘೇಂದ್ರ ಮಹಾಶಿವಯೋಗಿಗಳು	–	ಶ್ರೀ ಬಿ. ಎಸ್. ಕಲ್ಯಾಣಿ	೨೦೦೬
೩೯)	ಖರೇ ಖರೇ ಸಂಗ್ಯಾಬಾಳ್ಯಾ	–	ಡಾ. ಅ. ರಾ. ಯಾರ್ದಿ	೨೦೦೮
೪೦)	ಕುಡು ಒಕ್ಕಲಿಗರು ಒಂದು ಕೈಪಿಡಿ	–	ಪ್ರೊ. ಎಸ್. ಬಿ. ಉತ್ನಾಳ	೨೦೦೯
೪೧)	ಕುಡು ಒಕ್ಕಲಿಗರು	–	ಪ್ರೊ. ಎಸ್. ಬಿ. ಉತ್ನಾಳ	೨೦೧೨

✡✡✡✡✡

ಅಧ್ಯಾಯ – ನಾಲ್ಕು :

ಪದ್ಯ ಸಾಹಿತ್ಯದ ಅಧ್ಯಯನ

ಅಧ್ಯಾಯ – ನಾಲ್ಕು :

ಪದ್ಯ ಸಾಹಿತ್ಯದ ಅಧ್ಯಯನ

೧)	ಅಹಿಂಸೆಯ ವಿಜಯ	–	ಶ್ರೀ ವೀ. ಅ. ಸರಗಣಾಚಾರಿ
೨)	ಅಥಣಿ ಶ್ರೀ ಮುರುಘೇಂದ್ರ	–	ಲೇ: ಹಿರೇಮಠದ ವೇ ರುದ್ರಾಶಾಸ್ತ್ರಿಗಳು
	ಶಿವಯೋಗಿಗಳವರ ಚರಿತ್ರೆ	–	ಪ್ರೊ. ಎಸ್. ಬಿ. ಉತ್ನಾಳ
೩)	ಕಾರ್ಗಿಲ್ ಕದನ ವೀರಗಾಥೆ	–	ಶ್ರೀ ವಾಯ್. ಸಿ. ಬನ್ನಪ್ಪಗೋಳ
೪)	ಗಾಲಿಬ್ ಗಜಲ್	–	ಶ್ರೀ ವಿಜಯ. ಎಸ್. ಕರೋಲಿ
೫)	ಚಿನ್ಮಯ ಚೇತನ ಶ್ರೀ ಮದಥಣಿ		
	ಮುರುಘೇಂದ್ರ ಶಿವಯೋಗಿಗಳು	–	ಪ್ರೊ. ಎಸ್. ಬಿ. ಉತ್ನಾಳ
೬)	ಜೈನ ಜನಪದ ಹಾಡುಗಳು	–	ಪ್ರೊ. ಎಸ್. ಬಿ. ಉತ್ನಾಳ
೭)	ಧನ್ವಂತರಿ ಹಾಡು	–	ಡಾ. ವಸಂತ ಕುಲಕರ್ಣಿ
೮)	ದಾಸ ಭಕ್ತಿ	–	ಪ್ರೊ. ಎಸ್. ಬಿ. ಉತ್ನಾಳ
೯)	ನನ್ನ ಧ್ವನಿ	–	ಶ್ರೀಮತಿ ಲೀಲಾ ಕಲಕೋಟಿ
೧೦)	ಬಸವಸ್ತೋತ್ರ	–	ಶ್ರೀ ಶರಣ ಸಿದ್ದರಾಮಣ್ಣನವರು
೧೧)	ಭಕ್ತಾಮರ ಸ್ತೋತ್ರ	–	ಶ್ರೀ ವಿಜಯ. ಎಸ್. ಕರೋಲಿ
೧೨)	ಬಾಳ ಸಂಗಾತಿ	–	ಕುಮಾರಿ ರಶ್ಮಿ. ದು. ಮಾಚಕನೂರ
೧೩)	ಮರುಳ ಶಂಕರ ದೇವರು	–	ಶ್ರೀ ಎಮ್. ಎಸ್. ಅಣೆಪ್ಪನವರ
೧೪)	ರುದ್ರಪುತ್ರ ಅಣಿವೀರಭದ್ರ	–	ಶ್ರೀ ಎಮ್. ಎಸ್. ಆಣೆಪ್ಪನವರ
೧೫)	ರುದ್ರಪುತ್ರ ವೀರಭದ್ರ	–	ಶ್ರೀ ಎಮ್. ಎಸ್. ಆಣೆಪ್ಪನವರ
೧೬)	ಶಿವಯೋಗಿ ಶಿವಲೀಲೆ	–	ಶ್ರೀ ಎಮ್. ಎಸ್. ಆಣೆಪ್ಪನವರ

೧೭) ಶಿವಶರಣ ಮಹಾಪ್ರಸಾದಿ ಡೋಹರ ಕಕ್ಕಯ್ಯ – ಲೇ: ಗುಂಬೀಶಂ
೧೮) ಸ್ಮೃತಿಗಂಧ – ಶ್ರೀ ವಿಜಯ. ಎಸ್. ಕರೋಲಿ
೧೯) ಹಾಲ್ದೆನೆ – ಡಾ. ಸಿದ್ದಯ್ಯ ಪುರಾಣಿಕ

೧) ಅಹಿಂಸೆಯ ವಿಜಯ :

ಶ್ರೀ ವೀ. ಅ. ಸರಗಣಾಚಾರಿ ಅವರು ರಚಿಸಿದ ಕಾವ್ಯ "ಅಹಿಂಸೆಯ ವಿಜಯ" ಸರಳರಗಳೆಯ ಶೈಲಿಯಲ್ಲಿ ಬರೆದ ಒಂದು ದಿವ್ಯಕಾವ್ಯ. ಈ ಕಾವ್ಯ ಗ್ರಂಥದ ವಿಷಯ ಮಹಾತ್ಮಾ ಗಾಂಧಿಯವರ ಸತ್ಯಾಗ್ರಹದ ಇತಿಹಾಸ ಅದರ ತಾತ್ವಿಕ ಹಿನ್ನೆಲೆ. ಅದರ ಸಾರ್ಥಕತೆಯ ಸಮಗ್ರ ನಿರೂಪಣೆಯಾಗಿದೆ. ಸತ್ಯಾಗ್ರಹ ಆರಂಭವಾದ ರೀತಿ ಅದರ ಹಿನ್ನೆಲೆಯಿಂದ ಆರಂಭವಾಗಿ ಭಾರತ ಸ್ವಾತಂತ್ರ್ಯದವರೆಗಿನ ಕಥೆಯನ್ನು ಅರ್ಥಪೂರ್ಣವಾಗಿ ಸತ್ವಯುತವಾಗಿ ಶ್ರೀ ಸರಗಣಾಚಾರಿ ಅವರು ಈ ಕಾವ್ಯದಲ್ಲಿ ಒಡಮೂಡಿಸಿದ್ದಾರೆ. ಈ ಕಾವ್ಯವನ್ನು ಓದುತ್ತಾ ಹೋದಂತೆ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹತ್ವದ ಪಾತ್ರವನ್ನಾಡಿದ ಅನೇಕ ವ್ಯಕ್ತಿಗಳ ಚಿತ್ರಗಳು ಸ್ಫುಟವಾಗಿ ಕಣ್ಮುಂದೆ ನಿಲ್ಲುತ್ತವೆ. ಈ ವ್ಯಕ್ತಿಗಳಲ್ಲಿ ನಡೆಯುವ ಸಂಭಾಷಣೆಗಳು ವಿಚಾರಗಳ ಸಂಘರ್ಷಣೆಯನ್ನು ಒಡಮೂಡಿಸುತ್ತವೆ. ಇವು ಅತ್ಯಂತ ಸ್ವಾಭಾವಿಕವಾಗಿ ನಿರೂಪಿಸಲ್ಪಟ್ಟಿವೆ. ಇದರಿಂದ ಇಲ್ಲಿಯ ನಿರೂಪಣೆಗೆ ಹೆಚ್ಚಿನ ಪರಿಸ್ಫುಟತೆ ಒದಗಿದಂತಾಗಿದೆ. ಇದನ್ನು ಬರೆದಿರುವ ಕವಿಯಲ್ಲಿ ತೀವ್ರವಾದ ರಾಷ್ಟ್ರಾಭಿಮಾನ ತುಂಬಿ ತುಳುಕುತ್ತದೆ. ಇದರ ಜೊತೆಗೆ ಭಾಷೆಯ ಮೇಲೆ ಒಳ್ಳೆ ಪ್ರಭುತ್ವ ಕವಿಗಿದೆ. ಅನೇಕ ಕಡೆಗೆ ಬರುವ ಗಾದೆಮಾತು ಅನುಭವೋಕ್ತಿಗಳ ಬಳಕೆಯಿಂದ ಕಾವ್ಯಕ್ಕೆ ಹೆಚ್ಚಿನ ಮೆರಗುಂಟಾಗಿದೆ. ಉದಾತ್ತ ಆದರ್ಶಗಳನ್ನು ಪ್ರಭಾವಶಾಲಿಯಾಗಿ ಹೇಳುತ್ತ ಭಾರತೀಯರ ಘನವಾದ ಆದರ್ಶಗಳನ್ನು ಎತ್ತಿ ತೋರಿಸುತ್ತಾನೆ. ಈ ಕಾವ್ಯದಲ್ಲಿ ಗಾಂಧೀಜಿಯವರಿಂದ ಆರಂಭವಾಗಿ ಭಾರತೀಯ ಸ್ವಾತಂತ್ರ್ಯದ ಉದಯದವರೆಗಿನ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದ ಸತ್ವಪೂರ್ಣವಾದ ನಿರೂಪಣೆಯಿದೆ.

ಓದುಗರ ನೆನಪಿನಲ್ಲಿ ಅಚ್ಚೊತ್ತಿ ನಿಲ್ಲುವಂತಹ ಮಂತ್ರರೂಪವಾದ ಮಾತುಗಳ ಕಾವ್ಯವಯ ಸರಳವಾಗಿ ಓದಿಸಿಕೊಂಡು ಹೋಗುತ್ತದೆ. ನಾಟಕೀಯವಾದ ಘಟನೆಗಳ, ವ್ಯಕ್ತಿಗಳ ಚಿತ್ರಣ ಕಾವ್ಯದುದ್ದಕ್ಕೂ ಕಂಡು ಬರುತ್ತದೆ.

ಈ ಕಾವ್ಯದಲ್ಲಿ ಪೀಠಿಕೆ ಹಾಗೂ ನಾಲ್ಕು ಅಧ್ಯಾಯಗಳಿವೆ. ಪೀಠಿಕೆಯಲ್ಲಿ ೧೧ ವಚನಗಳಿವೆ. ಈಶಸ್ತವನ, ಸರಸ್ವತಿಗೆ ನಮನ, ಕಾವ್ಯ ವಿಷಯದ ವೈಶಿಷ್ಟ್ಯತೆ, ಗಾಂಧಿಗೆ ನಮನ, ಕಾವ್ಯದ ಯೋಗ್ಯತೆ, ಓದುಗರಲ್ಲಿ ವಿನಂತಿ– ಇವು ವಚನಗಳ ಆಶಯವಾಗಿದೆ.

ನಾಲ್ಕು ಅಧ್ಯಾಯಗಳೆಂದರೆ :

೧) ಭಾರತೀಯ ನಿರೂಪಣೆ ೨) ಭಾರತೀಯ ನಿರ್ಧಾರಣೆ

೩) ಭಾರತೀಯ ಆರೋಹಣ ೪) ಭಾರತೀಯ ನಿರ್ವಹಣೆ

ಅವು ಸರಳ ರಗಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸುತ್ತವೆ; ಸಂವಾದನೆಯಲ್ಲಿ ಪ್ರಸ್ತಾವನೆಯು ಸಾಗುತ್ತದೆ. ಕಾರಣ ಪಾತ್ರಗಳು ನಿರ್ಮಾಣಗೊಂಡಿವೆ. ಸಂಭಾಷಣೆಗಳು ವಿಚಾರ ಪರಿಪ್ಲುತವಾಗಿವೆ; ತುಂಬಾ ನಾಟಕೀಯವಾಗಿವೆ. ದೇಶಿಯ ನುಡಿಗಳ ಚಂದ, ಅನುಭವೋಕ್ತಿಗಳ ಪ್ರಸಂಗವನ್ನು ಚಿತ್ರಿಸುವ ಅಂದ, ಕಾವ್ಯದ ಬೆಡಗನ್ನು ಸೂಸುತ್ತವೆ. ಕವಿಯಾತ್ಮವು ರಾಷ್ಟ್ರೀಯ ಭಾವನೆಯಿಂದ ಸ್ಪಂಧನಹೊಂದಿ ಹೊಮ್ಮಿದ ಸ್ವಚ್ಛಂದದಾನಂದ ಓದುಗರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತದೆ.

ಈ ಕಾವ್ಯದ ಪ್ರಥಮಾಧ್ಯಾಯದಲ್ಲಿ ನಾಲ್ಕು ಪಾತ್ರಗಳಿವೆ.

೧) ಭಾರತೀಯ

೨) ಬಡತನ

೩) ಭಾರತಿ

೪) ವೀರಭದ್ರ ದೇವರು ಅವತಾರಿ ಪವಾಡಪುರುಷ

ಹೀಗೆ ಭಾರತದ ಪಾರತಂತ್ರ್ಯದ ಬವಣೆಯು ಚಿತ್ರವನ್ನು ಬಡತನದಿಂದ ಹತಾಶೆಹೊಂದಿದ ಭಾರತೀಯರ ಜೀವನ ಚಿತ್ರವನ್ನು ಸ್ವಾತಂತ್ರ್ಯ ಸಂಗ್ರಾಮ ಭರತಿಗೊಂಡಿದ್ದನ್ನು ತಿಳಿಸಿ ಈ ಸಂಗ್ರಾಮದ ನಾಯಕನು ಗಾಂಧೀಯಾಗಿರುವುದನ್ನು ಹೇಳುವರು; ರಾಷ್ಟ್ರೀಯ ಭಾವನೆ ತೆರೆಗೊಂಡಿದ್ದನ್ನು ಅವರ ಕೆಳಗಿನ ನುಡಿಗಳಲ್ಲಿ ಕಾಣಬಹುದು. ಭಾರತೀಯನ ಮಾತು

"ಅವತಾರಿ ಬೇಕಿಲ್ಲ ಅವತಾರಿ ನಮಗಲ್ಲ
ನನ್ನ ವರವೀರ ಮಕ್ಕಳ ಗೆಲವಿನೊಲವಿಂದೆ
ಸಾಮ್ರಾಜ್ಯ ಕಟ್ಟುವೆನು ಸಾಮ್ರಾಜ್ಞೆಯಾಗುವೆನು
ಧರ್ಮ ಸಾಮ್ರಾಜ್ಯವನು ನೆಲಕೆಲ್ಲ ಹರವುವೆನು"

ಎಂಬ ನುಡಿಗಳಿಂದ ಭಾರತಿ ತನ್ನ ದೃಢಮನಸ್ಸಿನ ಒಲವುಗಳನ್ನು ಜಗತ್ತಿನ ಕಲ್ಯಾಣದ ಹಿತೇಚ್ಛೆಗಳನ್ನು ವಿಶಾದಪಡಿಸುವಳು. ದ್ವಿತೀಯಾಧ್ಯಾಯದಲ್ಲಿ ಭಾರತೀಯ, ಗಾಂಧೀ ಹಾಗೂ ಭಾರತಿ ಈ ಪಾತ್ರಗಳು ಬರುವವು. ಅಲ್ಲದೆ ಭಾರತೀಯು ಶಕ್ತಿಯಾಗಿ, ಗಾಂಧೀಯು ಆತ್ಮಶಕ್ತನಾಗಿ ಸಂವಾದಿಸುವರು.

"ರಕ್ತ ರಹಿತ ಕ್ರಾಂತಿ ಪ್ರಥ್ವಿಗಪರಿಚಿತ ಕ್ರಾಂತಿ'
"ಮುಕ್ತಿ ಪರಿಮಳಗೊಳ್ವ ಮಹಜೀವನೋತ್ಕ್ರಾಂತಿ'

ಇಲ್ಲಿ ಸಹಕಾರದಾಂದೋಲನದ ಅಹಿಂಸೆಯ ಅದ್ಭುತ ಪರಿಣಾಮವನ್ನು ಅರಿಯಬಹುದು.

"ಜಯದೇವ ನಿಯತಿ ನಿರ್ಭಯ ಜೀವನಕೆ'

"ಬೆಂಬಲವ ನೀಡುವನು ನಿಜವನು ಹರಸುವನು'

ಇಲ್ಲಿ ಹೋರಾಟದಲ್ಲಿಟ್ಟ ಅಚಲ ಶ್ರದ್ಧೆಯನ್ನು ಕಾಣಬಹುದು.

ತೃತೀಯ ಅಧ್ಯಾಯದಲ್ಲಿ ಗಾಂಧೀ, ಭಾರತೀಯ, ಕ್ರಾಂತಿಕಾರಿ ಹಾಗೂ ವಿಶ್ವಶಾಂತಿಯರು ಸಂವಾದಿಸುವರು.

"ಪುಕ್ಕತನ ಹೆಕ್ಕಬಲ್ಲ, ದಿಟ್ಟತನ ದಿಕ್ಕಬಲ್ಲ" ಗಾಂಧೀಯು

"ಹಸುಗೂಸುತನ ಶಿವಚೈತನ್ಯದಲಿ ಸಸಿಗೊಳಲಿ"

ಎಂದು ಹಾರೈಸಿ ಮಕ್ಕಳ ಸೇವೆಯನು ಕೈಕೊಳ್ಳುವನು.

"ನಿರಾಸೆಗೊಂಡವರಿಗೆ ಬದುಕುವಾಸೆ ಹುಟ್ಟಿಸಲು"

"ನಿರ್ಗಂಧದ ಜೀವಿಯಲ್ಲಿ ಸುಗಂಧದ ಸೆಲೆಯೊಡೆಸಲು"

"ನಿರ್ಗತಿಕ ಜೀವಿಯಲ್ಲಿ ಪ್ರಗತಿಕೋಡಿಹರಿಸಲು"

ಅವನ ಈ ಅಹಿಂಸೆಯು ಹೋರಾಟವಾಗಿಹುದು. ಅದು ಚರಮ ಘಟ್ಟಕ್ಕೆ ಮುಟ್ಟಿದ್ದು, "ಅದು ಚಂದ ಕಂಡದಾರಿಯಲಿ ಜನರ ಹೋರಾಟ ಕೈಕೊಳಲಿ" ಎಂಬ ಆತನ ಮಾತಿನಲ್ಲಿ ಧ್ವನಿತವಾಗುವುದು. "ಸಚ್ಚಿದಾನಂದ ಸ್ವಾತಂತ್ರ್ಯ ಲಭಿಸಲಿ" ಎಂಬುದೇ ಅವನ ಹಾರೈಕೆ.

ಸಂಚಾರಿ ಜೀವಿಗಳಾದ ವಿಶ್ವಶಾಂತಿ ಹಾಗೂ ಕ್ರಾಂತಿಕಾಳಿಯರ ಆಕಸ್ಮಿಕ ಸಮಾಗಮವಾಗುವುದು. ಅವರು ಹಿಂಸಾಹಿಂಸೆಗಳ ಇತಿಹಾಸವನ್ನೇ ಬಿಚ್ಚುವರು. ಅವುಗಳ ತುಲನಾತ್ಮಕವಾದ ಈ ಚರ್ಚೆಯು ಅಹಿಂಸೆಯು ಶ್ರೇಷ್ಠವೆಂಬ ಸಿದ್ಧಾಂತದಲ್ಲಿ ಕೊನೆಗೊಳ್ಳುವುದು.

ನಾಲ್ಕನೇ ಅಧ್ಯಾಯದಲ್ಲಿ ಗಾಂಧೀ, ಕ್ರಾಂತಿಕಾಳಿ, ವಿಶ್ವಶಾಂತಿ ಹಾಗೂ ಭಾರತಿ ಇವರು ಸಂಭಾಷಿಸುವರು. ವಿಶ್ವಶಾಂತಿಯ ಕನಸಿನಲ್ಲಿ ಕಂಡ ಆತ್ಮಗಳ ಸಮ್ಮೇಳನವು ಜರುಗುವುದು.

"ಅಹಿಂಸೆಯ ವಿಜಯ" ಕವಿ ವೀ. ಅ. ಸರಗಣಾಚಾರಿ ೧೯೫೨ರಲ್ಲಿ ಅನುಪಮ ಪ್ರಕಾಶನ ಅಥಣಿ.

೨) ಅಥಣಿ ಶ್ರೀ ಮುರುಘೇಂದ್ರ ಶಿವಯೋಗಿಗಳವರ ಚರಿತ್ರೆ :

ಲೇಖಕರಾದ ದಾವಣಗೆರೆ ಹಿರೇಮಠದ ವೀ. ರುದ್ರಶಾಸ್ತ್ರಿಗಳು ರಚಿಸಿದ "ಅಥಣಿ ಶ್ರೀ ಮುರುಘೇಂದ್ರ ಶಿವಯೋಗಿಗಳವರ ಚರಿತ್ರೆ ಮತ್ತು ಸ್ತೋತ್ರರೂಪವಾದ ಪದ್ಯಮಾಲಿಕೆ" ಎಂಬ ಕೃತಿಯನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಗಟ್ಟಿಗೊಂಡು ೧೯ನೆಯ ಶತಮಾಣದಲ್ಲಿ ಲಿಂಗಾಯತ ದಾರ್ಶನಿಕ ಪದಗಳಿಗೆ ಹೊಸಶಕ್ತಿ ತುಂಬಿ; ಜಗಕ್ಕೆಲ್ಲ ಜಂಗಮಜ್ಯೋತಿಯಾಗಿ ಬೆಳಗಿದವರು ಶ್ರೀ ಮುರುಘೇಂದ್ರ ಮಹಾಶಿವಯೋಗಿಗಳವರ ಚರಿತ್ರೆಯನ್ನು ಕಂದ ಮತ್ತು ವಾರ್ಧಕ ಷಟ್ಪದಿಯಲ್ಲಿ ಬರೆಯಲಾಗಿದೆ.

"ಶ್ರೀ ಮದ್ವಾತ ಕಾಂತೆಯು।
ಸೀಮಂತದ ರತ್ನಮೆಂಬೊಲಿಂಗಳಗಾವಿ॥
ಗ್ರಾಮದದೆಂಪ್ಪಿರ್ಪುದು ಸೆಲೆ।
ಸೋಮೇಶನ ಭಕ್ತರಿಮದೆ ಸಸ್ಯಾದಿಗಳಿಂ"೧

ಯಾವುದೇ ಸ್ಥಾನವು ಕ್ಷೇತ್ರವೆಂದು ಕರೆಯಲ್ಪಡಬೇಕಾದರೆ ಅಲ್ಲಿ ಪರಮಾತ್ಮನ ಭಕ್ತರಾದ ಸಾಧು ಸತ್ಪುರುಷರು ವಾಸವಾಗಿರಬೇಕು ಎಂಬುದನ್ನು ಕವಿಯು ಇಲ್ಲಿ ಸೂಚಿಸುವುದಕ್ಕಾಗಿ ಇಂಗಳಗಾವಿಯೋ ಸೋಮೇಶನ ಭಕ್ತರಿಂದ ಒಪ್ಪುತ್ತಿರುವುದು ಎಂದು ಹೇಳಿದ್ದಾನೆ. ಭಕ್ತರೆಲ್ಲಿಯೋ ಅಲ್ಲಿ ದುರ್ಭಿಕ್ಷೆಯು ಇರಲಾರದು ಎಂಬುದನ್ನು ಇಲ್ಲಿ ಕವಿಯು ಸ್ಪಷ್ಟವಾಗಿ 'ಸೋಮೇಶನ ಭಕ್ತರಿಂ ಸಸ್ಯದಿಗಳಿಂ" ಶೋಭಿಸುವುದೆಂದು ಹೇಳಿದ್ದಾನೆ.

"ರಾಚಾರ್ಯನವರ ಸಾಧ್ವಿಸ।
ದಾಚಾರರವನಾಂತು ಭರ್ತೃಭಕ್ತಿಯ ಬಲದಿಂ॥
ದಾಚರಿಪಳ್ನಿಜಗುಣ ಸುಕ।
ಲಾಚಯೆ ನೀಲಾಂಬೆ ನೀತಿಸಾರಕದಂಬೆ"೨

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಪತಿವ್ರತಾ ಧರ್ಮವು ಪ್ರಧಾನವಾದುದು. ಆ ಪಾತಿವ್ರತ್ಯದ ಬಲದಿಂದ ಜೀವನದಲ್ಲಿ ಸಾರ ಸರ್ವಸ್ವವು ಬರುವುದು. ಪತಿವ್ರತಾ ಸ್ತ್ರೀಯಳು ಸಮಾಜಕ್ಕೆ ರಾಷ್ಟ್ರಕ್ಕೆ ಇಷ್ಟೇ ಅಲ್ಲ ಮಾನವ ಕುಲಕ್ಕೆ ಸಾರವಿಶಿಷ್ಟವಾದ ಆಶ್ರಯ ಕೊಡುವ ವೃಕ್ಷದಂತೆ ಎಂದು ಕವಿಯು ಸೂಚಿಸುವುದಕ್ಕಾಗಿ ನೀಲಾಂಬೆಯ ಗುಣಗಳನ್ನು ಮುಕ್ತ ಮನಸ್ಸಿನಿಂದ ಹೊಗಳಿದ್ದಾನೆ.

ವಾರ್ಧಕ ಷಟ್ಪದಿಯಲ್ಲಿ,

---

೧. 'ಶ್ರೀ ಮುರುಘೇಂದ್ರ ಶಿವಯೋಗಿಗಳವರ ಚರಿತ್ರೆ' ಪದ್ಯ-೧, ಪುಟ-೨೨
೨. 'ಶ್ರೀ ಮುರುಘೇಂದ್ರ ಶಿವಯೋಗಿಗಳವರ ಚರಿತ್ರೆ' ಪದ್ಯ-೪, ಪುಟ-೨೪

“ಆರಾಧಿಸುವ ಪರಬ್ರಹ್ಮ ತೇಜಃಕಲಾ।
ಕಾರವಾರಂಗೊಂಡು ಪುಟ್ಟಿತೆನೆಪದಿನೆಂಟು।
ನೂರ ಮುವ್ವತ್ತಾರನೆಯ ಶಕವರ್ಷದೊಳ್ಗುರುಲಿಂಗ ನಾಮಾಂಕಿತ।
ಧಾರಣಿಯೊಳವತರಿಸಿ ಬಾಲಲೀಲೆಗಳಿಂದೆ।
ಮಾರಸೌಂದರ್ಯ ಮಂಜರೆಯುವಾಕೃತಿಯನುಂ
ಸಾರುತಾಪುತ್ರರೊಳೀತನಧಿಕ ಪ್ರೇಮ ಜೀವಿಯೇನೆ ರಂಜಿಸಿರ್ದಂ”[೩]

ಮಾನವ ಜೀವನದಲ್ಲಿ ಪ್ರೇಮ–ಕಾಮ ಎರಡೂ ಅವಳಿ ಮಕ್ಕಳು. ಸೌಂದರ್ಯವಿದ್ದಲ್ಲಿ ಪ್ರತಿಯೊಬ್ಬರ ಮನಸ್ಸು ಹರಿಯುವುದು ಸ್ವಾಭಾವಿಕ. ಅಂತೆಯೇ ಸುಂದರವಾದ ವಸ್ತುವಿಗೆ ಕಾಮನೆಂಬ ಹೆಸರು. ಆದರೆ ಈ ಕಾಮ ಪರಿಪೂರ್ಣವಾದ ಸೌಂದರ್ಯವನ್ನು ಪಡೆದವನಲ್ಲ. ಅದರಲ್ಲಿ ಪ್ರೇಮ ಸೇರಿದ್ದರೆ ಮಾತ್ರ ಈ ಕಾಮಕ್ಕೆ ಬೆಲೆ. ಅಂತೆಯೇ ಕವಿಯು ಈ ಕಾಮ–ಪ್ರೇಮ ಸಂಗಮವನ್ನು ತೋರಿಸಿದ್ದಾನೆ.

ಈ ಮುರುಘೇಂದ್ರ ಶಿವಯೋಗಿಗಳಿಗೆ ಭಕ್ತರೋದ್ಧಾರ ಭಾರ, ಭಾರ ಹೊತ್ತವರಿಗೆ ಸದಾಚಾರ ಕಠಿಣ ಎಂದು ತೋರಿಸಲು ಈ ಉದಾಹರಣೆಯನ್ನು ಕೊಟ್ಟಿದ್ದಾರೆ.

“ಪರಮಾತ್ಮನಿವನೆಂದು ನಿರುಸಲ್ಕೆಲರಂತು।
ಪರಮಸದ್ಗುರುವೆಂದು ಪೂಜಿಸಲ್ಕೆಲರಂತು।
ಹರಶರಣೆಂದು ಸಲೆಪಾಡಲ್ಕೆ ಕೆಲರಂತು ಭೂರಿ ಸಂತೋಷವಾಂತು॥
ಪರವಸ್ತುವೆಂದು ನೆರೆನುತಿಸಲ್ಕೆ ಕೆಲರಂತು।
ಚರಣಸನ್ನಿಧಿ ದರ್ಶನಕ್ಕೆಂದು ಕೆಲರಂತು।
ತರ ತರಂಗೊಳ್ಳುತಂ ಬರುತಿರ್ಪರನುದಿನಂ ಭಕ್ತಿಭಾವಸತ್ತರು”

ಇವರಲ್ಲಿ ಭಕ್ತಿಭಾವ ಹಾಗೂ ಬೇರೆ ಭಾವನೆಗಳಿಂದ ಜನ ಬರುತ್ತಾರೆ. ಈತ ‘ಬ್ರಹ್ಮಸ್ವರೂಪಿ’ ಎಂದು ಕೆಲವರು, ಮತ್ತೆ ‘ಸದ್ಗುರು’ ಎಂದು ಹಲವರು ಬರುತ್ತಾರೆ. ‘ಹರಶರಣ’ನೆಂದು ಹಾಡಲು ಕೆಲವರು ಬಂದರೆ; ಹಲವರು ಸಂತೋಷವೇ ಮೈದಾಳಿ ಬಂದ ಪರವಸ್ತುವೆಂದು ತಿಳಿದು ದರ್ಶನಕ್ಕಾಗಿ ಬರುವುದುಂಟು. ಅಂತೂ ಗುರು ಚರಣ ದರ್ಶನಕ್ಕಾಗಿ ಜನ ಬರುವಂತಾಗಿತ್ತು.

ಈ ಕೃತಿಯಲ್ಲಿ ಲೇಖಕರು ಸಾಹಿತ್ಯಿಕ, ಧಾರ್ಮಿಕ, ಚಿಂತನಾತ್ಮಕ ವೇದಿಕೆಯನ್ನು ಸೃಷ್ಟಿಸಿದ್ದಾರೆ. ಇಲ್ಲಿಯ ರಚನೆಗಳಿಂದ ಮನಗಾಣಬಹುದು.

---

೩. ‘ಶ್ರೀ ಮುರುಘೇಂದ್ರ ಶಿವಯೋಗಿಗಳವರ ಚರಿತ್ರೆ’ ಪದ್ಯ ೬, ಪುಟ ೨೬.
೪. ‘ಶ್ರೀ ಮುರುಘೇಂದ್ರ ಶಿವಯೋಗಿಗಳವರ ಚರಿತ್ರೆ’ ಪದ್ಯ ೯, ಪುಟ ೨೮.
೫. ‘ಶ್ರೀ ಮುರುಘೇಂದ್ರ ಶಿವಯೋಗಿಗಳವರ ಚರಿತ್ರೆ’ ಲೇ. ಹಿರೇಮಠದ ವೇ. ರುದ್ರಶಾಸ್ತ್ರಿಗಳು ೧೯೧೭ರಲ್ಲಿ ಅನುಪಮ ಪ್ರಕಾಶನ ಅಥಣಿ.

೩)   ಕಾರ್ಗಿಲ್ ಕದನ ವೀರಗಾಥೆ :

ಯಮನಪ್ಪ ಚಂದ್ರಾಮ ಬನ್ನಪ್ಪಗೋಳ ಅವರು ರಚಿಸಿದ "ಕಾರ್ಗಿಲ ಕದನ ವೀರಗಾಥೆ" ಎಂಬ ಕವನ ಹೊತ್ತಿಗೆಯನ್ನು ಅನುಪಮ ಪ್ರಕಾಶನವು ಪ್ರಕಟಿಸಿದೆ.

ಕಾರ್ಗಿಲ ಕದನ ಪ್ರಾರಂಭವಾದಂದಿನಿಂದ ಮುಗಿಯುವವರೆಗಿನ ಮಾಹಿತಿಯನ್ನು ಸಂಗ್ರಹಿಸಿ "ಕಾರ್ಗಿಲ ಕದನ ವೀರಗಾಥೆ" ಎಂಬ ಕವನ ಹೊತ್ತಿಗೆಯನ್ನು ತಯಾರಿಸಲಾಗಿದೆ.

ಭಾರತದ ಗಡಿಯೊಳಗೆ ನುಗ್ಗಿಬಂದ ಪಾಕ ಬೆಂಬಲಿತ ಉಗ್ರಗಾಮಿಗಳು ಮತ್ತು ಪಾಕ ಸೈನಿಕರನ್ನು ಹಿಮ್ಮೆಟ್ಟಿಸುವಲ್ಲಿ ಭಾರತೀಯ ಯೋಧರು ಯಶಸ್ವಿಯಾಗಿದ್ದಾರೆ. ಈ ಕಾರ್ಗಿಲ ಕಾರ್ಯಾಚಾರಣೆಯಲ್ಲಿ ನೂರಾರು ಭಾರತೀಯ ಯೋಧರು ಹುತಾತ್ಮರಾದರು ಇಂತಹ ವೀರಮರಣವನ್ನಪ್ಪಿದ ಸೈನಿಕರಲ್ಲಿ ೧೮ ಜನ ಕರ್ನಾಟಕದವರಿದ್ದಾರೆ. ಅವರಲ್ಲಿ ಎಂಟು ಜನ ಬೆಳಗಾವಿ ಜಿಲ್ಲೆಯವರಿದ್ದಾರೆ. ಇಬ್ಬರು ಬಾಗಲಕೋಟೆ ಜಿಲ್ಲೆಯವರಿದ್ದಾರೆ, ಒಬ್ಬರು ವಿಜಾಪೂರ ಜಿಲ್ಲೆಗೆ ಸೇರಿದವರಾಗಿದ್ದಾರೆ, ಏಳು ಜನ ಕರ್ನಾಟಕದ ವಿವಿಧ ಜಿಲ್ಲೆಗಳಿಗೆ ಸೇರಿದ್ವರಾಗಿದ್ದಾರೆ.

ದೇಶದ ಗಡಿಕಾಯ್ದು ಹುತಾತ್ಮರಾದ ಅವರನ್ನು ನೆನೆಯುವುದು ನಾಗರಿಕರೆಲ್ಲರ ಪವಿತ್ರ ಕರ್ತವ್ಯವಾಗಿದೆ. ಹುತಾತ್ಮರ ಪರಿಚಯವನ್ನು ಇಲ್ಲಿ ಬಿಡಿಬಿಡಿಯಾಗಿ ತೋರಿಸಲಾಗಿದೆ.

೪)   ಗಾಲಿಬ್ ಗಝಲ :

ವಿಜಯ ಎಸ್. ಕರೋಲಿ ಅವರು ಗಾಲಿಬ ಗಝಲಗಳನ್ನು ಉರ್ದುವಿನಿಂದ ಕನ್ನಡಕ್ಕೆ ಅನುವಾದ ಮಾಡಿದರು. ಇದನ್ನು ಅನುಪಮ ಪ್ರಕಾಶನದವರು ಮಾಡಿದ್ದಾರೆ.

ಗಾಲಿಬ ಉರ್ದು ಸಾಹಿತ್ಯದ ಶ್ರೇಷ್ಠಕವಿ. ಭಾರತೀಯ ಉರ್ದು ಸಾಹಿತ್ಯದ ಉದಿತೋದಿತ ಸೂರ್ಯ ಗಾಲಿಬ ಎಂದರೆ ಅತಿಶಯೋಕ್ತಿಯಲ್ಲ. ಆತನ ಗಝಲಗಳು ಪ್ರೇಮ ಸಾಹಿತ್ಯದ ರಸಬುಗ್ಗೆಗಳಾಗಿವೆ. 'ಗಾಲಿಬ ಗಝಲ'ಗಳನ್ನು ಅತ್ಯಂತ ಪ್ರೇಮದಿಂದ ಕನ್ನಡಕ್ಕೆ ತಂದವರು ವಿಜಯ ಎಸ್. ಕರೋಲಿ ಅವರು. ಉರ್ದು ಗಝಲಗಳನ್ನು ಕನ್ನಡಕ್ಕೆ ತರುವುದು ಕಷ್ಟಸಾಧ್ಯವೇ ಸರಿ. ಆದರೆ, ಕರೋಲಿ ಅವರು ಧ್ಯಾನಮುಖದಿಂದ ಪ್ರೇಮಮಯಿಯಾಗಿ ತಂದಿದ್ದಾರೆ. ಸಖ–ಸಖಿಯರ ಒಳತುಡಿತ, ಪ್ರೇಯಸಿಯ ಮಾನಸಿಕ ತೊಳಲು, ಪ್ರಿಯಕರನ ಹಂಬಲ ಇವೆಲ್ಲವೂ ಇಲ್ಲ ರಸದ ಮಡುವಿನಲ್ಲಿ ನೆಲೆ ನಿಂತಿದೆ. ಸಹೃದಯರು ಕನ್ನಡ–ಉರ್ದು ಸಾಹಿತ್ಯದ ಪ್ರಾಜ್ಞರು ಆದ ಕರೋಲಿ 'ಗಾಲಿಬ ಗಝಲ'ಗಳನ್ನು ಕನ್ನಡಕ್ಕೆ ಕೊಟ್ಟ ಗಝಲ ಸಾಹಿತ್ಯದ ಸಮೃದ್ಧಿಗೆ ಕಾರಣರಾಗಿದ್ದಾರೆ.

---

೧. ಕಾರ್ಗಿಲ ಕದನ ವೀರಗಾಥೆ ಲೇ. ವಾಯ್. ಸಿ. ಬನ್ನಪ್ಪಗೋಳ ೨೦೦೧ರಲ್ಲಿ ಅನುಪಮ ಪ್ರಕಾಶನ ಅಥಣಿ
೨. "ಗಾಲಿಬ ಗಝಲ" ಅನುವಾದಿಕ ವಿ. ಎಸ್. ಕರೋಲಿ ೨೦೦೬ರಲ್ಲಿ ಅನುಪಮ ಪ್ರಕಾಶನ ಅಥಣಿ.

೫) **ಚಿನ್ಮಯ ಚೇತನ ಶ್ರೀ ಮದಥಣಿ ಮುರುಘೇಂದ್ರ ಶಿವಯೋಗಿಗಳು :**

ಪ್ರೊ. ಸಿದ್ದಣ್ಣ ಉತ್ನಾಳರವರು ರಚಿಸಿರುವ "ಚಿನ್ಮಯ ಚೇತನ ಶ್ರೀ ಮರಥಣಿ ಮುರುಘೇಂದ್ರ ಶಿವಿಯೋಗಿಗಳು" ಎಂಬ ಚರಿತ್ರಾತ್ಮಕ ಕೃತಿಯನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಗಟ್ಟಿಗೊಂಡು ೧೯ನೆಯ ಶತಮಾನದಲ್ಲಿ ಸವಕಲಾದ ವೀರಶೈವ ದಾರ್ಶನಿಕ ಪದಗಳಿಗೆ ಹೊಸ ಶಕ್ತಿ ತುಂಬಿ; ಜಗಕ್ಕೆಲ್ಲ ಜಂಗಮಜ್ಯೋತಿಯಾಗಿ ಬೆಳಗಿದವರು ಶ್ರೀ ಮುರುಘೇಂದ್ರ ಮಹಾಶಿವಯೋಗಿಗಳು.

ಜ್ಯೋತಿ ಕತ್ತಲೆಯಲ್ಲಿ ಭಾತಿಯಿಂದುರಿವಂತೆ
ಪ್ರೀತಿಯಿಂದೆಸೆವ ಶಿವಯೋಗಿ ಜಗಕ್ಕೆಲ್ಲ
ಜ್ಯೋತಿ ತಾನಕ್ಕು ಸರ್ವಜ್ಞ

ಜಗವೆಲ್ಲ ಶಿವಾನುಭವ ಸೌರಭದಿಂದ ಹನ್ನೆರಡನೆಯ ಶತಮಾನಶಕ್ತಿ ಮರುಕಳಿಸಿತು. ಶಿವಯೋಗದ ಸ್ವರೂಪವು ಶ್ರೀ ಮದಥಣಿ ಮುರುಘೇಂದ್ರ ಶಿವಯೋಗಿಗಳ ಯೋಗಮಯ ಜೀವನದಲ್ಲಿ ಬೆಳಗುತ್ತಿದ್ದಿತು. ಆ ಬೆಳಕಿನ ಸಹಾಯದಿಂದ ಸಹಸ್ರಾರು ಮಹಾತ್ಮರು ಇಂದು ನಡೆದು ನುಡಿದು ನಾಡ ಪಾವನ ಮಾಡುತ್ತಿದ್ದಾರೆ.

"ಆರಾಧಿಸುವ ಪರಬ್ರಹ್ಮ ತೇಜಃಕಲಾ।
ಕೌರವಾರಂಗೆಂಡು ಪುಟ್ಟೆ ತೆನೆಪದಿನೆಂಟು।
ನೂರ ಮೂವತ್ತಾರನೆಯ ಶಕ ವರ್ಷದೋಳ್ಗುರುಲಿಂಗ ನಾಮಾಂಕಿತಂ
ಧಾರಣಿಯೊಳವತರಿಸಿ ಬಾಲಲೀಲೆಗಳಿಂದ
ಮಾರ ಸೌಂದರ್ಯಮಂ ಜರೆಯುವಾ ಕೃತಿಯನುಂ
ಸಾರುತಾಪುತ್ರ ರೋಳೀತನಧಿಕ ಪ್ರೇಮ ಜೀವಿಯೆನೆ ರಂಜಿಸಿರ್ದಂ"

ಗುರುಲಿಂಗಯ್ಯನ ಆಚಾರ-ವಿಚಾರ ಸಾಮಾನ್ಯ ಮಕ್ಕಳಂತಿರವೆ ಅಸಾಮಾನ್ಯವಾಗಿ ಕಾಣತೊಡಗಿದವು. ಆಗ ಈ ಬಾಲಕನನ್ನು ಅಥಣಿಯ ಗಚ್ಚಿನಮಠಕ್ಕೆ ಕರೆದುಕೊಂಡು ಬಂದರು. ಪೀಠಾಧಿಪತಿಗಳಾಗಿದ್ದ ಎರಡನೆಯ ಮರುಳ ಶಂಕರಸ್ವಾಮಿಗಳು ಗುರುಲಿಂಗಯ್ಯನನ್ನು ಗುರುದೃಷ್ಟಿಯಿಂದ ಕಂಡು 'ಸಾಕ್ಷಾತ್ ಶಿವನೇ ಆಗಮಿಸಿದ'ನೆಂದು ಅಂತಃಕರಣದಿಂದ ಬರಮಾಡಿಕೊಂಡರು. ಅಧ್ಯಯನಕ್ಕಾಗಿ ತೆಲಸಂಗದ ಶಿವಬಸವ ದೇವರಲ್ಲಿ ಹಾಗೂ ಮಮದಾಪೂರದ ಮಹಾಯೋಗಿಗಳಲ್ಲಿ ವ್ಯವಸ್ಥೆ ಮಾಡಿದರು. ಅಭ್ಯಾಸ ಮುಗಿಸಿಕೊಂಡು ಮರಳಿ ಅಥಣಿಗೆ ಆಗಮಿಸಿದರು. ಮರುಳಶಂಕರರು ಮುರುಘೇಂದ್ರ ಎಂದು ಹೊಸ ನಾಮಕರಣ ಮಾಡಿದರು. ಗುರುಶಾಂತಸ್ವಾಮಿಗಳಿಂದ ಷಟ್‌ಸ್ಥಲ ಬ್ರಹ್ಮೋಪದೇಶವನ್ನು ಪಡೆದು ಮುಂದೆ ಸಂಚಾರ

ಕೈಕೊಂಡರು. ಹಳ್ಳಿಯಲ್ಲಿ ಏಕರಾತ್ರಿ, ಪಟ್ಟಣದಲ್ಲಿ ಪಂಚರಾತ್ರಿಗಳಂತೆ ವಾಸ್ತವ್ಯ ಮಾಡುತ್ತ ನಡೆದರು. ಚರಜಂಗಮಾಚರಣೆಯ ಪಾಲನೆಗಾಗಿ ಪುಣ್ಯಸ್ಥಳಗಳ ದರ್ಶನ ಕೈಕೊಂಡರು.

ನಂತರ ಅಥಣಿ ತಾಲೂಕಿನ ಶೂರ್ಪಾಲಿ ಗ್ರಾಮದ ಹತ್ತಿರ 'ಗುಹೇಶ್ವರಗಡೆ'ಯಲ್ಲಿ ಆರು ವರುಷ ಶಿವಯೋಗಾನು ಸಂಧಾನಕ್ಕೋಸ್ಕರ ಏಕಾಂತ ವಾಸದಲ್ಲಿದ್ದರು. ಇದೇ ಸಂದರ್ಭದಲ್ಲಿ ಶಿವಯೋಗಿಗಳು ಲಿಂಗಾರ್ಚನೆಗೆ ಕುಳಿತಾಗ ನಾಗರ ಹಾವೊಂದು ದಿನಾಲು ತೂಗಿ ತೊನೆಯುತ್ತಿತ್ತು. ಶಿವಯೋಗ ಸಾಧನೆಯನ್ನು ಮುಗಿಸಿ ಶಿವಯೋಗಿ ಸಿದ್ಧರಾಗಿ ಹೊರಬಿದ್ದರು ಶ್ರೀ ಮುರುಘೇಂದ್ರ ದೇವರು.

ಗಚ್ಚಿನ ಮಠದ ಆಗಮಿಸಿದಾಗ ಮಠದ ಅಧಿಕಾರವನ್ನು ವಹಿಸಕೊಳ್ಳಲು ಚೆನ್ನ ಬಸವಸ್ವಾಮಿಗಳು ಹಾಗೂ ಭಕ್ತರು ವಿನಯದಿಂದ ಕೇಳಿಕೊಂಡರು. "ಈ ಮಠ–ಮಾನ್ಯಗಳ ಅಧಿಕಾರ ಬೇಡ, ಗುರು–ಲಿಂಗ–ಜಂಗಮ ಸೇವೆಯಂತೆ ಶರಣರ ಸೇವೆಯೇ ಸಾಕು. ಶ್ರೀ ಸಿದ್ಧಲಿಂಗ ದೇವರನ್ನು ಮಠದ ಅಧಿಪತಿಯನ್ನಾಗಿ ಮಾಡಿದರು. ಶ್ರೀಗಳು ಹಾಗೂ ಭಕ್ತರು ಶ್ರೀ ಮುರುಘೇಂದ್ರ ಮಹಾಸ್ವಾಮಿಗಳಿಗೆ ಈ ಮಠದಲ್ಲಿಯೇ ಇರಲು ಕೇಳಿಕೊಂಡಾಗ ಗಚ್ಚಿನ ಮಠವು ಗಟ್ಟಿಯಾಯಿತು. ಯೋಗ ಮಂಟಪವೇ ಶಿವಯೋಗಿಗಳ ಶಿವಾಲಯವಾಯ್ತು.

ಅಥಣಿ ಭೂಕೈಲಾಸವಾಯಿತು. ಶಿವಾನುಭವ ಸೌರವ್ಯೂಹದಲ್ಲಿ ಅನೇಕ ಗ್ರಹಗಳಿದ್ದಂತೆ ಶಿವಯೋಗಿಗಳ ಶಕ್ತಿಯ ಸುತ್ತ ತಿರುಗಿ ಆ ಕಿರಣ ಕಂಡು ಆನಂದಿಸಿದವರ ಸಂಖ್ಯೆ ಅಸಂಖ್ಯಾತವಾದುದು. ಇಂದಿಗೂ ಕರ್ತೃ ಗದ್ದುಗೆಗೆ ಭಕ್ತಿಯಿಂದ ಬಾಗಿದವನಿಗೆ ಬೇಡಿದನ್ನು ಕೊಡುವ ಕಾಮಧೇನು.

---

೧. 'ಚಿನ್ಮಯ ಚೇತನ ಶ್ರೀ ಮದಥಣಿ ಮುರುಘೇಂದ್ರ ಶಿವಯೋಗಿಗಳು' ಪದ್ಯ–೧, ಪುಟ–೧

೨. 'ಚಿನ್ಮಯ ಚೇತನ ಶ್ರೀ ಮದಥಣಿ ಮುರುಘೇಂದ್ರ ಶಿವಯೋಗಿಗಳು' ಪದ್ಯ–೨, ಪುಟ–೨

೩. 'ಚಿನ್ಮಯ ಚೇತನ ಶ್ರೀ ಮದಥಣಿ ಮುರುಘೇಂದ್ರ ಶಿವಯೋಗಿಗಳು' ಲೇ. ಎ. ಬಿ. ಉತ್ನಾಳ ೧೯೯೭ರಲ್ಲಿ ಅನುಪಮ ಪ್ರಕಾಶನ ಅಥಣಿ.

೬) **ಜೈನ ಜನಪದ ಹಾಡುಗಳು :**

ಪ್ರೊ. ಸಿದ್ದಣ್ಣ. ಬಿ. ಉತ್ನಾಳ ಅವರು "ಜೈನ ಜನಪದ ಹಾಡುಗಳು" ಕೃತಿ ಸಂಪಾದಿಸಿದ್ದಾರೆ. ಅನುಪಮ ಪ್ರಕಾಶನವು ಪ್ರಕಟಿಸಿದೆ.

ಜನಪದ ಸಾಹಿತ್ಯ ನಮ್ಮ ಸಂಸ್ಕೃತಿಯ ಜೀವ ಜೀವಾಳವಾಗಿದೆ. ನಮ್ಮ ಬದುಕು ಆಚಾರ ವಿಚಾರಗಳು ತಲೆ ತಲಾಂತರಗಳಿಂದ ಜಾನಪದ ಹಾಡುಗಳ ರೂಪದಲ್ಲಿ ದಾಖಲಾಗುತ್ತಾ ಬಂದಿದೆ. ಹೃದಯದಿಂದ ಹೃದಯಕ್ಕೆ ಒಬ್ಬರ ಬಾಯಿಂದ ಮತ್ತೊಬ್ಬರ ಬಾಯಿಗೆ ತಳಕು ಪಡೆಯುತ್ತ ಉಳಿದು ಬಂದ ಸಾಹಿತ್ಯವೇ ಜನಪದ ಸಾಹಿತ್ಯ.

ಕೃಷ್ಣಾನದಿ ತೀರದ ಗುಂಟ ನಿಬಿಡವಾಗಿ ಬೀಡು ಬಿಟ್ಟಿರುವ ಜೈನ ಕುಟುಂಬಗಳಿಗೆ ಭೇಟ್ಟಿಯಿತ್ತಾಗ ಜನಪದ ಹಾಡುಗಳ ಭಂಡಾರವೇ ಅಲ್ಲಿದುದು ಗೋಚರವಾಯಿತು. ಊರಿಂದ ಊರಿಗೆ ಮನೆಯಿಂದ ಮನೆಗೆ ಸುತ್ತಾಡಿ ಹಾಡುಗಳನ್ನು ಸಂಗ್ರಹ ಮಾಡಿದರು. ಜಾನಪದ ಹಾಡುಗಾರರ ಬಾಯಿಯಿಂದ ನಿರರ್ಗಳವಾಗಿ ಹರಿದು ಬರುವ ಕಾವ್ಯವಾಗಿದೆ. 'ಕುರಿತೋದದೆಯಿಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂಬ ಮಾತು ಇಲ್ಲಿ ದಿಟವೆನಿಸುವುದು. ಉತ್ತೇಜಿತರಾದ ಉತ್ನಾಳರು ದಣಿವು ಬೇಸರಗಳಿಲ್ಲದೆ ಅಲೆದು ಸಂಗ್ರಹಿಸಿದ ಹಾಡುಗಳನ್ನು ಕನ್ನಡಿಗರಿಗೆ ನೀಡುವ ಪ್ರಯತ್ನ ಮಾಡಿದ್ದಾರೆ.

ಈ ಹಾಡುಗಳಲ್ಲಿ ಜೈನರ ಧರ್ಮ, ಬದುಕು, ಸಂಸ್ಕೃತಿ ಹಾಸು ಹೊಕ್ಕಾಗಿರುವುದನ್ನು ಕಾಣಬಹುದಾಗಿದೆ. ಇಲ್ಲಿರುವ ಪ್ರಾದೇಶಿಕ ಪಡೆನುಡಿಗಳು ವ್ಯಂಗಾರ್ಥದೊಂದಿಗೆ ಪ್ರಕಟಣೆಗೊಂಡು ಕೇಳುಗರನ್ನು ವಿಸ್ಮಯಗೊಳಿಸುತ್ತವೆ.

ತೀರ್ಥಂಕರರನ್ನು ಕುರಿತು, ಬೀಸುವ ಕಲ್ಲಿನ ಹಾಡು, ಬಾಹುಬಲಿ ಕುರಿತು, ಅರಿಹಂತ, ಸಿದ್ಧರ ಕುರಿತು, ಪಂಚಕಲ್ಯಾಣ ಮಹೋತ್ಸವ, ಜೈನ ತೀರ್ಥ ಕ್ಷೇತ್ರ, ತೇರೂರ, ಪದ್ಮಾವತಿ, ಕೋಲಾಟ, ಆರತಿ, ಉಡಿ ತುಂಬುವ, ತೇಂದಿ ಭರಮಪ್ಪ, ಪೂಜೆ, ಹಬ್ಬ–ಹರಿದಿನಗಳ, ಸಂಸ್ಕಾರ, ಬಳೆ ತೊಡುವ ತಮ್ಮ ಗ್ರಾಮದ ಬಸ್ತಿ ಕುರಿತು ಜೈನ ಸೋರಪಿಹಾಡುಗಳ ಜಾನಪದ ಪ್ರಪಂಚವೇ ಈ ಹಾಡುಗಳಲ್ಲಿ ಹಾಸುಹೊಕ್ಕಾಗಿದೆ.

೭) **ಧನ್ವಂತರಿ ಹಾಡು :**

ಡಾ. ವಸಂತ ಕುಲಕರ್ಣಿಯವರು ಬರೆದ ಧನ್ವಂತರಿ ಹಾಡು ಕಾವ್ಯಸ್ವರೂಪ (ಕವನ) ಕೃತಿಯನ್ನು ಅನುಪಮ ಪ್ರಕಾಶನವು ಪ್ರಕಟಿಸಿದೆ.

---

೧. ಜೈನ ಜನಪದ ಹಾಡುಗಳು ಸಂಪಾದಕರು ಎಸ್. ಬಿ. ಉತ್ನಾಳ ೧೯೯೦ರಲ್ಲಿ ಅನುಪಮ ಪ್ರಕಾಶನ ಅಥಣಿ.

ಲೇಖಕರಾದ ಡಾ. ವಸಂತ ಕುಲಕರ್ಣಿಯವರು ಧನ್ವಂತರಿಯ ಶಕ್ತಿ ಸಾಮರ್ಥ್ಯಗಳನ್ನು ಆದಿ ಅನಾದಿಕಾಲದಲ್ಲಿ ಧನ್ವಂತರಿಯ ಆರೋಗ್ಯದ ಮೂಲ ದೇವತೆಯಾಗಿ ಮಾಡಿದ ಶಕ್ತಿ ಸಾಮರ್ಥ್ಯಗಳನ್ನು ಈ ಕಾವ್ಯದಲ್ಲಿ ತುಂಬಿದ್ದಾರೆ.

೮) ದಾಸ ಭಕ್ತಿ :

ಪ್ರೊ. ಸಿದ್ದಣ್ಣ. ಬಿ. ಉತ್ನಾಳ ಅವರು "ದಾಸ ಭಕ್ತಿ" ಕೃತಿ ಬರೆದಿದ್ದಾರೆ. ಇದನ್ನು ಅನುಪಮ ಪ್ರಕಾಶನದವರು ಪ್ರಕಟಣೆ ಮಾಡಿದ್ದಾರೆ.

ದಾಸ ಸಾಹಿತ್ಯವು ಸಮಾಜದ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರುವುದಕ್ಕೆ ದಾಸರ ಕೆಲವು ಹಾಡುಗಳು ಕಾರಣವಾದವು. ಅಂದರೆ ಶಿವಶರಣರು ಮತ್ತು ಹರಿದಾಸರು ಬರೆದ ವಚನಗಳು ಮತ್ತು ಹಾಡುಗಳು ಬೇರೆ ಬೇರೆ ಕಾಲದಲ್ಲಿ ರಚಿತವಾಗಿದ್ದರೂ ಅವುಗಳ ಮೂಲ ಸೂತ್ರ ಮನುಷ್ಯ ಹೇಗೆ ಬದುಕಬೇಕು ಎಂಬುದನ್ನು ಕಾಲಕಾಲಕ್ಕೆ ಕಲಿಸಿಕೊಡುವ ಸ್ಫೂರ್ತಿಯ ಆಗರಗಳೇ ಆಗಿದ್ದವು. ಅಂದರೆ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲದ ಕೃತಿಗಳನ್ನು ನೋಡಿದರೆ ಅದನ್ನು ಬರೆದವರು ಜೈನರೇ ಇರಲಿ, ವೀರಶೈವರೇ ಇರಲಿ, ಬ್ರಾಹ್ಮಣರೇ ಇರಲಿ ಇಷ್ಟೇಕೆ ಇತ್ತೀಚಿನ ಕಾಲದ ಶರೀಫ ಸಾಹೇಬರೇ ಇರಲಿ ಇವರೆಲ್ಲ ನಮಗೆ ಭಕ್ತಿಯ ಮೂಲಕವಾಗಿ ಬದುಕಿನ ಸೂತ್ರಗಳನ್ನು ತಿಳಿಸಿಕೊಟ್ಟಿದ್ದಾರೆ.

ಈ ದೃಷ್ಟಿಯಿಂದ ನೋಡಿದಾಗ 'ದಾಸ ಭಕ್ತಿ' ಎಂಬ ಪುಸ್ತಕ ಚಿರಂತನ ಸ್ಫೂರ್ತಿದಾಯಕವಾದ ಸೂತ್ರಗಳನ್ನು ಒಳಗೊಂಡಿದೆ.

೯) ನನ್ನ ಧ್ವನಿ :

ಶ್ರೀಮತಿ ಲೀಲಾ ಕಲಕೋಟಿಯವರು ರಚಿಸಿದ "ನನ್ನ ಧ್ವನಿ" ಎಂಬ ಕವನ ಸಂಕಲನವನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ಶ್ರೀಮತಿ ಲೀಲಾ ಕಲಕೋಟಿಯವರು ಮಹಿಳೆಯರ ಸಂಸ್ಕೃತಿಯ ಸಾಕಾರ ಮೂರ್ತಿಯಾಗಿದ್ದಾರೆ. 'ಹೆಣ್ಣಿಲ್ಲದೀ, ಜಗ ಕಣ್ಣಿಲ್ಲದ ಮುಖದಂತೆ' ಎನ್ನುವಂಥ ಅನೇಕ ವಾಕ್ಯಗಳನ್ನೊಳಗೊಂಡ ಮತ್ತು ಮಹಿಳೆಯರಿಗೆ ಸಂಬಂಧಿಸಿದ ಅನೇಕ ಕವನಗಳನ್ನು ರಚಿಸಿದ್ದಾರೆ. ಹೆಣ್ಣಿನ ಹಲವು ರೂಪಗಳು ಸೃಷ್ಟಿ ಹೀಗೆ ಒಂದೇ ನಾಣ್ಯದ ಎರಡು ಮುಖಗಳಂತೆ. ಒಂದೇ ಧ್ವನಿಯಲ್ಲಿ ಹಲವು ಧ್ವನಿಗಳನ್ನು ಒಟ್ಟುಗೂಡಿಸಿ ಒಂದೆಡೆ ತರಲು ಪ್ರಯತ್ನಿಸಿದ್ದಾರೆ.

---

೧. "ಧನ್ವಂತರಿ ಹಾಡು" ಲೇ. ಡಾ. ವಸಂತ ಕುಲಕರ್ಣಿ ಅನುಪಮ ಪ್ರಕಾಶನ ಅಥಣಿ.

೨. "ದಾಸ ಭಕ್ತಿ" ಲೇ. ಎಸ್. ಬಿ. ಉತ್ನಾಳ ೧೯೯೨ರಲ್ಲಿ ಅನುಪಮ ಪ್ರಕಾಶನ ಅಥಣಿ.

೩. "ನನ್ನ ಧ್ವನಿ ಲೇ. ಲೀಲಾ ಕಲಕೋಟಿ ೧೯೯೦ರಲ್ಲಿ ಅನುಪಮ ಪ್ರಕಾಶನ ಅಥಣಿ.

ಕವಿಯ ಸ್ವಾನುಭವವಾಗಿ ಮಾಡಿ ಬಂದಾಗ ಮೌಲಿಕವಾಗುತ್ತದೆ. ಇನ್ನೊಬ್ಬ ಕವಿಯ ಪ್ರತಿಧ್ವನಿಯಾದಾಗ ನಿರಸವಾಗುತ್ತದೆ. ಸ್ವಂತಿಕೆತಿಲ್ಲದ ಕವಿ ಸುಗಂಧವಿಲ್ಲದ ಕುಸುಮದಂತೆ. ಭಾಷೆ, ಬಂಧ, ಛಂದಸ್ಸು, ಶಿಲ್ಪ ಸಂವಿಧಾನಗಳಲ್ಲಿ ಮಾತ್ರವೇ ಅಲ್ಲ ಕವಿ ಹೇಳಿದುದರಲ್ಲಿಯೂ ಹೊಸತನವಿದ್ದಾಗ ಕವಿತೆ ಹಿಗ್ಗಿನ ಒರತೆಯಾಗುತ್ತದೆ.

ನನ್ನ ಧ್ವನಿ ಕವನ ಸಂಕಲನದಲ್ಲಿ ೩೦ ಪದ್ಯಗಳಿವೆ. ಅವುಗಳಲ್ಲಿ ಕೆಲವೊಂದು ಕವನಗಳನ್ನು ಇಲ್ಲಿ ಅರ್ಥೈಸಲಾಗಿದೆ.

"ನನ್ನ ಧ್ವನಿ ಕೇಳಿ
ಗಿಡ, ಗಂಟಿಗಳು ಅಲ್ಲಾಡ ಹತ್ತಿದವು
ಮೊಗ್ಗುಗಳು, ದುಂಬಿಗಳು ಹಾಡ ಹತ್ತಿದವು,
ಪ್ರಾಣಿ, ಪಕ್ಷಿಗಳು ಚಡಪಡಿಸಹತ್ತಿದವು,
ನೆಲವೆಲ್ಲ ಅಲುಗಾಡ ಹತ್ತಿತು,
ಸೂರ್ಯ–ಚಂದ್ರರು ಆಡ ಹತ್ತಿದರು,
ತಮ್ಮಲ್ಲೇ ಕಣ್ಣು ಮುಚ್ಚಾಲೆ,
ಸಮಸ್ತ ನಕ್ಷತ್ರಗಳು ಹೊಳೆಯ ಹತ್ತಿದವು.
ಮುಕ್ತ ಮೋಡಗಳು ತುಂಬಿ ನಿಂತವು
ಮತ್ತು ನೀರು ಸುರಿಸ ಹತ್ತಿದವು.
ಆದರೆ.. !
ನೀನು ಇನ್ನೂ ಬರಲಿಲ್ಲ ಮತ್ತು ಯಾವ ಸುದ್ಧಿಯನ್ನು ಕಳಿಸಲಿಲ್ಲ"

ಈ ಪದ್ಯದ ಸಾಲುಗಳಲ್ಲಿ ಕವಿಯು ತನ್ನ ಧ್ವನಿ ಎತ್ತಿ ಹಾಡಿದಾಗ ಗಿಡ, ಗಂಟಿಗಳು ಅಲ್ಲಾಡುತ್ತವೆ. ಮೊಗ್ಗುಗಳು, ದುಂಬಿಗಳು ಹಾಡುತ್ತವೆ. ಪ್ರಾಣಿ, ಪಕ್ಷಿಗಳು ಚಂದ್ರರು ಆಟ ಆಡ ಹತ್ತಿದರು. ಗಗನದಲ್ಲಿ ನಕ್ಷತ್ರಗಳು ಹೊಳೆಯ ಹತ್ತಿದವು. ಮೋಡಗಳು ತುಂಬಿ ನಿಂತವು. ನೀತು ಸುರಿಯ ಹತ್ತಿದವು. ಆದರೆ ನನ್ನ ಧ್ವನಿಗೆ ನೀನು ಬರಲಿಲ್ಲ ಯಾವುದೇ ರೀತಿಯ ಸುದ್ಧಿಯನ್ನು ಸಹ ತಿಳಿಸಲಿಲ್ಲ ಎಂದು ಲೇಖಕಿ ಪ್ರತಿಧ್ವನಿಸುತ್ತಾಳೆ.

ಈ ಕವಿಯಿತ್ರಿ ತನ್ನೊಳಗಿರುವ ತನ್ನನ್ನು ಹುಡುಕುತ್ತ ಮಿಡುಕುತ್ತಿರುವ ರೀತಿ ಅಧ್ಯಾಯಮಾನವಾದುದು.

ನನ್ನೊಳಗಿರುವ ನನ್ನಲ್ಲಿಯ ತನ್ನಲ್ಲಿಯ ನಿನ್ನ ಹುಡುಕಾಡುತಿದೆ, ಮೇಲು ಕಾಡುತಿದೆ.

---

೪. 'ನನ್ನ ಧ್ವನಿ' ಪುಟ–೩೫

ಲೇಖಕಿಯ ಜೀವನದ ದಾರಿಯನ್ನು ಇವರು ಕಾವ್ಯಧಾರೆಗೂ ಅನ್ವಯಿಸುತ್ತದೆ. ಈ ಹೊನಲಿನ ತರಂಗ ಸಂಗೀತ ಕಿವಿಗಳಿಗೆ ಇಂಪು ಮನಕ್ಕೆ ತಂಪು ಇಂಥ ಕವಿತೆಗಳನ್ನು ಓದುಗರೂ ಆನಂದಿಸುತ್ತಾರೆ.

೧೦) **ಬಸವಸ್ತೋತ್ರ :**

ಶ್ರೀ ಶರಣ ಸಿದ್ಧರಾಮಣ್ಣನವರು ರಚಿಸಿದ ಬಸವಸ್ತೋತ್ರ ಕಾವ್ಯವನ್ನು ಅನುಪಮ ಪ್ರಕಾಶನವು ಪ್ರಕಟಿಸಿದೆ.

ಲೇಖಕರು ಬೀದರ ಜಿಲ್ಲೆಯ ಬಾಲ್ಕಿಯ ಬಸವ ಕಲ್ಯಾಣದ ಅನುಭವ ಮಂಟಪದಲ್ಲಿ ಅನುಭಾವಿಗಳಾಗಿ ೨೧ನೇ ಶತಮಾನದ ನೈಜ ಶರಣರೆನಿಸಿಕೊಂಡಿದ್ದಾರೆ. ಇವರು ಆರಾಧ್ಯದೇವರು ವಿಶ್ವಗುರು ಬಸವಣ್ಣನವರು. ೧೨ನೇ ಶತಮಾನದಲ್ಲಿ ವಚನಗಳಿಂದ ವೈಚಾರಿಕ ಕ್ರಾಂತಿ ಎಸಗಿದ ಕೆಳಮಟ್ಟದ ಜನರನ್ನು ಅನುಭವ ಮಂಟಪದಲ್ಲಿ ಕೂಡ್ರಿಸಿ ಅನುಭಾವದ ಸಂಸ್ಕಾರವನ್ನು ಕೊಡಿಸಿ ಅವರಿಂದಲೂ ವಚನಗಳ ರಚನೆಯನ್ನು ಪ್ರಾರಂಭಿಸಿದ ಶಕ್ತಿ ಬಸವಣ್ಣನವರೆಂಬುದನ್ನು ಈ ಸ್ತೋತ್ರದಲ್ಲಿ ಪ್ರಚುರಪಡಿಸಿದ್ದಾರೆ.

೧೧) **ಭಕ್ತಾಮರ ಸ್ತೋತ್ರ :**

ವಿಜಯ. ಎಸ್. ಕರೋಲಿ ಅವರು ಅನುವಾದಿಸಿದ 'ಭಕ್ತಾಮರ ಸ್ತೋತ್ರ' ಕೃತಿಯನ್ನು ಅನುಪಮ ಪ್ರಕಾಶನವು ಪ್ರಕಟಿಸಿದೆ.

'ಭಕ್ತಾಮರ ಸ್ತೋತ್ರವು ಭಕ್ತಗಣಕ್ಕೆ ದಯೆ, ದಾನ, ತ್ಯಾಗಗಳಂಥ ಮೌಲ್ಯಗಳನ್ನು ಆದಿನಾಥ ಸ್ವಾಮಿಯ ಸಿದ್ಧಿ-ಸಾಧನೆ, ದಿವ್ಯ-ಭವ್ಯಗಳನ್ನು ಹೇಳುತ್ತದೆ. ಇದು ಭವದ ಮುಕ್ತಿಗೆ ಕಾರಣ. ಸ್ತೋತ್ರವು ಕೇವಲ ನಾಲ್ವತ್ತೆಂಟು ಶ್ಲೋಕಗಳಿಂದ ಕೂಡಿದೆ. ಹೀಗೆ ಶ್ಲೋಕಕ್ಕೊಂದರಂತೆ ಕನ್ನಡ ಪದ್ಯಗಳನ್ನು ಇಟ್ಟಿದ್ದಾರೆ. ಇಲ್ಲಿರುವ ಪದ್ಯಗಳು ಮನೋಹರವಾಗಿವೆ, ಗಂಭೀರವಾಗಿವೆ. ಅವುಗಳ ಓದು ಮನಸ್ಸನ್ನು ಎತ್ತರಿಸುತ್ತವೆ. ಈ ಶ್ಲೋಕ ಮತ್ತು ಅದರ ಭಾವಾನುವಾದ.

ಬುದ್ಧ್ಯಾವಿನಾಪಿ ವಿಬುಧಾರ್ಚಿತ ಪಾದಪೀಠ
ಸ್ತೋತೊಂ ಸಮುದ್ಯತಮತಿರ್ವಿಗತತ್ರಪೋಹಂ।
ಬಾಲಂ ವಿಹಾಯ ಜಲಸಂಸ್ಥಿತ ಮಿಂದುಬಿಂಬ
ಮನ್ಯಃಕಿಇಚ್ಛತಿ ಜನಸ್ಸಹಸಾಗ್ರಹೀತುಂ

---

೧. "ಬಸವಸ್ತೋತ್ರ" ಲೇ. ಶ್ರೀ ಶರಣ ಸಿದ್ಧರಾಮಣ್ಣನವರು, ಅನುಪಮ ಪ್ರಕಾಶನ ಅಥಣಿ.

ಕೊಳದಲಿದುಸಿದ ಚಂದ್ರಬಿಂಬವ
ಹಿಡಿಯಲೋಡುವ ಮಂದಮತಿ ನಾನು
ಕೋಟಿ ವಿದ್ವಜ್ಜನ ಅಳತೆ ಮೀರಿದ
ನಿಮ್ಮ ತುತಿಗೆಳಸಿಹೆ ಚೋದ್ಯವಲ್ಲವೇನು?

ಕರೋಲಿ ಅವರ ಭಾವಾನುವಾದವು ಉತ್ಕೃಷ್ಟವಾಗಿದೆ. ಇದಕ್ಕೆ ಕಾರಣ ಭಕ್ತ-ಭಾವುಕತೆಯ ಭರಪೂರವನ್ನು ಅವರು ಹೊಂದಿರುವುದು ಈ ಸ್ತೋತ್ರವು ಬಹು ವರ್ಷಗಳ ಹಿಂದೆ ಪಾರಂಪಾರಿಕ ಛಂದಸ್ಸಿನಲ್ಲಿ ಅನುವಾದಗೊಂಡಿತ್ತು. ಆದರೆ ಕರೋಲಿ ಅವರು ಮುಕ್ತ ಛಂದದಲ್ಲಿ ಅನುವಾದಿಸಿದ್ದಾರೆ. ಇಲ್ಲಿ ದೇಶಿತನ ಮಡುಗಟ್ಟಿದೆ. ದೇಶಿದನಿ ಕಾಣಬರುತ್ತದೆ. ಪದಬಂಧಗಳು ಹಿತಮಿತವಾಗಿವೆ. ಇಂಥ ಉತ್ತಮ ಸ್ತೋತ್ರ ಸಾಹಿತ್ಯವನ್ನು ಕನ್ನಡಕ್ಕೆ ಕರೋಲಿ ಅವರು ನೀಡಿದ್ದಾರೆ.

೧೨) **ಬಾಳಸಂಗಾತಿ :**

ಕುಮಾರಿ ರಶ್ಮಿ ಮಾಚಕನೂರ ಅವರು ರಚಿಸಿದ "ಬಾಳ ಸಂಗಾತಿ" ಕವನ ಸಂಕಲನವನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ಈ "ಬಾಳ ಸಂಗಾತಿ" ಕವನ ಸಂಕಲನದಲ್ಲಿ ಲೇಖಕಿಯು ತನ್ನ ಮುದ್ದಿನ 'ಸೈಕಲ್ಲೆ' ನಿಜವಾದ ಸಂಗಾತಿಯಾಗಿದೆ ಎಂದು ಹೇಳಿದ್ದಾರೆ.

ಕುಮಾರಿ ರಶ್ಮಿ ಮಾಚಕನೂರ ಅವರು ಬಾಲ್ಯದಿಂದಲೇ ಪ್ರತಿಭೆಯುಳ್ಳವರು. ನಿಸರ್ಗ, ಸತ್ಸಂಗ, ದೈವಭಕ್ತಿ, ಪತ್ರಿಕೆಯಲ್ಲಿ ಬರುವ ಸಚಿತ್ರ-ವಿಚಿತ್ರ ಘಟನೆ ಕುರಿತು ಚಿಂತನ-ಮಥನ ಮಾಡುವ ಸ್ವಭಾವದವಳು. ತನಗೆ ಅವಕಾಶ ಸಿಕ್ಕಾಗ ತನ್ನ ಅನುಭವಗಳನ್ನು ಹಾಗೆ "ಪ್ರಪಂಚ" ಪತ್ರಿಕೆಗೆ ಕಳಿಸಿಕೊಡುತ್ತಿದ್ದಳು. ಹೀಗೆ ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎನ್ನುವ ಹಾಗೆ ತನ್ನ "ಬಾಳ ಸಂಗಾತಿ" ಕವನ ಸಂಕಲನವನ್ನು ರಚಿಸಿದರು.

ಈ ಕವನ ಸಂಕಲನದಲ್ಲಿ "ಬಾಳ ಸಂಗಾತಿ" ಎಂಬ ಕವಿತೆಯನ್ನು ನೋಡಿದಾಗ

"ನೀನೆನ್ನ ಬಾಳ ಸಂಗಾತಿ
ನಾನೆಂದೂ ನಿನ್ನ ಅಗಲಲಾರೆ
ಒಂದು ತರಹ ನೀನು
ನನ್ನ ಹಾಗೆಯೇ ಇರುವೆ
ನನ್ನಂತೆಯೇ ನೀನಗೂ

೧."ಭಕ್ತಾಮರ ಸ್ತೋತ್ರ" ಕವಿ ವಿ. ಎಸ್. ಕರೋಲಿ ೨೦೦೬ರಲ್ಲಿ ಅನುಪಮ ಪ್ರಕಾಶನ ಅಥಣಿ.
೨. 'ಭಕ್ತಾಮರ ಸ್ತೋತ್ರ' ಪುಟ-೬

ಎರಡು ಕಾಲುಗಳುಂಟು
ನನ್ನ ಹಾಗೆಯೇ ಎರಡು
ಕೈಗಳು ನಿನಗುಂಟು
ನಮಗಿಬ್ಬರಿಗೂ ತಲೆ ಉಂಟು
ಆದರೆ ಇಬ್ಬರಿಗೂ ಬಾಲವಿಲ್ಲ
ನನಗೂ ಬೇಗ ತಲುಪಲು
ಜೊತೆಗೆ ನೀನು ಬೇಕು
ಓ ನನ್ನ ಮುದ್ದಿನ ಸೈಕಲ್ಲೇ
ನೀನೆ ನಿಜವಾದ ಸಂಗಾತಿಯು"

ಈ ಕವಿತೆಯ ಪಾದಗಳನ್ನು ನೋಡಿದಾಗ ಇದರಲ್ಲಿ ಮನುಷ್ಯನಿಗೆ ಸೈಕಲನ್ನು ಹೋಲಿಸಲಾಗಿದೆ. ಅಂದರೆ ಮನುಷ್ಯನ ಹಾಗೇ ಸೈಕಲ್ಲಿಗೆ ಎರಡು ಕಾಲುಗಳು, ಎರಡು ಕೈಗಳಿವೆ, ಇಬ್ಬರಿಗೂ ತಲೆ ಇದೆ ಆದರೆ ಬಾಲವಿಲ್ಲವೆಂದು ಮತ್ತು ಬೇಗ ತಲುಪಲು ಜೊತೆಗೆ ನೀನು ಬೇಕು ಎಂದು ಹೇಳುತ್ತಾ ಸೈಕಲ್ಲೇ ನಿಜವಾದ ಸಂಗಾತಿಯಾಗಿದೆ ಎಂದಿದ್ದಾರೆ.

ದೈವ ದೇವರು ಕವಿತೆಯಲ್ಲಿ,

ಸಿರಿತನ ಬಂದಾಗ
ದೇವರ ನೆನೆವರು
ಬಡತನ ಬಂದಾಗ
ದೈವವನು ಹಳಿಯುವರು
ಹುಲು ಮನಜನಿಗೇನು ಗೊತ್ತು
ದೈವ-ದೇವರು ಒಂದೇ
ನಾಣ್ಯದ ಎರಡು
ಮಖಗಳೆಂದು

ಲೇಖಕಿಯು ಈ ದೈವ-ದೇವರು ಎಂಬ ಸುಂದರವಾದ ಕವಿತೆಯಲ್ಲಿ ಜನರು ಸಿರಿತನ ಬಂದಾಗ, ಬಡತನ ಬಂದಾಗ ಹೇಗೆ ವರ್ತಿಸುತ್ತಾರೆ ಎಂಬುದನ್ನು ತಿಳಿಸಿದ್ದಾರೆ. ದೈವ-ದೇವರು ಒಂದೇ ನಾಣ್ಯದ ಎರಡು ಮಖಗಳೆಂದು ಹೇಳಿದ್ದಾರೆ.

ಒಟ್ಟಾರೆ "ಬಾಳ ಸಂಗಾತಿ" ಕವನ ಸಂಕಲನದಲ್ಲಿ ಸುಂದರವಾದ ರಚನೆಗಳಿವೆ. ಬಾಲ್ಯದ ಮುಗ್ಧತೆ, ವಿದ್ಯಾರ್ಥಿಯ ಕುತೂಹಲ ಭವತವ್ಯದ ಕುರಿತಾಗಿ ಆಶಾವಾದವಿರುವುದು ಪ್ರಶಂಸನೀಯವಾಗಿದೆ.

---

೧. "ಬಾಳ ಸಂಗಾತಿ" ಕವನ ಸಂಕಲನ ಲೇ. ಆರ್. ಖ. ಮಾಚಕನೂರ ೨೦೦೨ರಲ್ಲಿ ಅನುಪಮ ಪ್ರಕಾಶನ ಅಥಣಿ.
೨. "ಬಾಳ ಸಂಗಾತಿ" ಪುಟ-೧೧
೩. 'ದೈವ-ದೇವರು' ಪುಟ-೧೨

೧೩) **ಮರುಳ ಶಂಕರ ದೇವರು :**

ಶ್ರೀ ಮೋಹನ. ಶಿ. ಆಣೆಪ್ಪನವರ ರಚಿಸಿದ "ಮರುಳ ಶಂಕರ ದೇವರು" ಎಂಬ ಕಾವ್ಯ ಕೃತಿಯನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ಭಕ್ತಿ ಸಂಪತ್ತು ಇಲ್ಲಿ ಯಾವ ಮಟ್ಟದಲ್ಲಿ ಇದೆಯೋ ಅದೇ ಮಟ್ಟದಲ್ಲಿ ಧಾರ್ಮಿಕ ಹಾಗೂ ಸಾಹಿತ್ಯ ಸಂಪತ್ತು ಸಮೃದ್ಧವಾಗಿದೆ. ಮರುಳ ಶಂಕರರ ದೃಷ್ಟಿಯಲ್ಲಿ ನಾವೆಲ್ಲರೂ ಮರುಳರು; ನಮ್ಮೆಲ್ಲರ ದೃಷ್ಟಿಯಲ್ಲಿ ಮರುಳ ಶಂಕರರು ಮರುಳರು. ಕಾರಣ ನಶ್ವರವಾಗುವ ವಸ್ತುಗಳ ಬಯಕೆ ನಮ್ಮದಾಗಿದೆ. ಶಾಶ್ವತವಾದ ಶಿವ ಸಾನಿಧ್ಯದ ಹಂಬಲ ಅವರದಾಗಿದೆ. ಸಾಲೋಕ್ಯ, ಸಾಯುಜ್ಯದಂತಹ ಮುಕ್ತಿ ಪಥವನ್ನಿಲ್ಲಿ ಗುರುತಿಸಬಹುದು.

ಮರುಳ ಶಂಕರ ದೇವರ ತ್ರಿಪದಿಯಲ್ಲಿ,

> **"ಶರಣ ಪಥದ ಪಥಿಕನಾಗಿ ಪುರ ಅಥಣಿಯಲ್ಲಿ ನೆಲೆಸಿದ**
> **ಗುರು ಮುರುಘ ಶಿವಯೋಗಿ ವರಪುತ್ರ ಆಗಿಹ**
> **ಮರುಳ ಶಂಕರ ದೇವ ಶರಣಾರ್ಥಿ॥**

ಮರುಳ ಶಂಕರ ದೇವರು ಅಥಣಿಯಲ್ಲಿ ನೆಲೆಸಿರುವ ಶ್ರೀ ಮುರುಘೇಂದ್ರ ಶಿವಯೋಗಿಗಳ ವರಪುತ್ರರಾಗಿದ್ದಾರೆ ಎಂದು ಹೇಳಿದ್ದಾರೆ.

> **"ಜಾತಿ ಮತ ಪಂಥಗಳ ಹಿತರಹಿತ ನಡೆಗಳ ನೀಗಿ**
> **ಪ್ರೀತಿಯಿಂ ಸಕಲರಿಗೆ ಬೇಕಾಗಿ। ಇವ**
> **ಅಥಣಿಯ ಕಣ್ಮಣಿಯಾಗಿಹ॥**

ಜನರಲ್ಲಿ ಜಾತಿ ಭೇದವನ್ನು ಹೋಗಲಾಡಿಸಿ, ಮತಪಂಥಗಳ ಹಿತವನ್ನು ಬಯಸಿ, ಅವರ ನಡೆಗಳನ್ನು ನೀಗಿಸಿ ಸಕಲ ಜನರ ಪ್ರೀತಿಗೆ ಪಾತ್ರರಾಗಿ ಅಥಣಿಯ ಗಚ್ಚಿನ ಮಠಕ್ಕೆ ಕಣ್ಮಣಿಯಾಗಿದ್ದಾರೆ.

> **"ಮೂರು ಹೊತ್ತಿನೊಳು ಮರುಳ ಶಂಕರ ಸ್ನಾನಗೈದು**
> **ಮೂರು ಕಣ್ಣುಳ್ಳವನ ಅರ್ಚಿಸಿ। ಮತ್ತೆ**
> **ಮುರುಘಯತಿ ಗದ್ದುಗೆ ಪೂಜಿಪ॥**

ಈ ತ್ರಿಪದಿಯಲ್ಲಿ ಮರುಳ ಶಂಕರ ದೇವರು ಪ್ರತಿದಿನ ಮೂರು ಹೊತ್ತು ಸ್ನಾನ ಮಾಡಿ ಮೂರುಕಣ್ಣುಳ್ಳ ಶಿವನಿಗೆ ಭಕ್ತಿಯಿಂದ ಅರ್ಚಿಸಿದ ಬಳಿಕ ಮುರುಘೇಂದ್ರರ ಗದ್ದುಗೆಗೆ ಪೂಜಿಸುವುದು ನಿತ್ಯದ ಕಾಯಕವಾಗಿತ್ತು.

ಶ್ರೀ ಮುರುಘೇಂದ್ರ ಶಿವಯೋಗಿಗಳ ಕುರಿತು ಮರುಳ ಶಂಕರ ದೃಷ್ಟಿ "ನಾನಿಲ್ಲರ್ದುಂ ನಿನ್ನವರು ನೀನಲ್ಲಿರ್ದುಂ ಎನ್ನುವನು ಮನಸ್ಸಂಗಮವೆ ಸಂಗಮವು, ಶರೀರ ಸಂಯೋಗವೆಂಬುದು ಪ್ರಯೋಜನವಲ್ಲ" ಈ ತೆರನಾಗಿ ಸದಾಕಾಲವೂ ಮರುಜನ್ಮ ನೀಡಿದ ಯತಿಕುಲ ಪಿತಾಮಹ ಶ್ರೀ ಮುರುಘೇಂದ್ರ ಶಿವಯೋಗಿಯೇ ಸಕಲ ಸೃಷ್ಟಿ ಅಲ್ಲಿಯೇ ಮರುಳ ಶಂಕರರ ದೃಷ್ಟಿಯಾಗಿದೆ.

---

೧. "ಮರುಳ ಶಂಕರ ದೇವರು" ಲೇ. ಎಮ್. ಎಸ್. ಆಣೆಪ್ಪನವರ ೧೯೯೦ರಲ್ಲಿ ಅನುಪಮ ಪ್ರಕಾಶನ ಅಥಣಿ.
೨. "ಮರುಳ ಶಂಕರ ದೇವರು" ಪದ್ಯ-೧, ಪುಟ-೩
೩. "ಮರುಳ ಶಂಕರ ದೇವರು" ಪದ್ಯ-೫, ಪುಟ-೩
೪. "ಮರುಳ ಶಂಕರ ದೇವರು" ಪದ್ಯ-೧೧, ಪುಟ-೪

೧೪) **ರುದ್ರಪುತ್ರ ಅಣಿವೀರಭದ್ರ :**

ಶ್ರೀ ಮೋಹನ. ಕೆ, ಆಣೆಪ್ಪನವರ ರಚಿಸಿದ ರುದ್ರಪುತ್ರ ಅಣಿವೀರಭದ್ರ ಕಾವ್ಯವನ್ನು (ಚಂಪೂ) ಅನುಪಮ ಪ್ರಕಾಶನವು ಪ್ರಕಟಿಸಿದೆ.

ಶೈವ ಹಾಗೂ ವೀರಶೈವ ಸಂಪ್ರದಾಯದಲ್ಲಿ ವೀರಭದ್ರನ ಸ್ಥಾನ ಬಹು ಪ್ರಮುಖವಾದುದು. ಆದಿ, ಅನಾದಿಯ ಶಕ್ತಿಯ ಮೂಲ ಸ್ವರೂಪ ವೀರ ಭದ್ರನೆಂದು ಸಂಶೋಧಕರು ಒಪ್ಪುತ್ತಾರೆ. ವೀರಭದ್ರನು ಶಿವನ ರುದ್ರಾವತಾರದ ಪುತ್ರನಾಗಿ ಗೋಚರಿಸುತ್ತಾನೆ. ಈ ಅಣಿವೀರಭದ್ರನ ಪವಾಡಗಳನ್ನು ಮಹಿಮೆಗಳನ್ನು ಈ ಕಾವ್ಯದಲ್ಲಿ ಲೇಖರು ಮನದುಂಬಿ ಹೊಗಳಿದ್ದಾರೆ.

ರುದ್ರಣ ಸಂಶೋಧನೆಯ ಅಧ್ಯಯನ ಕೈಕೊಂಡವರಿಗೆ ಈ ಕೃತಿ ಒಂದು ಆಕರವಾಗುವುದರಲ್ಲಿ ಎರಡಿಲ್ಲ.

೧೫) **ರುದ್ರಪುತ್ರ ವೀರಭದ್ರ :**

ಶ್ರೀ ಮೋಹನ. ಶಿ. ಅಣೆಪ್ಪನವರ ಅವರು ರಚಿಸಿದ 'ರುದ್ರಪುತ್ರ ವೀರಭದ್ರ' ಎಂಬ ತ್ರಿಪದಿ ಪದ್ಯಗಳುಳ್ಳ ಜಾನಪದ ಕಿರು ಕಾವ್ಯ ಕೃತಿಯನ್ನು ಅನುಮಪಮ ಪ್ರಕಾಶನ ಅಥಣಿ ಪ್ರಕಟಿಸಿದೆ.

'ರುದ್ರಪುತ್ರ ವೀರಭದ್ರ' ಇದೊಂದು ೬೪ ಪುಟದ ೪೨೪ ತ್ರಿಪದಿ ಪದ್ಯಗಳುಳ್ಳ ಕೃತಿಯಾಗಿದೆ. ಇಲ್ಲಿ ರುದ್ರಪುತ್ರ ಎಂದು ಹೆಸರಿಸಿದ್ದರೂ ಅನಿವೀರನ ಚರಿತ್ರೆ ಚಿತ್ರಿತವಾಗಿದೆ. ಅಣಿವೀರನೆಂದರೆ ಮುಖ್ಯವಾಗಿ ಸಿದ್ಧವೀರ, ಅಗ್ರವೀರ, ನಯವೀರ, ನಿಯಮಿತ ವೀರ, ಚನ್ನವೀರ ಎಂದು ಮುಂತಾಗಿ ಅರ್ಥಗಳಾಗುತ್ತವೆ.

ವೀರಭದ್ರ ವಿಶ್ವವೀರಚೇತನ, ವಿಶಿಷ್ಟಚೇತನ ಮತ್ತು ಭದ್ರಚೇತನ; ಬ್ರಹ್ಮಚೇತನ, ಆತನ ವೀರತನ, ಭದ್ರತನ ಮುಖ್ಯವಾಗಿ ನಾಲ್ಕು ತೆರನಾಗಿದೆ. ಅದು ನಾಮ-ರೂಪ, ಗುಣ-ಕ್ರಿಯಾತ್ಮಕವಾಗಿದೆ. ಅಣಿವೀರನು ನಾಮದಲ್ಲಿ ವೀರ, ರೂಪದಲ್ಲಿ ವೀರ, ಗುಣಗಳಲ್ಲಿ ವೀರ, ಕ್ರಿಯೆಗಳಲ್ಲಿ ವೀರ ಇದು ಈತನದೇ ಆದ ವೈಶಿಷ್ಟ್ಯ. ಇದರಿಂದಾಗಿ ಈತನನ್ನು ವೀರಭದ್ರ ಚನ್ನಮಲ್ಲ, ಚನ್ನವೀರ, ಶಾಂತವೀರ, ಸಿದ್ಧಮಲ್ಲ, ಶಾಂತಮಲ್ಲ ಎಂದು ಮುಂತಾಗಿ ಹೇಳುವ ಹೆಸರಿಸುವ ರೂಢಿಯಿರುವಂತೆ "ಅಣಿವೀರಭದ್ರ" ಎಂದು ಹೇಳಲಾಗುತ್ತದೆ.

---

೧. "ರುದ್ರಪುತ್ರ ಅಣಿ ವೀರಭದ್ರ" ಲೇ. ಶ್ರೀ ಎಮ್. ಕೆ. ಅಣೆಪ್ಪನವರ, ಅನುಪಮ ಪ್ರಕಾಶನ ಅಥಣಿ.
೨. "ರುದ್ರಪುತ್ರ ವೀರಭದ್ರ" ಲೇ. ಶ್ರೀ ಎಮ್. ಎಸ್. ಅಣೆಪ್ಪನವರ, ೧೯೯೦ರಲ್ಲಿ ಅನುಪಮ ಪ್ರಕಾಶನ ಅಥಣಿ.
೩. "ರುದ್ರಪುತ್ರ ವೀರಭದ್ರ" ಪದ್ಯ-೨೨, ಪುಟ-೫೫

ಅಣಿವೀರನು ವ್ಯಾಳಾಪೂರ, ಮೇಘಾಸುರ, ಮಾತಂಗಾಸುರ, ಪಂಚಮೇಘ್ರಾಸುರಾದಿಗಳನ್ನು ಶಿಕ್ಷಿಸಿ ಲೋಕವನ್ನು ಕಂಟಕಗಳಿಂದ ಶಿಕ್ಷಿಸುವನು. ಬಹು ಭಕ್ತರ ಬೇಡಿಕೆಗಳಂತೆ ಹಲವು ಹತ್ತು ಕಡೆ ನೆಲೆಸಿರುವನು. ಬೇರೆ ಬೇರೆ ಹೆಸರುಗಳಿಂದ ಕೋಲಕುಂದಿ, ಹಲ್ಲಕರಟಿ, ಹೆಬ್ಬಾಳ ಕೋಲ್ವಾರ ಮೊದಲಾದ ನಾಡಿನ ಊರುಗಳಲೆಲ್ಲ ಇದ್ದು ಆ ಊರುಗಳ ಭಕ್ತರನ್ನು ಸಿದ್ಧನಾಗಿ ಸದಾ ಉದ್ಧರಿಸುತಿಹನು. ಇದರಿಂದಾಗಿ ಆತನಿಗೆ,

"ಅಣಿವೀರಭದ್ರನು ಅಣಿಯಾಗಿ ನಿಂತಿಹ
ಜನ ಭಕ್ತಿಯಿಂ ಬೇಡಿದ ವರ। ನೀಡಲು
ಅಣಿಭಾಗದ ಉಭಯ ಸ್ಥಲದಿ॥

ಎಂದು ಕೊನೆಗೆ ಅಣಿವೀರಭದ್ರನೆಂಬ ಅರ್ಥವತ್ತಾದ ಸಾರ್ಥಕವಾದ ಸಲ್ವೆಸರು ಸಮನಿಸಿತೆಂದು ಕಾವ್ಯವನ್ನು ಕೊನೆಗಾಣಿಸುವನು ಕವಿ.

ಈ ಕೃತಿಯು ದೈವಭಕ್ತಿಯ ದೈನ್ಯತೆಗೆ ಧ್ವನಿಯಾಗಿದೆ. ಇಲ್ಲಿ ಭಾವೈಕ್ಯತೆ ಮತ್ತು ಆದರ್ಶ ಚಿತ್ರಣವಿದೆ. ಶ್ರೀ ವೀರಭದ್ರನ ವೀರಗಣಾಚಾರವೊಂದನ್ನೇ ಎತ್ತಿ ತೋರದೆ ಅನೇಕ ಘಟನೆಗಳ ಸರಪಳಿಯನ್ನು ಕಾಣಬಹುದು.

೧೬) ಶಿವಯೋಗಿಯ ಶಿವಲೀಲೆ :

ಮೋಹನ. ಶಿ. ಅಣೆಪ್ಪನವರ ಅವರು ಬರೆದ "ಶಿವಯೋಗಿಯ ಶಿವಲೀಲೆ" ಎಂಬ ಜನಪದ ಸಾಹಿತ್ಯ ತ್ರಿಪದಿಯನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ಕನ್ನಡ ನಾಡಿನಲ್ಲಿ ಮಹಾತ್ಮರ ಅವತಾರ ಕಾಲಕಾಲಕ್ಕೆ ಆಗುತ್ತಾ ಬಂದಿದೆ. ಇಂತಹ ಪುಣ್ಯ ಪುರುಷರಲ್ಲಿ ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನಲ್ಲಿ ಇಂಗಳಗಾವಿ ಎಂಬಲ್ಲಿ ಅವತರಿಸಿ, ಅಥಣಿ ಗಚ್ಚಿನ ಮಠದಲ್ಲಿ ವಾಸವಾಗಿದ್ದ ಶ್ರೀ ಮುರುಘೇಂದ್ರ ಶಿವಯೋಗಿಗಳು ಅಗ್ರಗಣ್ಯರು. "ಶಿವಯೋಗಿ" ಎಂಬ ಶಬ್ದ ಕಿವಿಗೆ ಬಿದ್ದಾಕ್ಷಣವೇ ಶ್ರೀ ಅಥಣಿ ಮುರುಘೇಂದ್ರ ಶಿವಯೋಗಿ ಎಂದೇ ನೆನಪು ಮೂಡುತ್ತದೆ.

ಎಲ್ಲರಂತೆ ಹುಟ್ಟಿ ಎಲ್ಲರಂತೆ ಬೆಳೆದರು ಎಲ್ಲರಿಗೂ ಹೊರತಾದ ಬಾಳನ್ನು ಬಾಳಿ, ಹನ್ನೆರಡನೇ ಶತಮಾನದಲ್ಲಿನ ಬಸವಾದಿ ಪ್ರಮಥರ ಅನುಭಾವದಿಂದ ಹೊರಬಿದ್ದ "ವಚನ"ಗಳ ದಾರಿಯಲ್ಲಿ ಚಾಚು ತಪ್ಪದಂತೆ ಸಾಗಿದ ಈ ಮಹಾಪುರುಷನ ಪಾದಕ್ಕೆ ಮಣಿದು ಖಗ-ಮೃಗಗಳೆಲ್ಲ ಸಹ ಕೃತಾರ್ಥವಾಗಿದೆ. ಇಂತಹ ಮಹಾಶಿವಯೋಗಿಯ ಚರಿತ್ರೆ, ಇಂದಿನ ಸಮಾಜಕ್ಕೆ ಆದರ್ಶಪ್ರಾಯ. ಅಂತೆಯೇ ಅನೇಕ ಕವಿಗಳು ಶ್ರೀ ಶಿವಯೋಗಿಗಳ ಚರಿತ್ರೆಯನ್ನು ಕಾವ್ಯ, ಪುರಾಣವಾಗಿ ರಚಿಸಿದ್ದರು. ಆದರೆ ಸಾಮಾನ್ಯ ಜನತೆಗೆ ಶಿವಯೋಗಿಯ ಜೀವನವನ್ನು ಸರಳವಾಗಿ ಹಾಡಿನಲಿಯಲು, ಭಕ್ತಿಯಿಂದ ಆರಾಧಿಸಲು ಯೋಗ್ಯವಾದ ಸಾಹಿತ್ಯ ಬರಬೇಕಿತ್ತು ಅಂತಹ ಕಾರ್ಯವನ್ನು ಆಶುಕವಿಗಳು ಆದ

ಸಾಹಿತಿ ಶ್ರೀ ಮೋಹನ. ಶಿ. ಅಣೆಪ್ಪನವರರವರು ಮಾಡಿದ್ದಾರೆ. ಅಥಣಿಯ ಶ್ರೀ ಪುರಾತನೇಶ್ವರ ಮುದ್ರಣಾಲಯದ ಒಡೆಯರಾದ ಶ್ರೀಯುತ ಶಿವಲಿಂಗಪ್ಪ. ಶಿ. ಅಣೆಪ್ಪನವರ ಇವರ ಸುಪುತ್ರರಾದ ಇವರು ಜನಪದ ಸಾಹಿತ್ಯದ ತ್ರಿದಿಯ ಶೈಲಿಯಲ್ಲಿ ನುಡಿಗಬ್ಬು ಕೊಟ್ಟು ಶ್ರೀ ಶಿವಯೋಗಿಯ ಚರಿತ್ರೆಯನ್ನು ಪೂರ್ಣವಾಗಿ ಈ ಪುಸ್ತಕದಲ್ಲಿ ಹೆಣೆದಿದ್ದಾರೆ. ಇದರಲ್ಲಿಯ ಕೆಲವು ತ್ರಿಪದಿಗಳನ್ನು ಅರ್ಥೈಸಲಾಗಿದೆ.

ಮುರುಘೇಶನ ಚರಿತವ ಬರೆಯಲು ನಾನೇಷ್ಟರವ?
ಗುರು ತಾ ಅಂತರಂಗದಿ। ನುಡಿಸಿದಂತೆ ಶಿವಯೋಗಿ
ಗುರುವಿನ ಮಹಿಮೆ ಬರೆದಿರುವೆ.

ಶ್ರೀ ಮುರುಘೇಂದ್ರ ಶಿವಯೋಗಿಯವರ ಚರಿತ್ರೆಯನ್ನು ಬರೆಯಲು ನಾನು ಎಷ್ಟರಮಟ್ಟಿನವನು ಗುರುವು ನುಡಿಸಿದಂತೆ ಶಿವಯೋಗಿ ಗುರುವಿನ ಮಹಿಮೆಯನ್ನು ಭಕ್ತಿಯಿಂದ ಬರೆದಿರುವೆನು ಎಂದಿದ್ದಾರೆ.

ಗೌರಮ್ಮನ ಮಗನಾಗಿ ಪರಮ ಚತುರನೆನೆಸಿದ
ಶರಣ ಗಣಪತಿಗೆ ನಮಿಸುವೆ। ಶಿವಯೋಗಿ
ಚರಿತೆ ಬರೆಸಲಿ ಕೈಹಿಡಿದು

ಗೌರಮ್ಮನ ಮಗನಾದ ಪರಮಚತುರನಾದ ಶರಣ ಗಣಪತಿಗೆ ನಮಸ್ಕರಿಸುವೆನು, ಶಿವಯೋಗಿ ಚರಿತ್ರೆ ಬರೆಯುವಾಗ ಕೈಹಿಡಿದು ಬರೆಸಲಿ ಎಂದಿದ್ದಾರೆ.

ವರವನ್ನು ಬೇಡುವೆ ಸರಸತಿಗೆ ಶಿರಬಾಗಿ
ಹರಸು ಮಾತೆಯೆ ಸಂತಸದಿ। ಶಿವಯೋಗಿ
ಚರಿತೆ ಬರೆಸಮ್ಮಾ ಕೈಹಿಡಿದು

ಈ ತ್ರಿಪದಿಯಲ್ಲಿ ಭಕ್ತಿಯಿಂದ ಸರಸ್ವತಿಗೆ ಶಿರಬಾಗಿ ವರವನ್ನು ಬೇಡುವೆ ಸಂತೋಷದಿಂದ ಹರಸಿ ಶಿವಯೋಗಿಗಳ ಚರಿತ್ರೆಯನ್ನು ಕೈಹಿಡಿದು ಬರೆಸಬೇಕೆಂದು ಲೇಖಕರು ಬೇಡಿಕೊಂಡಿದ್ದಾರೆ.

ಮಹಾಮಹೀಮರಾದ ವೈರಾಗ್ಯಮೂರ್ತಿ, ಪರಮಪೂಜ್ಯ ಶ್ರೀ ಮುರುಘೇಂದ್ರ ಶಿವಯೋಗಿಗಳ ಕುರಿತು ಜನಪದ ಸಾಹಿತ್ಯದ ತ್ರಿಪದಿಯಲ್ಲಿ ಅತ್ಯಂತ ಸರಳವಾದ ಭಾಷೆಯಲ್ಲಿ ಸಾಮಾನ್ಯರಿಗೂ ಆ ಮಹಾ ಶಿವಯೋಗಿಯ ವೀರವೈರಾಗ್ಯದ ದಿವ್ಯ ಬದುಕನ್ನು ತಿಳಿಸಲು ಲೇಖಕರು ಪ್ರಯತ್ನಿಸಿದ್ದಾರೆ.

---

೧. "ಶಿವಯೋಗಿಯ ಶಿವಲೀಲೆ" ಜನಪದ ಸಾಹಿತ್ಯ ತ್ರಿಪದಿಯ ಲೇ. ಎಸ್. ಎಸ್. ಅಣೆಪ್ಪನವರ ೧೯೮೯ರಲ್ಲಿ ಅಥಣಿಯ ಅನುಪಮ ಪ್ರಕಾಶನದ ಪ್ರಕಟಣೆ.
೨. "ಶಿವಯೋಗಿಯ ಶಿವಲೀಲೆ" ಪದ್ಯ–೧, ಪುಟ–೩
೩. "ಶಿವಯೋಗಿಯ ಶಿವಲೀಲೆ" ಪದ್ಯ–೬, ಪುಟ–೪
೪. "ಶಿವಯೋಗಿಯ ಶಿವಲೀಲೆ" ಪದ್ಯ–೭, ಪುಟ–೫

೧೭) ಶಿವಶರಣ ಮಹಾಪ್ರಸಾದಿ ಡೋಹರ ಕಕ್ಕಯ್ಯ :

ಶ್ರೀ ಶಂಕರಗೌಡ. ಮ. ಬಿರಾದಾರ ಅವರು ಬರೆದ "ಶಿವಶರಣ ಮಹಾಪ್ರಸಾದಿ ಡೋಹರ ಕಕ್ಕಯ್ಯ" ಎಂಬ ವ್ಯಕ್ತಿ ಚಿತ್ರಣ ಕೃತಿಯಿದು. ಅಥಣಿಯ ಅನುಪಮ ಪ್ರಕಾಶನ ಪ್ರಕಟಿಸಿದೆ.

ಡೋಹರ ಕಕ್ಕಯ್ಯನು ತನ್ನ ಸತ್ಯನಿಷ್ಠ ಕಾಯಕದಿಂದ; ಅನುಭಾವದಿಂದ ಹಾಗೂ ಸಿದ್ಧಿಸಿಕೊಂಡ ಪ್ರಸಾದ ಮಹತಿಯಿಂದ ಮಹಾಪ್ರಸಾದಿ ಕಕ್ಕಯ್ಯನಾದನು. ಮಹಾನುಭಾವಿ ಬಸವಣ್ಣನವರಿಂದ "ಅಪ್ಪ ಡೋಹರ ಕಕ್ಕಯ್ಯ" ಎಂದೆನಿಸಿಕೊಳ್ಳುವಷ್ಟು ಮಹೋನ್ನತ ಮಟ್ಟಕ್ಕೆ ಏರಿದ್ದನು. ಆದ್ದರಿಂದ ಡೋಹರ ಕಕ್ಕಯ್ಯನ ಹೆಸರು ತೆಗೆದುಕೊಳ್ಳದ ವೀರಶೈವ ಸಾಹಿತ್ಯ ಕೃತಿಗಳೇ ಇಲ್ಲವೆಂದರೂ ಅತಿಶಯೋಕ್ತಿಯಾಗಲಾರದು. ವೀರಶೈವ ಪುರಾಣ, ವಚನ, ಶಾಸನ, ಸಾಹಿತ್ಯ ಚರಿತ್ರೆಗಳಲ್ಲಿ ಅಲ್ಲಲ್ಲಿ ಪ್ರಸ್ತಾಪಗೊಂಡಿದ್ರೂ ಅಷ್ಟು ಸಮಾಧಾನಕರವಾಗುವಷ್ಟು ಪ್ರಕಟಗೊಂಡಿಲ್ಲ. ಇವರ ವಚನಗಳ ಸ್ಥಿತಿಯೂ ಅಷ್ಟೇ! ಹೀಗಿದ್ದು, ಮಹಾರಾಷ್ಟ್ರದ ಸೊಲ್ಲಾಪೂರ ಜಿಲ್ಲೆಯ ಡೋಹರ ಸಮಾಜದವರ ಆಗ್ರಹದ ಮೇರೆಗೆ ಶಕ್ಯವಿದ್ದ ಮಟ್ಟಿಗೆ ಡೋಹರ ಕಕ್ಕಯ್ಯನವರನ್ನು ಒಂದು ಪ್ರತ್ಯೇಕ ಕಿರುಗ್ರಂಥ ಮೂಲಕವಾದರೂ ಪರಿಚಯಿಸಬೇಕೆಂದು ಈ ಕೃತಿಯನ್ನು ಬರೆದಿರುವುದಾಗಿ ತಿಳಿಸಿದ್ದಾರೆ.

ಡೋಹರ ಕಕ್ಕಯ್ಯನ ಕಾಲ ದೇಶ :

ಡೋಹರ ಕಕ್ಕಯ್ಯನು ಕ್ರಿ.ಶ. ೧೦೨೦ರಿಂದ ೧೧೬೨ರ ಕಾಲಾವಧಿಯಲ್ಲಿ ಜೀವಿಸಿದ್ದನೆಂದು ತಿಳಿದು ಬರುವುದು. ಡೋಹರ ಕುಲದ ಈ ಶರಣನ ಊರಾದ 'ಬೆಜವಾಡ'ವು ಮಾಳವ ದೇಶದಲ್ಲಿ ಬರುವುದರಿಂದ ಈತ ಮಾಳವ ದೇಶದವನೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಡೋಹರನೆಂದರೆ ಅಂತ್ಯಜ ಸ್ವಪಚಯೆಂದು ಅರ್ಥೈಸಿದ್ದಾರೆ. ಮಾಳವ ದೇಶದ ಅಂತ್ಯಜನಾಗಿ ಹುಟ್ಟಿದ ಈ ಶರಣ ವಿಶ್ವಜ್ಯೋತಿ ಬಸವಣ್ಣನವರ ಸಮತಾವಾದದ ಆಕರ್ಷಣೆಯಿಂದ ಕನ್ನಡ ನಾಡಿಗೆ ಬಂದು ಶರಣ ಧರ್ಮವನ್ನು ಮೈಗೂಡಿಸಿಕೊಂಡು ಅದನ್ನೇ ಪ್ರಾಣ-ಪ್ರಸಾದವನ್ನಾಗಿಸಿಕೊಂಡು ಕಲ್ಯಾಣ ಪಟ್ಟಣದಲ್ಲಿ ನೆಲೆಸಿದನು.

ಮಹಾಪ್ರಸಾದಿ ಕಕ್ಕಯ್ಯ :

ಶಿವನಿಷ್ಠನಾದ ಕಕ್ಕಯ್ಯ ಕಲ್ಯಾಣದಲ್ಲಿ ಪವಾಡಗಳನ್ನು ಮೆರೆಯುವುದರೊಂದಿಗೆ ಪ್ರಸಾದನಿಷ್ಠನೂ ಆಗಿದ್ದನು. ತೊಗಲು ಹದಮಾಡುವ ಸತ್ಯ ಶುದ್ಧ ಕಾಯಕದಿಂದ ಬಂದ ಫಲದಿಂದ

---

೧. "ಶಿವಶರಣ ಮಹಾಪ್ರಸಾದಿ ಡೋಹರ ಕಕ್ಕಯ್ಯ" ಲೇ. ಗಂಭೀಶಂ ೨೦೦೧ರಲ್ಲಿ ಅನುಪಮ ಪ್ರಕಾಶನ ಅಥಣಿ.

೨. ಶರಣ (ತ್ರೈಮಾಸಿಕ) ಸಂ. ಶರಣ ಟಿ. ಎಸ್. ಕಲ್ಯಾಣಿ, ಸಂಪುಟ ಸಂಚಿಕೆ ೪, ಅಗಸ್ಟ ೧೯೮೩, ಪುಟ-೧೩೫

ಪ್ರತಿನಿತ್ಯ ಜಂಗಮ ದಾಸೋಹ ನಡೆಸುತ್ತಿದ್ದನು. ತ್ರಿಕಾಲ ಪೂಜಕನು ತ್ರಿವಿಧ ಭಕ್ತನೂ ಆದ ಡೋಹರ ಕಕ್ಕಯ್ಯನು ಜಂಗಮದಾಸೋಹ ಮಾಡದೆ ತಾನು ಪ್ರಸಾದ ಸ್ವೀಕರಿಸೆನೆಂಬ ನಿಷ್ಠೆಯನ್ನು ಪಾಲಿಸಿಕೊಂಡು ಬಂದಿದ್ದನು; ಕಕ್ಕಯ್ಯನ ಪುಣ್ಯಸ್ತ್ರೀಯೂ ಅಷ್ಟೇ ನಿಷ್ಠಾವಂತಳಾಗಿದ್ದಳು. ಕಾಯಕ, ಭಕ್ತಿ, ದಾಸೋಹ ಹಾಗೂ ಪ್ರಸಾದದಲ್ಲಿ ಕಕ್ಕಯ್ಯನ ನೆರಳಾಗಿ ಅನುಸರಿಸುತ್ತಿದ್ದಳು. ಸತಿ-ಪತಿಗಳೊಂದಾದ ಇವರ ಭಕ್ತಿ ಶಿವಂಗೆ ಹಿತವಾಗಿತ್ತು.

ಮಹಾನುಭಾವಿ ಕಕ್ಕಯ್ಯ :

ಅನುಭವ ಮಂಟಪದ ಅನುಭವಗೋಷ್ಠಿಯಲ್ಲಿ ವಿಚಾರಮಂಥನಗೈದ ಶರಣರಲ್ಲಿ ಕಕ್ಕಯ್ಯನು ಅಗ್ರಗಣ್ಯನಾಗಿದ್ದಾನೆ. ಬಸವಾದಿ ಶರಣರ ಬಹುತೇಕ ವಚನಕಾರರಲ್ಲಿ ಕಕ್ಕಯ್ಯನು ಒಬ್ಬ. ಆದರೆ ಕಕ್ಕಯ್ಯನು ರಚಿಸಿದ ಆರು ವಚನಗಳು ಮಾತ್ರ ಉಪಲಬ್ಧವಿದೆ. ಈತನ ಹೆಚ್ಚು ವಚನಗಳು ಸಿಕ್ಕಿಲ್ಲವೆಂದರೆ ಈತ ವಚನಕಾರನಲ್ಲ. ಅನುಭಾವಿಯಲ್ಲವೆಂದು ಪರಿಗಣಿಸಲಿಕ್ಕೆ ಬರುವುದಿಲ್ಲ. ಒಂದೇ ಒಂದು ವಚನದಿಂದಲೂ ಅವರ ಮಹತಿಯನ್ನು ಅರಿಯಬಹುದು.

"ಕಷ್ಟ ಜಾತಿ ಕೀಳು ಕುಲದಲ್ಲಿ
ಹುಟ್ಟಿಸಿದೆಯಯ್ಯ ಎಲೆ ಲಿಂಗ ತಂದೆ
ಕೆಟ್ಟೆನಯ್ಯ ನಿಮ್ಮ
ಮುಟ್ಟಿ ಪೂಜಿಸಿದಡೆ ಪೂಜೆಗೊಳ್ಳೆನೆಂಬೆ ನನ್ನ ಕೈ
ಮುಟ್ಟದಿದ್ದರೆ ಮನ ಮುಟ್ಟಲಾಗದೆ?
ಅಭಿನಮ ಮಲ್ಲಿಕಾರ್ಜುನ"
(ಡೋಹರ ಕಕ್ಕಯ್ಯ ಪುಟ-೨೧)

ಅಂದಿನ ಸ್ಥಾವರಪೂಜೆಗೆ ತನಗೆ ಅವಕಾಶವಿಲ್ಲದುದನ್ನು ತನ್ನ ಈ ವಚನದಲ್ಲಿ ಕಕ್ಕಯ್ಯನು ಸ್ಪಷ್ಟವಾಗಿ ನಿರೂಪಿಸಿದ್ದಾನೆ. ನನ್ನನ್ನು ಕೀಳುಕುಲದಲ್ಲಿ ಹುಟ್ಟಿಸಿದ ಎಲೆ ಲಿಂಗ ತಂದೆಯೆ

'ಮುಟ್ಟಿ ಪೂಜಿಸದೆ ಕೆಟ್ಟೆನು ಆದರೇನಾಯಿತು?
ನನ್ನ ಕೈ ಮುಟ್ಟದಿದ್ದರೆ ನನ್ನ ಮನ ಮುಟ್ಟಲಾಗದೆ?'

ಮನ ಮುಟ್ಟುವುದನ್ನು ಸಮಾಜದ ಯಾರಿಂದಲೂ ತಡೆಯಲಾಗದು ಎಂಬ ಮಾತು ಇಲ್ಲಿ ಸ್ಪಷ್ಟವಾಗಿದೆ.

ಹೀಗೆ ಸಿದ್ಧ ಅನುಭಾವಿಯ ನಿಲುವಿನಲ್ಲಿ ನಿಂತ ಮಹಾಶರಣ, ಮಹಾಮನೆ ಮತ್ತು ಅನುಭಾವ ಮಂಟಪದ ಚರ್ಚೆಗಳಲ್ಲಿ ಭಾಗವಹಿಸಿ ತಮ್ಮ ಅನುಭವಗಳನ್ನು ಅನುಭೋಗಿಸುವವರಾಗಿದ್ದರು. ಈ ರೀತಿ ಶರಣಧರ್ಮದ ಸಫಲತೆಗಾಗಿ ಶ್ರಮಿಸಿದ ಮಹಾನುಭಾವಿ

ಕಕ್ಕಯ್ಯ ಶರಣರು ಕನ್ನಡ ನಾಡಿನ ಧರ್ಮ ಮತ್ತು ಸಂಸ್ಕೃತಿಗೆ ಜ್ಞಾನ ದಾಸೋಹ ನೀಡಿದರಲ್ಲದೆ ಇಡೀ ಭಾರತದ ಧರ್ಮಕ್ಕೂ, ಜಗದ ಮಾನವತಾವಾದಕ್ಕೂ ತಮ್ಮ ವಚನಗಳ ಮುಖಾಂತರ ಅಮೂಲ್ಯವಾದ ಅನುಭಾವದ ಕೊಡುಗೆಯನ್ನು ಕೊಟ್ಟಿದ್ದಾರೆ. ಕಾಯಕದಲ್ಲಿಯೇ ಶಿವಲೋಕವನ್ನು ಕಂಡು ಜೀವಿಸಿದ ಮಹಾಪ್ರಸಾದಿ ಮಹಾನುಭಾವಿ ಭವ್ಯ ಜೀವಿ ಕಕ್ಕಯ್ಯ.

೧೮) ಸ್ಮೃತಿ ಗಂಧ :

ವಿಜಯ. ಎಸ್. ಕರೋಲಿ ಅವರ ಕವನ ಸಂಗ್ರಹ "ಸ್ಮೃತಿ ಗಂಧ"ವನ್ನು ಅನುಪಮ ಪ್ರಕಾಶನದವರು ಪ್ರಕಟಣೆ ಮಾಡಿದ್ದಾರೆ. ಈ ಸಂಕಲನದ ಕವಿ ಕನ್ನಡ-ಮಹಾರಾಷ್ಟ್ರ ಗಡಿಭಾಗದವರು. ಕನ್ನಡವನ್ನು ಪ್ರೀತಿಸುವರು. ಕನ್ನಡವನ್ನು ತಮ್ಮ ಹೃದಯದ ಭಾಷೆಯಾಗಿ ಇಟ್ಟುಕೊಂಡವರು. ಅವರ ಸಂಕಲನವು 'ಜನ ಭಾವ'ದ ಪ್ರತ್ಯಕ್ಷ ರೂಪವಾಗಿರುವುದನ್ನು ಕಾಣಬಹುದಾಗಿದೆ.

ಕರೋಲಿ ಅವರು ನೆನಪನ್ನು ಪೂರ್ವಭಿತ್ತಿಯಾಗಿಟ್ಟುಕೊಂಡಿದ್ದಾರೆ. ಇದು ಅವರ ಸಂಕಲನದ ಮುಖ್ಯ ಧಾತು. ನೆನಪುಗಳ ಮೂಲಕ ಪೂರ್ವದ ಚರಿತ್ರೆಗೆ ಪ್ರವೇಶಿಸುವುದು ಒಂದು ಅನ್ಯಾದೃಶ ಅನುಭಾವವೇ ಸರಿ. ಇಂಥ ಅನ್ಯಾದೃಶ ಅನುಭವವನ್ನು ನವೋದಯ-ನವ್ಯದ ಕವಿಗಳು ಬೇರೆ ಬೇರೆ ರೀತಿಗಳಲ್ಲಿ ಗ್ರಹಿಸಿದ್ದಾರೆ. ಕರೋಲಿ ಅವರು ಅದೇ ದಾರಿ ಹಿಡಿದು ನಡೆದಿದ್ದಾರೆ. ಮೊದಲು ಕವಿತೆ ಬೇಡಿಕೆಯಲ್ಲಿ ಬರುವ ಈ ಸಾಲುಗಳನ್ನು ಗಮನಿಸಬಹುದು :

"ಮರಳಿ ಬರಲಿ, ನವ ಚೈತನ್ಯ
ಚಿಲುಮೆಯಂತೆ ಪುಟಿಯುತಾ
ಪರ್ಜನ್ಯದಂತೆ ಸುರಿಯುತಾ
ಪ್ರಭಾವದಂತೆ ಬೆಳಗುತಾ"

ಈ ಕವಿತೆ ಪದಗಳ ಮೇಲೆ ಉತ್ತಮ ಹಿಡಿತವಿರುವುದು ಕಂಡು ಬರುತ್ತದೆ. ಒಬ್ಬ ಕವಿಗೆ ಪದಗಳ ಮೇಲೂ ಅರ್ಥದ ಮೇಲೂ ಒಳ್ಳೇಯ ಹಿಡಿತವಿರುವುದು ಅಗತ್ಯವಾಗಿದೆ. ಸ್ವಾಧ್ಯಾಯದ ಜತೆಗೆ 'ಪ್ರತಿಭೆ'ಯೂ ಸೇರಿದರೆ ಚಂದದ ಕವಿತೆಗಳು ಬರುತ್ತವೆ. ಕರೋಲಿ ಜನಸಾಮಾನ್ಯರೆಲ್ಲರೂ ಲಲಿತವಾಗಿ ಓದಬಹುದಾದ ಕವಿತೆಗಳನ್ನು ಬರೆದಿದ್ದಾರೆ. ಇಲ್ಲಿಯ ಕವಿತೆಗಳು ನಾಡ ಪ್ರೇಮವನ್ನು ಭಾಷಾ, ಪ್ರೇಮವನ್ನು ಸಮುದಾಯದ, ಪ್ರೇಮವನ್ನು ಮಾನವ ಭಾವವನ್ನು ಎತ್ತಿ ಹಿಡಿಯುತ್ತವೆ. ಸರಳ ಕವಿತೆಗಳು ಈ ಸಂಕಲನದ ತುಂಬಾ ತೊರೆಯಾಗಿ ಹರಿಯುತ್ತವೆ.

---

೧. "ಸ್ಮೃತಿ ಗಂಧ" ಕವನ ಸಂಗ್ರಹ ವಿ. ಎಸ್. ಕರೋಲಿ ೨೦೦೬ರಲ್ಲಿ ಅನುಪಮ ಪ್ರಕಾಶನ ಅಥಣಿ.
೨. "ಸ್ಮೃತಿ ಗಂಧ" ಪದ್ಯ-೧, ಪುಟ-೧
೩. "ಸ್ಮೃತಿ ಗಂಧ" ಚುಟುಕು, ಪುಟ-೪೨

ಜಾನಪದ ಮಟ್ಟಗಳ ಲಾವಣಿ ಪ್ರಕಾರವನ್ನು ತಮ್ಮ ಕೆಲವು ಕವಿತೆಯ ವಸ್ತುವಾಗಿ ಮಾಡಿಕೊಂಡಿದ್ದಾರೆ. ಇಂಥ ಕೆಲವು ಕವಿತೆಗಳನ್ನು ಈ ಸಂಕಲನದಲ್ಲಿ ಕಾಣಬಹುದು. 'ರಾವುತರು ರೈನೂರು' ಎಂಬ ಕವಿತೆಯ ಈ ಕೆಲವು ಸಾಲುಗಳು ಉದಾಹರಣೆಯಾಗಿವೆ.

"ಬಿಚ್ಚುಗತ್ತಿ ತಿರ್ವಕೋತ ಚಂಡಾಡ್ಯಾರೋ
ಅರಿಸೇನಾ ವ್ಯೂಹಾ ಮಾಡಿ ಇಟ್ರೋ ಇವ್ರು ಅರಿಬಂಟ್ನರ್ನ
ಕುಟ್ಟಿ ಪುಡಿ ಪೂರಾ"

ಇದು ಲಾವಣಿ ರೂಪದ ಕವಿತೆಯ ಛಾಯೆಯಿದ್ದರೂ ಉತ್ತರ ಕರ್ನಾಟಕದ ದೇಸಿಮಾತಿನ ಸೊಗಡಿನಿಂದ ನಮ್ಮ ಮನಸ್ಸನ್ನು ಸೆಳೆಯುತ್ತದೆ.

ಕರೋಲಿ ಅವರು ಚುಟುಕುಗಳನ್ನು ಬರೆದಿದ್ದಾರೆ. ಅವುಗಳೆಂದರೆ,

ಕೇಳದಿರು ನೀನ್ಯಾರನೂ
ಹೇಳದಿರು ನೀ ಯಾರಿಗೆ
ತಳ್ಳುತಿರುವಾಗ ದೇವನೂ
ಅಳುಕದಿರು ನೀ ಸಾವಿಗೂ
ಚಂಗು ಚಂಗೆಂದು ಹಾರುವುದು ನನ್ನ ಸ್ವಭಾವಸ್ವಾಮಿ,
ಮಂಗ ನಾನು, ನೀನು ಮಾನವ ಘಾಟಿ ಆಸಾಮಿ,
ನಾನು ಹಾರುವುದು ಗಿಡದಿಂದ ಗಿಡಕೆ ನನ್ನೊಬ್ಬನ
ಹೊಟ್ಟೆಗಾಗಿ ಹೊಟ್ಟೆ ತುಂಬಿದ ಮೇಲೂ ನೀ
ಪಕ್ಷದಿಂದ ಪಕ್ಷಕ್ಕೆ ಹಾರಿದ್ದು ಯಾರಿಗಾಗಿ?

"ಮೋಡ ಮೋಡನು ನೋಡಿ ನಕ್ಕಾಗ
ಮಿಂಚು ಕಾಣುವುದು
ಮೋಹಿನಿ ನೀನಕ್ಕಾಗ ನನ್ನಲ್ಲಿಯೇ
ಮಿಂಚು ಹರಿವುದು"
(ಚುಟುಕು ಪುಟ –೪೨)
ತನ್ನ ತಾನೆ ಹೊತ್ತಿ ಉರಿದು ಜಗವ
ಬೆಳಗುತಿರುವವರ ರವಿ
ತನ್ನ ನೋವನು ತಾಳಿಕೊಂಡು
ಜಗಕೆ ಸಾಂತ್ವನ ಹೇಳುತೀಹ ಕವಿ

ಈ ಮೇಲಿನ ಚುಟುಕುಗಳು ವರ್ತಮಾನದ ಸಮಸ್ಯೆಗಳ, ಸಕೀರ್ಣಗಳ ವಿವಿಧ ತುಮುಲ ಭಾವಗಳನ್ನು ಹಲವು ರೀತಿಯಿಂದ ಹೊರಳಿಸಿ ನೋಡಿದ್ದಾರೆ. ಕೆಲವು ಕವಿತೆಗಳು 'ಗದ್ಯಾಲಯ'ವನ್ನು

ಒಳಗೊಂಡಿದೆ. ಗದ್ಯಗಂಧೀಲಯಗಳು, ಭಾವ ಪ್ರಧಾನವಾದ ಛಾಯೆಗಳು, ಅಲ್ಲಲ್ಲಿ ಇಣುಕಿ ಹಾಕಿರುವುದುಂಟು.

ಕರೋಲಿಯವರು ಕಾವ್ಯಭಾವದ ನೆರಳು-ಬೆಳಕನ್ನು ಹಿಡಿದಿದ್ದಾರೆ. ಬೆಳಕಿಗಿಂತ ಹೆಚ್ಚಾಗಿ ನೆರಳು ಕುದಿಯುವಂತೆ ಮಾಡಿಸಿದ್ದಾರೆ. ಭಾವ-ಭಾವದ ಒಡಲು ಎಲ್ಲ ಕವನಗಳಲ್ಲಿ ಒಳ್ಳೇಯದಾಗಿ ಮೂಡಿಬಂದಿದೆ. ಕನ್ನಡ ಕಾವ್ಯ ನಿಷ್ಠೆ ಸಂಕಲನದ ಕೇಂದ್ರ ಆಶಯವಾಗಿದೆ.

೧೯) ಹಾಲ್ದೆನೆ :

ಡಾ. ಸಿದ್ದಯ್ಯಾ ಪುರಾಣಿಕ ಅವರು ರಚಿಸಿದ "ಹಾಲ್ದೆನೆ" ಕವನ ಸಂಗ್ರಹವನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ಅನುಭಾವ ಸಾಹಿತ್ಯವನ್ನು ಸಾಮಾಜಿಕ ಪ್ರಜ್ಞೆಯೊಂದಿಗೆ ಬೆಸೆದು ಮೌಲಿಕವಾದುದನ್ನು ನೀಡುತ್ತ ಬಂದಿರುವ ಕವಿ ಸಿದ್ದಯ್ಯ ಪುರಾಣಿಕ ಕಾವ್ಯ ಸತ್ವಯುತವಾಗಿದೆ. ಭಾವನೆಯ ಸೂಕ್ಷ್ಮ ಪರಿಕರಗಳನ್ನು ಕಲಾತ್ಮಕವಾಗಿ ಸಹಜವಾಗಿ ಅಭಿವ್ಯಕ್ತಿಗೊಳಿಸಿ ಅವರು ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಸಿರಿವಂತಗೊಳಿಸಿದ್ದಾರೆ. ಮಾನವೀಯತೆ ಅವರ ಸಾಹಿತ್ಯದ ಒಳದನಿಯಾಗಿದೆ. ನಮ್ಮ ಭಾಷೆ ಹಾಗೂ ಸಂಸ್ಕೃತಿಯ ಸತ್ವವನ್ನು ಸೂಕ್ಷ್ಮವಾಗಿ ಗ್ರಹಿಸಿ ಅರ್ಥಪೂರ್ಣವಾದ ಸಾಹಿತ್ಯವನ್ನು ಕೊಟ್ಟಿದ್ದಾರೆ. ಸಮಕಾಲೀನ ಜನಜೀವನಕ್ಕೆ ಪೂರಕವಾಗಿ ಮೌಲ್ಯಗಳನ್ನು ಆಧುನೀಕರಿಸಿಕೊಂಡು ಆತ್ಮ ವಿಮರ್ಶೆಗೆ ಒಳಪಡಿಸಿ ತಮಗೆ ಸರಿ ಕಂಡಿದನ್ನು ವಸ್ತುನಿಷ್ಠವಾಗಿ ಬರೆದಿದ್ದಾರೆ.

ಎನಿತೀ ನೋಟದ ಸವಿ ಕವನದಲ್ಲಿ ಕವಿ ಬೆಳೆಯ ಸಿರಿಯನ್ನು ಕಣ್ತುಂಬ ನೋಡಿ ಈ ರೀತಿ ಹೊಗಳಿದ್ದಾರೆ.

"ಸುಳಿಗಾಳಿಗೆ
ತಲೆದೂಗುವ
ಹಾಲ್ದೆನೆಗಳು
ಸೊಬಗಿನ ನನೆಗಳು!"

ಈ ಕವನದಲ್ಲಿ ಕವಿ ಸುಳಿಗಾಳಿಗೆ ಸಿಕ್ಕು ತಲೆದೂಗುವ ಹಾಲ್ದೆನೆಗಳು ಸೊಬಗಿನ ನನೆಗಳಾಗಿವೆ ಎಂದು ಬಣ್ಣಿಸಿದ್ದಾರೆ.

"ಯಾವ ತೆನೆ ತಿನ್ನುವುದು
ಯಾವುದ ಬೀಡುವುದು
ಎಂದು ಅತ್ತಿಂದ ಇತ್ತ
ಇತ್ತಿಂದ ಅತ್ತ

ಹಾರುತ್ತಿಹ ಹಕ್ಕಿಗಳು

ಬಯಲ ಬಾನ ಚುಕ್ಕಿಗಳು!"

(ಎನಿತೀ ನೋಟದ ಸವಿ : ಪುಟ-೧)

ಈ ಕವನದಲ್ಲಿ ಕವಿ ಬೆಳೆದು ನಿಂತಿರುವ ತೆನೆಗಳನ್ನು ಆಕಾಶದಲ್ಲಿ ಹಾರುತ್ತಿರುವ ಹಕ್ಕಿಗಳು ಆ ತೆನೆಗಳನ್ನು ನೋಡಿ ಯಾವ ತೆನೆಯನ್ನು ತಿನ್ನುವುದು ಯಾವುದು ಬಿಡುವುದು ಎಂದು ಆತಂಕಗೊಂಡು ಅತ್ತಿಂದ ಇತ್ತ, ಇತ್ತಿಂದ ಅತ್ತ ಹಾರುತ್ತಿವೆ ಎಂದಿದ್ದಾರೆ.

'ಹಾಲ್ದೆನೆ' ಎಂಬ ಕವನ ಸಂಗ್ರಹವು ೩೬ ಕವನಗಳನ್ನು ಒಳಗೊಂಡಿದೆ. ಈ ಕವನಗಳಲ್ಲಿ ಸಾಮಾಜಿಕ ಕಳಕಳಿ, ಬಡತನದ ಹಳಹಳಿ, ಶೋಷಣೆಯ ಬಗ್ಗೆ ಆಕ್ರೋಶ, ವ್ಯಕ್ತಿ ರಾಷ್ಟ್ರ ಜೀವನದಲ್ಲಿ ಸುಧಾರಣೆಯ ಆವೇಶ, ಸಾಮಾಜಿಕ ಪರಿವರ್ತನೆಯ ವಿಷಯಗಳನ್ನು ಒಳಗೊಂಡವುಗಳಾಗಿವೆ. ಜನಪರ ನಿಲುವು ಇದರಲ್ಲಿದೆ.

✡✡✡✡✡

---

೧. "ಹಾಲ್ದೆನೆ" ಕವನ ಸಂಗ್ರಹ ಲೇ. ಸಿದ್ದಯ್ಯ ಪುರಾಣಿಕ ೧೯೯೦ರಲ್ಲಿ ಅನುಪಮ ಪ್ರಕಾಶನ ಅಥಣಿ.

೨. ಎನಿತೀ ನೋಟದ ಸವಿ : ಪದ್ಯ-೨, ಪುಟ-೧

೩. ಎನಿತೀ ನೋಟದ ಸವಿ : ಪದ್ಯ-೩, ಪುಟ-೧

ಅಧ್ಯಾಯ – ಐದು :

ಗದ್ಯ ಸಾಹಿತ್ಯದ ಅಧ್ಯಯನ

ಅಧ್ಯಾಯ – ಐದು :

ಗದ್ಯ ಸಾಹಿತ್ಯದ ಅಧ್ಯಯನ

೧) ಸೃಜನಶೀಲ ಸಾಹಿತ್ಯ :

೧.೧	ಅರವಳ್ಳಿ ಮಲ್ಲಿಗೆ	–	ಶ್ರೀ ಲಕ್ಷ್ಮಣ. ಎನ್. ಬಳ್ಳೊಳ್ಳಿ
೧.೨	ಕರ್ನಾಟಕ ಕೇಸರಿ	–	ಶ್ರೀ ಲಕ್ಷ್ಮಣ. ಎಸ್. ಬಳ್ಳೊಳ್ಳಿ
೧.೩	ಕುಡು ಒಕ್ಕಲಿಗರು ಒಂದು ಕೈಪಿಡಿ	–	ಪ್ರೊ. ಎಸ್. ಬಿ. ಉತ್ನಾಳ
೧.೪	ಕುಡು ಒಕ್ಕಲಿಗರು	–	ಪ್ರೊ. ಎಸ್. ಬಿ. ಉತ್ನಾಳ
೧.೫	ಗ್ರಾಮ ಸ್ವರಾಜ್ಯ	–	ಶ್ರೀ ಶಿವದೇವ ಒಡೆಯರ
೧.೬	ಜನತೆಯ ಶಿವಶಕ್ತಿ	–	ಶ್ರೀ ಲಕ್ಷ್ಮಣ. ಎನ್. ಬಳ್ಳೊಳ್ಳಿ
೧.೭	ಡಾ. ಎನ್. ಎಸ್. ಬಿರಾದಾರ	–	ಡಾ. ದೇವೇಂದ್ರ ಕುಮಾರ ಹಕಾರಿ
೧.೮	ದಳವಾಯಿ	–	ಪ್ರೊ. ಎಸ್. ಬಿ. ಉತ್ನಾಳ
೧.೯	ಮೂರು ರೇಡಿಯೋ ರೂಪಕಗಳು	–	ಶ್ರೀ ಆಯ್. ಬಿ. ಹಿರೇಮಠ ಕೊಣ್ಣೂರು
೧.೧೦	ಶರಣ ಸೌರಭ	–	ಪ್ರೊ. ಎಸ್. ಬಿ. ಉತ್ನಾಳ
೧.೧೧	ಷಹೀದೆ ಕರ್ಬಲಾ	–	ಶ್ರೀ ಗ. ಶಿ. ಹುರಳಿ
೧.೧೨	ಶಾಂತ ಸಾಗರ	–	ಶ್ರೀಮತಿ ಲೀಲಾ ಕಲಕೋಟಿ

೨) ಸೃಜನೇತರ ಸಾಹಿತ್ಯ :

೨.೧	ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ	–	ಪ್ರೊ. ಎಸ್. ಬಿ. ಉತ್ನಾಳ
೨.೨	ಚಿನ್ಮಯ ಚೇತನ ಲಚ್ಯಾಣ ಶ್ರೀ ಸಿದ್ಧಲಿಂಗ ಮಹಾರಾಜರು	–	ಪ್ರೊ. ಎಸ್. ಬಿ. ಉತ್ನಾಳ
೨.೩	ಮೈಲಾರ ದೇವರ ದಿವ್ಯ ಕ್ಷೇತ್ರಗಳು	–	ಡಾ. ಎಂ. ಬಿ. ನೇಗಿನಹಾಳ

೨.೪ ವೀರಗಣಾಚಾರಿ ಗುಡ್ಡಾಪೂರ ದಾನಮ್ಮ – ಪ್ರೊ. ಎಸ್. ಬಿ. ಉತ್ನಾಳ

೨.೫ ಶರಣ ದಾಸರ ಭಕ್ತಿ – ಪ್ರೊ. ಎಸ್. ಬಿ. ಉತ್ನಾಳ

೨.೬ ಶ್ರೀ ಬಿಸಿಲಸಿದ್ಧೇಶ್ವರ ಲೀಲೆ – ಶ್ರೀ ಲಕ್ಷ್ಮಣ. ಎನ್. ಬಳ್ಳೊಳ್ಳಿ

೧.೧ ಅರವಳ್ಳಿ ಮಲ್ಲಿಗೆ :

ಲಕ್ಷ್ಮಣ ಎಸ್. ಬಳ್ಳೊಳ್ಳಿಯವರು ಬರೆದ "ಅರವಳ್ಳಿ –ಮಲ್ಲಿಗೆ" ವ್ಯಕ್ತಿ ಚಿತ್ರಣ ಕೃತಿಯನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

'ಅರವಳ್ಳಿ–ಮಲ್ಲಿಗೆ' ವ್ಯಕ್ತಿಚಿತ್ರಣವು ಖ್ಯಾತ ನ್ಯಾಯವಾದಿ ಶ್ರೀ ಪಿ. ಬಿ. ಪಾಟೀಲರ ಜೀವನ ಚರಿತ್ರೆಯಾಗಿದೆ. ಇವರು ಶಿಕ್ಷಣ ಪ್ರೇಮಿಗಳು, ಮೇಲಾಗಿ ದಕ್ಷ ಆಡಳಿತಗಾರರು ಹೌದು. ದಕ್ಷಿಣ ಭಾರತದ ಹೆಸರಾಂತ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಂದಾದ ಬೆಳಗಾವಿ ಕೆ.ಎಲ್.ಇ ಸಂಸ್ಥೆಯನ್ನು ಬೆಳೆಸಿದ ಹಿರಿಯರಲ್ಲಿ ಶ್ರೀಯುತರು ಒಬ್ಬರು. ಶ್ರೀ ಪಾಟೀಲರು ಆ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಜವಾಹರಲಾಲ ನೆಹರು ವೈದ್ಯಕೀಯ ಮಹಾವಿದ್ಯಾಲಯದ ಇತರ ಮಹಾವಿದ್ಯಾಲಯಗಳನ್ನು ಸ್ಥಾಪಿಸುವಲ್ಲಿ ಪ್ರಾಮಾಣಿಕ ಶ್ರಮ ವಹಿಸಿದವರು.

ಕೆ.ಎಲ್.ಇ ಸಂಸ್ಥೆಯ ಜೊತೆಯಲ್ಲಿ ಇನ್ನುಳಿದ ಹಲವಾರು ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಹಾಗೂ ಸಂಘ–ಸಂಸ್ಥೆಗಳ ಜೊತೆಗೆ ನಿಕಟ ಸಂಪರ್ಕ ಇರಿಸಿಕೊಂಡಿದ್ದಾರೆ. ಅವುಗಳ ಬೆಳವಣಿಗೆಗೆ ಅಹರ್ನಿಷ ದುಡಿದವರು.

ಉತ್ತರ ಕರ್ನಾಟಕದ ಕೆಲವೇ ತತ್ತ್ವನಿಷ್ಠ ನ್ಯಾಯವಾದಿಗಳಲ್ಲಿ ಶ್ರೀಯುತರು ಒಬ್ಬರಾಗಿರುವರು. ತಮ್ಮ ಪಕ್ಷಗಾರರ ಪರವಾಗಿ ವಿಶೇಷ ಗಮನ ಹರಿಸತಕ್ಕ ಹಾಗೂ ಅವರಿಗೆ ನ್ಯಾಯ ಒದಗಿಸುವಲ್ಲಿ ಸತತ ಪರಿಶ್ರಮ ವಹಿಸತಕ್ಕವರು. ನ್ಯಾಯಕ್ಷೇತ್ರದಲ್ಲಿ ಅವರು ನಡೆದುಬಂದ ದಾರಿ ಕಿರಿಯ ನ್ಯಾಯವಾದಿಗಳಿಗೆ ದಾರಿದೀಪವಾದುದು.

ನಾಮಾಂತರ ರೂಪಾಂತರ :

ವಕ್ಕುಂದವು ಮಲಪ್ರಭಾ ನದಿಯ ಬದಿಯಲ್ಲಿ ಫಲವತ್ತಾದ ಭೂಪ್ರದೇಶದಲ್ಲಿ ಹಲವು ತಲೆಮಾರುಗಳ ಪರ್ಯಂತರ ಉಳಿದು ಬಂದ ಗ್ರಾಮ. ಇದು ಹಿಂದೆ ನಡುಗಡ್ಡೆಯಾಗಿತ್ತು. ಆ ಗ್ರಾಮಕ್ಕೆ ಹೋಗಿ ಬರುವ ಯಾವುದೇ ಸಂಪರ್ಕ ಸಾಧನಗಳು ಲಭ್ಯವಿರಲಿಲ್ಲ. ಆ ಗ್ರಾಮದ ಗ್ರಾಮಸ್ಥರು ಮಧ್ಯದಲ್ಲಿ ಉದ್ಭವಿಸಿದ ಕಲಹದ ಮೂಲಕ ಅಲ್ಲೇ ನೆಲೆಯೂರಿ ನಿಂತಿದ್ದ ಅರ್ಧ ಜನರು ಆ ಗ್ರಾಮವನ್ನೇ ತೊರೆದು ಬೈಲಹೊಂಗಲದ ಹೆದ್ದಾರಿಯ ಮೇಲೆ ತಳವೂರಿ ನಿಂತುಕೊಂಡರು. ಅಲ್ಲಿ

ಹೊಸದೊಂದು ವಸಾಹತುವನ್ನೇ ನಿರ್ಮಿಸಿಕೊಂಡರು. ಸುತ್ತಮುತ್ತಲಿನ ಗ್ರಾಮಸ್ಥರ ಮೂಲಕ 'ಅರ್ಧಹಳ್ಳಿ' ಎಂಬ ಹೊಸ ಹೆಸರನ್ನು ತಳೆಯಿತು. ಕಾಲಾಂತರದಲ್ಲಿ ವಕ್ಕುಂದ ಬಿಟ್ಟು ಬಂದಿದ್ದ ಅರ್ಧಮರ್ಧ ಜನರ ವಾಸಸ್ಥಾನವಾಗಿದ್ದ ಅರವಳ್ಳಿ ಅರಹಳ್ಳಿಯಾಗಿ ಕಾಲಾಂತರದಲ್ಲಿ ಜನಸಾಮಾನ್ಯರಿಂದ ಅರಹಳ್ಳಿಯೆಂಬ ನಾಮಾಂತರದ ರೂಪಾಂತರ ತಳೆಯಿತು. ಅರವಳ್ಳಿಯ ಮೂಲ ಹೆಸರು ವಾಸ್ತವಿಕ ವಕ್ಕುಂದವಾಗಿದೆ.

ಈ ಅರವಳ್ಳಿಯ ಪಾಟೀಲರು ಒಂದಲ್ಲ ಹಲವು ಕ್ಷೇತ್ರಗಳಲ್ಲಿ ಕೆಲವು ಸಾಧನೆಗಳನ್ನು ಸಾಧಿಸಿದವರು. ಅದರಲ್ಲಿ ಅವರು ಸಿದ್ಧಿಪುರುಷರೆಂದು ಜನಸಾಮಾನ್ಯರ ಪ್ರಶಂಸೆಗೆ ಪರಿಪೂರ್ಣ ಪಾತ್ರರಾದವರು. ಚರಿತ್ರೆ ನಾಯಕರ ಸಾಧನೆಗಳೇನೂ ಉಡುಗೊರೆಯಾಗಿ ತನ್ನಷ್ಟಕ್ಕೆ ತಾನೇ ಕೈವಶವಾಗಿಲ್ಲ. ಅದಕ್ಕಾಗಿ ಅವರು ಲೋಕದ ಇನ್ನುಳಿದ ನಾಯಕರಂತೆ ಭಾರೀ ಬೆಲೆ ತೆತ್ತಿದ್ದಾರೆ. ಬೆವರು ಹರಿಸಿ ದುಡಿದು ಪಡೆದಿರುವ ಪ್ರಶಸ್ತಿ ಅವರ ದುಡಿಮೆಗೆ ಪ್ರಾಮಾಣಿಕತೆಗೆ ಜನ ಸಲ್ಲಿಸಿದ ಕಾಣಿಕೆಯು ಅನುಪಮವಾಗಿದೆ.

ಸಮಾಜದ ಸಕಲ ಕ್ಷೇತ್ರಗಳಲ್ಲಿಯೂ ಬಹುಮುಖದ ಪಾತ್ರ ನಿರ್ವಹಿಸಿದ ನಾಡಿಗರ ಹೃದಯ ಗೆದ್ದ ಪರ್ವತಗೌಡರು ಮೂಲತಃ ವಿಜ್ಞಾನ ಪದವೀಧರರು. ನಿಷ್ಠುರ ನ್ಯಾಯವಾದಿ, ಬಲಿಷ್ಠ ರಾಜಕಾರಣಿ, ಪ್ರಜ್ಞಾವಂತ ಶಿಕ್ಷಣ ಪ್ರೇಮಿ, ದಕ್ಷ ಆಡಳಿತಗಾರ, ಸಂಸದೀಯ ಪಟು, ಬಡವರ ಬಂಧು ಮೊದಲಾದ ಪದ ಪ್ರಶಸ್ತಿಗಳಿಗೆ ಪಾತ್ರರಾದ ಪರ್ವತಗೌಡರು ಅರವಳ್ಳಿಯ ಮಲ್ಲಿಗೆಯಾಗಿ ಪಲ್ಲವಿಸಿದರು. ತಮ್ಮ ಕರ್ತೃತ್ವ ಶಕ್ತಿಯಿಂದ ಸಾಧನೆಯ ಶಿಖರವನ್ನೇರಿ ನಿಂತ ಧೀಮಂತ ಧುರೀಣರಾಗಿದ್ದಾರೆ.

೧.೨ ಕರ್ನಾಟಕ ಕೇಸರಿ :

ಶ್ರೀ ಲಕ್ಷ್ಮಣ. ಎನ್. ಬಳ್ಳೊಳ್ಳಿ ಅವರು ರಚಿಸಿದ 'ಕರ್ನಾಟಕ ಕೇಸರಿ' ಎಂಬ ವ್ಯಕ್ತಿ ಚಿತ್ರಣ ಕೃತಿಯನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ಕರ್ನಾಟಕ ಕೇಸರಿ ಇದೊಂದು ವ್ಯಕ್ತಿ ಚಿತ್ರಣ. ಈ ಚಿತ್ರದ ನಾಯಕರು ಹಿರಿಯ ಧುರೀಣರಾದ ಸನ್ಮಾನ್ಯ ಶ್ರೀ ವಸಂತರಾವ ಪಾಟೀಲರು. ಅವರ ನಡೆನುಡಿಗಳೆಲ್ಲವೂ ನಾಡಿನ ನಾಡಿಗರಿಗೆಲ್ಲ ಪಡಿ ನೆರಳು. ಅವರು ನಡೆದು ಬಂದ ದಾರಿ, ಪ್ರದರ್ಶಿಸಿದ ಧೈರ್ಯ, ಕೈಕೊಂಡ ಕಾರ್ಯಗಳಿಂದ ಈ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಜನ್ಮವೆತ್ತ ನಾಡಿನ ಋಣ ತೀರಿಸಿದ ಹಿರಿಯ ಜೀವವೆಂಬುದು ಸ್ವತಃಸಿದ್ಧ ಸಂಗತಿಯಾಗಿದೆ.

---

೧. "ಅರವಳ್ಳಿ ಮಲ್ಲಿಗೆ" ಲೇ. ಲಕ್ಷ್ಮಣ ಎಸ್. ಬಳ್ಳೊಳ್ಳಿ ೧೯೯೨ರಲ್ಲಿ ಅನುಪಮ ಪ್ರಕಾಶನ ಅಥಣಿ.

ಉತ್ತರ ಕರ್ನಾಟಕದ ಧೀಮಂತ ಧುರೀನ ವಸಂತರಾವ ಪಾಟೀಲ ಅವರ ಬಹುಮುಖ ಹೋರಾಟದ ವಿರಾಟ ವೈಭವ ಕಂಡುಂಡು ಅನುಭವಿಸಿದ ಅನುಯಾಯಿಗಳಿಗೆಲ್ಲ ಅವರ ಈ ಚರಿತ್ರೆ ಇಂದು ಅತ್ಯವಶ್ಯವಾಗಿದೆ.

ಅಖಂಡ ರಾಷ್ಟ್ರೀಯವಾದಿಗಳಾಗಿ ಸಮಸ್ತ ಕನ್ನಡಿಗರಿಗೆ ಚಿರಪರಿಚಿತಗೊಂಡ ಜನನಾಯಕ ವಸಂತರಾವ ಪಾಟೀಲರಿಗೆ ಮೂರು ಜನ ಪುತ್ರರು. ಓರ್ವ ಹೆಣ್ಣು ಮಗಳಿದ್ದಾಳೆ. ಎಲ್ಲ ಮಕ್ಕಳು ಸುಶಿಕ್ಷಿತರು ಹಾಗೂ ಸ್ನಾತಕೋತ್ತರ ಪದವೀಧರರು ವಿದೇಶಗಳಲ್ಲಿ ವ್ಯಾಸಂಗ ಪಡೆದುಕೊಂಡವರು. ತಂದೆಯ ಹೆಜ್ಜೆಯಲ್ಲಿ ಹೆಜ್ಜೆ ಹಾಕಿ ಅವರು ಸಾಧಿಸಿದ ಸ್ಥಾನ ಹೊಂದಲು ಉತ್ಸುಕತೆ ಉಳ್ಳ ಮಕ್ಕಳೆಲ್ಲರು ಇಂದು ಸಾರ್ವಜನಿಕ ಸೇವೆಗೆ ಕಟಿಬದ್ಧರಾಗಿ ನಿಂತುಕೊಂಡಿದ್ದಾರೆ. ಒಬ್ಬೊಬ್ಬರು ಒಂದೊಂದು ಕ್ಷೇತ್ರದಲ್ಲಿ ಈಗಾಗಲೇ ತಮ್ಮ ಸೇವೆಯ ಮೂಲಕ ಜನಸಂಪರ್ಕ ಬೆಳೆಸಿಕೊಂಡಿದ್ದಾರೆ. ಆ ಹಂತದಲ್ಲಿ ಮುನ್ನಡೆ ಸಾಧಿಸುತ್ತಿದ್ದಾರೆ.

ಹಿರಿಯ ಪುತ್ರ ಪ್ರತಾಪಸಿಂಗರು ಸ್ವತಂತ್ರ ವಿಚಾರವಾದಿಗಳು. ತಂದೆ ಕಟ್ಟಿದ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಬೆಳೆಸಿಕೊಂಡು ಬರುವಲ್ಲಿ ಅವರು ಗಣನೀಯ ಸೇವೆಯನ್ನು ಸಲ್ಲಿಸಿದ್ದಾರೆ. ಶ್ರೀಯುತರು ಸ್ನಾತಕೋತ್ತರ ಕಾನೂನು ಪದವೀಧರರು.

ದ್ವಿತೀಯ ಪುತ್ರ ವಿವೇಕ ಹೆಸರಿಗೆ ತಕ್ಕ ಬುದ್ಧಿವಂತ. ತಂದೆಯ ಸಂಘಟನಾ ಚತುರತೆಯಲ್ಲಿ ಪಳಗಿದ ಯುವಕ. ತಂದೆ ಕಟ್ಟಿದ "ಶಿಕ್ಷಣ ಪ್ರಸಾರಕ ಮಂಡಳಿ"ಯ ಅಧ್ಯಕ್ಷರಾಗಿ ವಿವೇಕರವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂದ ತಂದೆ ಹಚ್ಚಿದ ಶೈಕ್ಷಣಿಕ ಸಸಿಯನ್ನು ಇಂದು ವಟವೃಕ್ಷವಾಗಿ ನೀರೆರೆದು ಬೆಳೆಸುವಲ್ಲಿ ದ್ವಿತೀಯ ಪುತ್ರನ ಪಾತ್ರ ಪರಿಶ್ರಮ ಪೂರ್ವಕವಾದುದು.

ತೃತೀಯ ಸುಪುತ್ರಿ ಪ್ರತಿಭಾ ಬಹುಮುಖ ಪ್ರತಿಭೆಯುಳ್ಳವರು. ವಿದೇಶದಲ್ಲಿ ವ್ಯಾಸಂಗ ಮಾಡಿದವರು. ತಂದೆಯ ಎದುರಾಳಿಗಳನ್ನು ಪ್ರತಿಯಾಗಿ ಪ್ರತಿಭಟಿಸುವ ಎದುರಿಸಬಲ್ಲ ಶಕ್ತಿ ಹೊಂದಿದವಳಾಗಿದ್ದಳು.

ಕಿರಿಯ ಪುತ್ರ ಅಮರಸಿಂಹ ಪಾಟೀಲರು ಲಂಡನ್ ವಿಶ್ವವಿದ್ಯಾಲಯದ 'ಬಾರ್ ಆ್ಯಟ ಲಾ' ಪ್ರಶಸ್ತಿ ಪಡೆದವರು. ಲಂಡನ್ ವಿಶ್ವವಿದ್ಯಾಲಯದ ಪ್ರಥಮ ಕ್ರಮಾಂಕದಲ್ಲಿ ಉತ್ತೀರ್ಣರಾಗಿ ಚಿನ್ನದ ಪದಕ ಪಡೆದುಕೊಂಡವರು. ತಾಯ್ನಾಡಿಗೆ ಅದರ ಮೂಲಕ ಕೀರ್ತಿ ತಂದವರು.

ಜನಜಾಗೃತಿ, ಜನಸಂಘಟನೆ, ಶ್ರೀ ವಸಂತರಾವ ಪಾಟೀಲರ ರಾಜಕೀಯ ಮಾರಕ ಅಸ್ತ್ರಗಳು. ಅವುಗಳನ್ನು ಉಪಯೋಗಿಸುವ ಕಲೆಯಲ್ಲಿ ಪರಿಪೂರ್ಣ ಪಳಗಿದವರು. ಜನತೆಯ ಬೇಕು ಬೇಡಗಳನ್ನು ಜನಸಮುದಾಯದ ಮೂಲಕವೇ ಆಳುವ ಸರಕಾರದ ಗಮನ ಸೆಳೆಯುತ್ತಲೇ ಬಂದ ಜನಪರ ಹೋರಾಟದ ದಿಟ್ಟ ಧುರೀಣರಾಗಿದ್ದಾರೆ.

ಅಸಾಮಾನ್ಯ ದರ್ಪದ ಧುರೀಣರಲ್ಲಿ ವಸಂತರಾವ ಪಾಟೀಲರು ಪ್ರಮುಖರು. ಅವರ ದರ್ಪಕ್ಕೆ ಘಟಸರ್ಪಗಳು ಗುದ್ದು ಸೇರಿವೆ ಎಂದು ಹಿರಿಯರೊಬ್ಬರು ಹೇಳುವ ಮಾತು, ವಾಸ್ತವಿಕ ದಿಟ.

ಕಚ್ಚೆ-ಕೈ-ಬಾಯಿ ತನ್ನಿಚ್ಚೆಯಲ್ಲಿರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದು ಅಂದು ಗಂಡು ಕವಿ ಕುಲ ತಿಲಕ ಸರ್ವಜ್ಞ ಸಾರಿದ ಸಂದೇಶ. ಇಂದು ಯಾರಿಗಾದರೂ ಅನ್ವಯವಾಗುತ್ತಿದ್ದರೆ, ಅದು ಬ್ಯಾಕೂಡ ಗೌಡರಿಗೆ ಅನ್ವಯವಾಗುತ್ತದೆಯೆಂದು ಅವರ ಎದುರಾಳಿಗಳ ಅಭಿಮತವಾಗಿದೆ.

ಜಾತಿ, ಮತ, ಪಥ-ಪಂಥಗಳ ಮಾತನೆತ್ತದೆ ಬಡವ ಬಲ್ಲಿದನೆಂಬ ಭೇದ-ಭಾವಕ್ಕೆ ಅವಕಾಶ ನೀಡದ ನಾಡನಾಯಕರಾಗಿದ್ದಾರೆ. ಅವರ ನಾಡಿಗಾಗಿ ಮಾಡದ ಕಾಯಕ ಅಲ್ಪವೇನಲ್ಲ. ಕಾಲ ಕಾಲಕ್ಕೆ ಕೈಗೊಂಡ ನಿರ್ಧಾರ ನಿರ್ಣಯಗಳೆಲ್ಲವೂ ಪ್ರಜ್ಞಾವಂತ ನಾಡಿಗರು ಮೆಚ್ಚಿದ್ದಾರೆ. ಶ್ರೀ ವಸಂತರಾವ ಪಾಟೀಲರು ವಾಸ್ತವಿಕವಾಗಿ ಕೈಕೊಂಡ ನಿರ್ಣಯಗಳು ಮೆಚ್ಚತಕ್ಕವುಗಳಾಗಿವೆ.

೧.೩ ಕುಡು ಒಕ್ಕಲಿಗರು- ಒಂದು ಕೈಪೀಡಿ :

ಪ್ರೊ. ಸಿದ್ಧಣ್ಣ ಉತ್ನಾಳರವರು ರಚಿಸಿರುವ "ಕುಡು ಒಕ್ಕಲಿಗರು-ಒಂದು ಕೈಪೀಡಿ" ಕೃತಿಯನ್ನು ಅನುಪಮ ಪ್ರಕಾಶನ ಪ್ರಕಟಿಸಿದೆ.

ಕುಡು ಒಕ್ಕಲಿಗರು-ಒಂದು ಕೈಪೀಡಿಯು ಚಾರಿತ್ರಿಕ ಕೃತಿಯಾಗಿದೆ. ಕುಡು ಒಕ್ಕಲಿಗ ಸಮಾಜದ ಇತಿಹಾಸ, ಪರಂಪರೆ, ಧಾರ್ಮಿಕ ವಿಧಿ-ವಿಧಾನಗಳು, ದೇವತೆಗಳು, ಶಿರಸಂಗಿ ರಾಜಮನೆತನದ ವಿವರಗಳು ಹೀಗೆ ಕುಡು ಒಕ್ಕಲಿಗರಿಗೆ ಸಂಬಂಧಿಸಿದ ಅನೇಕ ಸಂಗತಿಗಳು ಮೊತ್ತಮೊದಲ ಬಾರಿಗೆ ಅನಾವರಣಗೊಳ್ಳುತ್ತವೆ. ಹಲವಾರು ಸಾಂಪ್ರದಾಯಿಕ ಕಲ್ಪನೆಗಳಿಗೆ, ವರ್ಗೀಕರಣಗಳಿಗೆ ತರ್ಕಬದ್ಧವಾದ, ನೈಜ, ವಾಸ್ತವಿಕ ವಿಶ್ಲೇಷಣೆಯ ವ್ಯಾಖ್ಯಾನಗಳು ಗಮನ ಸೆಳೆಯುತ್ತವೆ. ವ್ಯಕ್ತಿಗತ ಅಭಿಮಾನ-ವ್ಯಾಮೋಹಗಳಿಂದ ದೂರ ನಿಂತು ಸಾಕ್ಷಿಪ್ರಜ್ಞೆಯಿಂದ ಈ ಪುಸ್ತಕದ ವಿವರಗಳು ಪ್ರತಿಯೊಬ್ಬ ಕುಡು ಒಕ್ಕಲಿಗರ ಅಂತಃಕರಣವನ್ನು ಮುಟ್ಟುತ್ತವೆ.

ನೈಜ ಸಾಹಿತ್ಯಾಭಿಮಾನಿಗಳು, ಸಂಸ್ಕೃತಿವಂತರು, ಸ್ವಾಭಿಮಾನಿಗಳು ಆದ ಉತ್ನಾಳ ಅವರು ಸ್ವತಃ ಕುಡು ಒಕ್ಕಲಿಗರಾದರೂ ಅನೇಕ ವಿವರಗಳನ್ನು ಬಲ್ಲಿದರಿಂದ ಹಿರಿಯರಿಂದ ಸಂಗ್ರಹಿಸಿ ತಮ್ಮದೇ ಆದ ವಿಶಿಷ್ಟ ವ್ಯಾಖ್ಯಾನದ ಮೂಲಕ ಗಮನ ಸೆಳೆಯುತ್ತಾರೆ. ಇತರ ಕುಡು ಒಕ್ಕಲಿಗರಲ್ಲಿರಲಾದ ಸ್ವಾಭಿಮಾನ, ಆತ್ಮ ಪ್ರತ್ಯಯಗಳು ಕಾರಣವಾಗಿ ಅವರು ಈ ಕೈಪೀಡಿಯ ರಚನೆಗೆ ಕೈಹಾಕಿರುವುದು ಸ್ಪಷ್ಟವಾಗಿದೆ.

"ಕರ್ನಾಟಕ ಕೇಸರಿ" ವ್ಯಕ್ತಿ ಚಿತ್ರಣ ಲೇ. ಲಕ್ಷ್ಮಣ. ಎನ್. ಬಳ್ಳೊಳ್ಳಿ, ಅನುಪಮ ಪ್ರಕಾಶನ ಅಥಣಿ.

"ಕುಡು ಒಕ್ಕಲಿಗರು-ಒಂದು ಕೈಪೀಡಿ" ಲೇ. ಎಸ್. ಬಿ. ಉತ್ನಾಳ, ೨೦೦೮ರಲ್ಲಿ ಅನುಪಮ ಪ್ರಕಾಶನ ಅಥಣಿ.

೧.೪ ಕುಡು ಒಕ್ಕಲಿಗರು :

ಪ್ರೊ. ಸಿದ್ಧಣ್ಣ ಉತ್ನಾಳರವರು ರಚಿಸಿರುವ "ಕುಡು ಒಕ್ಕಲಿಗರು" ಕೃತಿಯನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ನಮ್ಮ ನಾಡಿನಲ್ಲಿ ಅನೇಕ ಜನ ಸಮುದಾಯಗಳು ಕೃಷಿಯನ್ನೇ ಜೀವನವನ್ನಾಗಿ ಮಾಡಿಕೊಂಡಿವೆ. ಇಂತಹ ಸಮುದಾಯಗಳಲ್ಲಿ ಕುಡು ಒಕ್ಕಲಿಗ ಲಿಂಗಾಯತರು ಹಾಗೂ ಪಂಚಮಸಾಲಿ ಲಿಂಗಾಯತರು ಮುಖ್ಯರಾಗಿ ಕಾಣಿಸುತ್ತಾರೆ. ಇದು ಉತ್ತರ ಕರ್ನಾಟಕದ ವ್ಯಾಪ್ತಿಗೆ ಸಂಬಂಧಿಸಿದ ವಿಚಾರವಾದರೆ, ದಕ್ಷಿಣ ಕರ್ನಾಟಕದಲ್ಲಿ ಒಕ್ಕಲಿಗ ಗೌಡರು ಕೃಷಿ ಸಂಸ್ಕೃತಿಯ ವಾರಸುದಾರರಾಗಿದ್ದಾರೆ. ಲಿಂಗಾಯತರಲ್ಲಿರುವ ಇನ್ನೂ ಕೆಲವು ಒಳಪಂಗಡಗಳು ಕೃಷಿಯನ್ನು ಮಾಡುತ್ತಿದ್ದರು ಕೂಡ ಇವೆರಡು ಜನ ಸಮುದಾಯಗಳು ಕೃಷಿ ಸಂಸ್ಕೃತಿಗೆ ನೀಡಿದ ಕೊಡುಗೆ ಅಪಾರವಾದುದಾಗಿದೆ.

ಕುಡು ಒಕ್ಕಲಿಗರನ್ನು ಕೆಲವು ಕಡೆ ಕುಡಿ ಒಕ್ಕಲಿಗರೆಂದು ಕರೆಯಲಾಗಿದೆ. ಕುಡಿಯೆಂದರೆ ಒಕ್ಕಲು ಎಂದರ್ಥವಾಗುತ್ತದೆ. ಕುಡುವ ಎಂಬ ಪದ ಕುಡಿಯ ಪದದ ಅಪಭ್ರಂಶವಾಗಿದೆ. ಕುಡಿ ಪದಕ್ಕೆ ಚಿಗುರು ಬೆಳೆ ಎಂಬ ಅರ್ಥಗಳಿವೆ. ಸಂಸ್ಕೃತದಲ್ಲಿ ಇದು ಪಲ್ಲವ ಎಂಬ ಪದದಲ್ಲಿ ಬಳಕೆಯಾಗಿದೆ. ಈ ಪಲ್ಲವನನ್ನು ತಮಿಳಿನಲ್ಲಿ ನೊಳಂಬು ಎಂದು ಕರೆಯುತ್ತಾರೆ. ಈ ನೊಳಂಬರೇ ಕಂಚಿಯ ಪಲ್ಲವರಾಗಿದ್ರು. ಅವರ ವಶಂಸ್ಥರೇ ಇಂದಿನ ನೊಣಬರು. ಈ ನೊಣಬ ಲಿಂಗಾಯತರು ಶಿವಮೊಗ್ಗ ಪ್ರದೇಶದಲ್ಲಿ ಬಹುಸಂಖ್ಯೆಯಲ್ಲಿದ್ದಾರೆ.

ಕುರುಬರಲ್ಲಿ ಗೊಂಡ ಕುರುಬರಿದ್ದಾರೆ. ಕುರುಬರು ಕುರಿಕಾಯುವ ಪಶು ಸಂಗೋಪನೆಯ ವೃತ್ತಿಯನ್ನಾಯ್ದುಕೊಂಡರೆ ಒಕ್ಕಲಿಗ ವೃತ್ತಿಯನ್ನಾಯ್ದುಕೊಳ್ಳುತ್ತಾರೆ. ಹೀಗಾಗಿ ಗೊಂಡರಲ್ಲಿ ಬರುವ ಲಾಳಗೊಂಡ, ಲಕ್ಕಗೊಂಡ, ಗೊಂಡ ಒಕ್ಕಲ ಈ ಸಮುದಾಯಗಳು ಕುಡು ಒಕ್ಕಲಿಗ ಸಮುದಾಯಕ್ಕೆ ಸೇರಿದವುಗಳಾಗಿವೆ. ಕರುಬರಲ್ಲಿ ಬರುವ ಹತ್ತಿಕಂಕಣ ಹಾಗೂ ಉಣ್ಣಿ ಕಂಕಣ ಪರಂಪರೆಗಳಲ್ಲಿ ಉಣ್ಣಿ ಕಂಕಣದವರು ಕುರುಬರಾಗಿ ಕುರಿಕಾಯುವ ಕಾಯಕ ಮಾಡಿದರೆ, ಹತ್ತಿ ಕಂಕಣದವರು ಗೊಂಡರಾಗಿ ಲಾಳಗೊಂಡರಾಗಿ ಗೊಂಡ ಒಕ್ಕಲಿಗರಾಗಿ ಒಕ್ಕಲಿಗ ವೃತ್ತಿಯನ್ನಲವಲಂಭಿಸಿದುದು ಕಂಡು ಬರುತ್ತದೆ.

ಹಾಲುಮತದ ಪ್ರಕಾರ ಮುದ್ದಣ್ಣ-ಮುದ್ದವ್ವ ದಂಪತಿಗಳಿಂಲೇ ಈ ಪರಂಪರೆ ಪ್ರಾರಂಭವಾಗುತ್ತದೆ. ೧೨ನೇ ಶತಮಾನದಲ್ಲಿ ಬರುವ ವಚನಕಾರನ ಹೆಸರು ಕೂಡ ಒಕ್ಕಲಿಗ ಮುದ್ದಣ್ಣ ಎಂದಿದೆ. ಪ್ರಸಿದ್ಧ ವಚನಕಾರ ಶಿವಯೋಗಿ ಶಿಖರ, ಕುಡಿಯರ ಕುಲಶಿರೋಮಣಿ ಅಂದರೆ ಈ ಜನಾಂಗದ ಸಾಂಸ್ಕೃತಿಕ ನಾಯಕನಾಗಿದ್ದಾನೆ. ಕುಡು ಒಕ್ಕಲಿಗ ಲಾಳಗೊಂಡನೊಳಂಬನೊಣಬ ಈ ಮುಂತಾದ ಸಮುದಾಯಗಳು ಕೃಷಿ ಕಾಯಕವನ್ನು ಪ್ರಾರಂಭಿಸಿದ ಲಿಂಗಾಯತರಾಗಿದ್ದಾರೆ.

ನೇಕಾರಿಕೆ ವೃತ್ತಿಯನ್ನು ಮಾಡಿದವರು ಜಾಡುಗುರುಬರಾಗಿದ್ದಾರೆ. ಹಾಲು ಮಾರುವ ವೃತ್ತಿಯನ್ನು ಪ್ರಾರಂಭಿಸಿದವರು ಹಂಡೆ ಗುರುಬರಾಗಿದ್ದಾರೆ. ಹಾಲುಮತ ಪುರಾಣದ ಪ್ರಕಾರ ಮುದ್ದಣ್ಣ-ಮುದ್ದವ್ವ ದಂಪತಿಗಳಿಗೆ ಜನಿಸಿದ ಆರು ಮಕ್ಕಳಲ್ಲಿ ಪದುವಗೊಂಡ ಎಂಬಾತ ಕೃಷಿ ಕಾಯಕ ಪ್ರಾರಂಭಿಸಿದರೆ ಉಳಿದ ಐದು ಮಕ್ಕಳು ಕುರಿಕಾಯುವ ಪಶು ಸಂಗೋಪನೆಯಲ್ಲಿ ತೊಡಗಿಕೊಳ್ಳುವ ವೃತ್ತಿಗಳಲ್ಲಿ ಮುಂದುವರೆದರು. ಈ ಪದುಮಗೊಂಡ ಕೃಷಿ ಪ್ರಾರಂಭಿಸಿ ಹೊಲದಲ್ಲಿ ಹೆಚ್ಚು ಹತ್ತಿಯನ್ನು ಬೆಳೆದು ಹತ್ತಿ ಕಂಕಣನೆಂದು ಪ್ರಸಿದ್ಧಿಯಾದ ಉಳಿದವರು ಉಣ್ಣಿಕಂಕಣರೆಂದು ಗುರುತಿಸಿಕೊಂಡರು.

ಕುಡು ಒಕ್ಕಲಿಗರಲ್ಲಿ ಆರು ಒಳಪಂಗಡಗಳಿವೆ ಅವುಗಳೆಂದರೆ,

೧)	ಕರಂಡೋತಿ ಅಥವಾ ದಂಡಾವತಿ	೨)	ಮಿಣಿಗಡಕರು
೩)	ತದ್ದೋಡಿಗಳು	೪)	ಎತ್ತಿರಿಕರು
೫)	ಬೆಳ್ಳನ್ನವರು	೬)	ಹುಗ್ಗೆನ್ನವರು

ಈ ಆರು ಒಳಪಂಗಡದವರು ಮತ್ತೆ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿಕೊಂಡಿರುವುದನ್ನು ಉತ್ನಾಳ ಅವರು ಗುರುತಿಸಿದ್ದಾರೆ.

ಹಾಲುಮತ ಪುರಾಣದ ಪ್ರಕಾರ ಕುರುಬ ಸಮುದಾಯದಿಂದ ಹುಟ್ಟಿಕೊಂಡ ಈ ಕುಡು ಒಕ್ಕಲಿಗ, ಲಾಳಗೊಂಡ್ ಜನ ಸಮುದಾಯಗಳು ಆಂಧ್ರಪ್ರದೇಶಗಳಲ್ಲಿ ಶೇತ್ಕರಿ ಧನಗರ್ ಎಂದು ಕರೆಯಿಸಿಕೊಂಡಿದೆ. ಶೇತ್ಕರಿ ಧನಗರ್ ಎಂತಲೂ ಇವರನ್ನು ಕರೆಯುತ್ತಾರೆ. ಇದೇ ಮಹಾರಾಷ್ಟ್ರದಲ್ಲಿರುವ ಕುಣಿಬಿಗಳು ಕೂಡಾ ಕೃಷಿಕರೇ ಆಗಿದ್ದಾರೆ.

ಕನ್ನಡ ನಾಡಿನಲ್ಲಿ ಉತ್ತರ ಕರ್ನಾಟಕದಲ್ಲಿ ಕುಡು ಒಕ್ಕಲಿಗ ಲಾಳಗೊಂಡ ಹಂಡೆ ಗುರುಬಯೆಂದು ಕರೆಯಿಸಿಕೊಂಡ ಈ ಜನಾಂಗ, ದಕ್ಷಿಣ ಕರ್ನಾಟಕದಲ್ಲಿ ನೊಣಬ ಒಕ್ಕಲಿಗ ಗೌಡ ಎಂದು ಕರೆಯಿಸಿಕೊಂಡಿದೆ. ಕರ್ನಾಟಕದಲ್ಲಿ ಕೃಷಿ ಕಾಯಕದ ಕುಡು ಒಕ್ಕಲಿಗ ಲಾಳಗೊಂಡ ನೊಣಬ ಈ ಜನಾಂಗಗಳು ಸಸ್ಯಾಹಾರಿಗಳಾಗಿ ಲಿಂಗಾಯತರೆಂದು ಕರೆಯಿಸಿಕೊಂಡರೆಂದು, ಮಂಡ್ಯ, ಹಾಸನ, ಮೈಸೂರ ಕಡೆ ಇರುವ ಒಕ್ಕಲಿಗ ಗೌಡರು ಮಾಂಸಾಹಾರಿಗಳಾಗಿದ್ದಾರೆ. ಹೀಗಾಗಿ ಈ ಕೃಷಿಗೆ ಸಂಬಂಧಿಸಿದ ಜನಸಮುದಾಯಗಳದೇ ಒಂದು ದೊಡ್ಡ ಚರಿತ್ರೆ ಇದೆ. ಕೃಷಿ ಜನಾಂಗದ ಇಂತಹ ಚರಿತ್ರೆಗಳು ಲಿಖಿತ ದಾಖಲೆಗಳಲ್ಲಿ ಕಾಣಿಸುವುದಿಲ್ಲ. ಲಿಖಿತ ಚರಿತ್ರೆಗಳೆಲ್ಲ ಆಳುವ ಅರಸರ ಚರಿತ್ರೆಯನ್ನು ಕಟ್ಟಿಕೊಳ್ಳಲು ಹಾಲುಮತ ಪುರಾಣದಂತಹ ಪುರಾಣ ಕಾವ್ಯಗಳು, ಐತಿಹ್ಯಗಳು, ಜನಪದ ಹಾಡುಗಳು ಜನ ಸಮುದಾಯದ ನಂಬಿಕೆ ಆಚರಣೆಗಳು ಮುಖ್ಯ ಆಕರಗಳಾಗಿವೆ. ಇವುಗಳನ್ನೆಲ್ಲ ನಾವು ಮೌಖಿಕ ಇತಿಹಾಸವೆಂದು ಕರೆಯುತ್ತೇವೆ.

"ಕುಡು ಒಕ್ಕಲಿಗರು" ಲೇ. ಎಸ್. ಬಿ. ಉತ್ನಾಳ, ೨೦೦೮ರಲ್ಲಿ ಅನುಪಮ ಪ್ರಕಾಶನ ಅಥಣಿ.

ಕುಡು ಒಕ್ಕಲಿಗ ಪದಕ್ಕೆ ಸಂಬಂಧಿಸಿದಂತೆ ಇನ್ನೊಂದು ಮಾತನ್ನು ಇಲ್ಲಿ ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ಕುಡು ಎಂಬ ಪದವನ್ನು ಹತ್ತನೇ ಶತಮಾನದಲ್ಲಿ ಪಂಪ ಬಳಸಿದ್ದಾನೆ. ಪಂಪ ಭಾರತದಲ್ಲಿ ಈ ಪದ ಅನೇಕ ಸಲ ಉಪಯೋಗವಾಗಿದೆ. ಕುಡುವವನ, ಕುಡುಪೇಳ್ವನ...... ಎಂಬಂತಹ ಸಾಲುಗಳಲ್ಲಿ ಕುಡು ಎಂದರೆ ಕೊಡು ದಾನಮಾಡು ಎಂಬರ್ಥಗಳಿವೆ. ಕುಡು ಒಕ್ಕಲಿಗರು ದಾನಿಗಳಾಗಿದ್ದರು. ತಾವು ಬೆಳೆದದ್ದನ್ನು ಎಲ್ಲ ಆಯಗಾರರಿಗೆ ಹಂಚುತ್ತಿದ್ದರು. ಈ ಜನಾಂಗದವರು ನಿಸ್ವಾರ್ಥ ಹಾಗೂ ಪ್ರಾಮಾಣಿಕತೆಗೆ ಹೆಸರಾಗಿದ್ದರೆಂದು ತಿಳಿದು ಬರುತ್ತದೆ.

೧.೫ ಗ್ರಾಮ ಸ್ವರಾಜ್ಯ :

ಶ್ರೀ ಶಿವದೇವ ಒಡೆಯರರವರು ರಚಿಸಿದ 'ಗ್ರಾಮ ಸ್ವರಾಜ್ಯ' ಎಂಬ ದೇಶಭಕ್ತಿ ಕುರಿತಾದ ಈ ಕೃತಿಯನ್ನು ಅನುಪಮ ಪ್ರಕಾಶನ ಪ್ರಕಟಿಸಿದೆ.

ಭಾರತಕ್ಕೆ ದೊರೆತ ಪ್ರಜಾಪ್ರಭುತ್ವದ ನೈಜ ನೋಟವನ್ನು ಈ ಕೃತಿಯಲ್ಲಿ ತಂದಿದ್ದಾರೆ. ಸ್ವಾತಂತ್ರ್ಯವು ಕೇವಲ ಕಲಿತವರ, ಶ್ರೀಮಂತರ, ನಗರವಾಸಿಗಳಿಗೆ ಸೀಮಿತವಾಗದೆ ಗ್ರಾಮದಲ್ಲಿ ಬದುಕಿರುವ ಪ್ರಜೆ ಪ್ರಭುವಾಗಿ ತೋರಬೇಕೆನ್ನುವ ಹಂಬಲ ವ್ಯಕ್ತವಾಗಿದೆ. ಭಾರತ ದೇಶವು ಹಳ್ಳಿಗಳ ಬೀಡು ಈ ಹಳ್ಳಿಗಳು ಸಂಪೂರ್ಣ ಸುಧಾರಣೆಯಾಗಿ ಎಲ್ಲರೂ ಸುಖದಿಂದ ಬಾಳಬೇಕು ಪ್ರತಿಯೊಬ್ಬರ ಹೃದಯದಲ್ಲಿ ದೇಶಪ್ರೇಮ ಎದ್ದು ತೋರಬೇಕೆನ್ನುವ ಹಂಬಲದಿಂದ ಈ ಕೃತಿ ನಿರ್ಮಾಣಗೊಂಡಿದೆ. ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಸಚಿವರಾದ ಶ್ರೀ ಎಸ್. ಎಸ್. ಒಡೆಯರರವರ ತಂದೆಯವರೇ ಶಿವದೇವ ಒಡೆಯರರವರು. ಇವರು ಹಾವೇರಿ ಜಿಲ್ಲೆಯ ಚಾಡದಾನಪುರದವರು. ಅಂಬಿಗರ ಚೌಡಯ್ಯನ ಮೇಲೆ ನಿಜಶರಣ ಅಂಬಿಗರ ಚೌಡಯ್ಯನ ಮೇಲೆ ಅಪಾರ ಭಕ್ತ ಶ್ರದ್ಧೆ ಹೊಂದಿದ್ರು. ಶಿವದೇವ ಒಡೆಯರ ಹಾಗೂ ಇವರ ಚಿರಂಜೀವಿ ಎಸ್. ಎಸ್. ಒಡೆಯರ ಅವರು ಸಾಹಿತ್ಯ ಪ್ರಪಂಚದಲ್ಲಿ ಹೆಸರು ಮಾಡಿದ್ದಾರೆ.

೧.೬ ಜನತೆಯ ಜೀವಶಕ್ತಿ :

ಲಕ್ಷ್ಮಣ. ಬಳ್ಳೊಳ್ಳಿ ಅವರು ರಚಿಸಿದ ಜೀವನ ಚರಿತ್ರೆ ಇದನ್ನು ಅನುಪಮ ಪ್ರಕಾಶನವು ಪ್ರಕಟಿಸಿದೆ.

ಉತ್ತರ ಕರ್ನಾಟಕದಲ್ಲಿ ಶೈಕ್ಷಣಿಕ ರಂಗದಲ್ಲಿ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯು ೧೯೦೬ರಲ್ಲಿ ಬಿಜಾಪೂರದ ಬಿ.ಎಲ್.ಡಿ. ಸಂಸ್ಥೆಯು ೧೯೧೦ರಲ್ಲಿ ಹಾಗೂ ಕೆ.ಎಲ್.ಇ.ಯು ೧೯೧೬ರಲ್ಲಿ ಹುಟ್ಟಿಕೊಂಡವು. ಈ ಸಂಸ್ಥೆಗಳ ಮೂಲ ಉದ್ದೇಶ ಈ ಭಾಗದ ಮಕ್ಕಳಿಗೆ ಶಿಕ್ಷಣವನ್ನು ಕೊಡುವುದು.

"ಗ್ರಾಮ ಸ್ವರಾಜ್ಯ" ಲೇ. ಶ್ರೀ ಶಿವದೇವ ಒಡೆಯರ, ಅನುಪಮ ಪ್ರಕಾಶನ ಅಥಣಿ

ಬಿ.ಎಲ್.ಡಿ. ಸಂಸ್ಥೆಯನ್ನು ಫ. ಗು. ಹಳಕಟ್ಟಿ ಬಂತನಾಳದ ಸಂಗಣಬಸವ ಮಹಾಸ್ವಾಮಿಗಳು ಸ್ಥಾಪಿಸಿದರು. ಈ ಸಂಸ್ಥೆಯ ಬೆಳವಣಿಗೆಯನ್ನು ದಿ. ಬಿ. ಎಂ. ಪಾಟೀಲ (ತೊರವಿ) ಅವರು ಹೆಮ್ಮರವಾಗಿ ಬೆಳೆಸಿ ಉತ್ತರ ಕರ್ನಾಟಕದ ಜನರಿಗೆ ಶಿಕ್ಷಣದೊಂದಿಗೆ ಅಭಿಯಂತರ, ವೈದ್ಯಕೀಯ ಮಹಾವಿದ್ಯಾಲಯಗಳನ್ನು ಸ್ಥಾಪಿಸಿ ಈ ಸಂಸ್ಥೆಯ ಹೊಸ ಮನ್ವಂತರಕ್ಕೆ ನಾಂದಿ ಹಾಡಿದರು. ಶಾಸಕರಾಗಿ, ಮಂತ್ರಿಗಳಾಗಿ ರಾಜಕೀಯ ಕ್ಷೇತ್ರದಲ್ಲಿ ತತ್ವನಿಷ್ಠರೆನಿಸಿಕೊಂಡು ಅಹೋರಾತ್ರಿ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ರಾಜಕೀಯ ಕ್ಷೇತ್ರದಲ್ಲಿ ಸತ್ಯಶುದ್ಧ ಕಾಯಕ ಯೋಗಿಗಳೆಂದು ಹೆಸರು ಮಾಡಿದರು. ಬಿ. ಎಂ. ಪಾಟೀಲರು ಬಿಜಾಪೂರ ಜಿಲ್ಲೆಯ ಶೈಕ್ಷಣಿಕ ರಂಗದ ಭೀಷ್ಮರೆಂದು ಕರೆಯಿಸಿಕೊಂಡರು. ಇವರ ಜೀವನ ಹಾಗೂ ಸಾಧನೆ ಕುರಿತು ಬರೆದ ಕೃತಿ ಜನತೆಯ ಜೀವಶಕ್ತಿ ಈ ಶಿರೋನಾಮೆಯೇ ಸಮಗ್ರ ಜನತೆಯ ಜೀವನಾಡಿಯಾಗಿ ಬಾಳಿ ಬದುಕಿ ಹೋದ ಬಿ. ಎಂ. ಪಾಟೀಲರು ಜನಮಾನಸದಲ್ಲಿ ಶಾಶ್ವತವಾಗಿ ನೆಲೆ ಉರಿದ್ದಾರೆ. ಇವರನ್ನು ಕುರಿತು ಅನುಪಮ ಪ್ರಕಾಶನದ ಪ್ರಕಾಶಕರಾದ ಸಿದ್ದಣ್ಣ ಉತ್ನಾಳರವರು ಈ ಕೃತಿಯನ್ನು ಪ್ರಥಮ ಮುದ್ರಣದಲ್ಲಿಯೇ ಐದು ಸಾವಿರ ಪ್ರತಿಗಳನ್ನು ಪ್ರಕಟಿಸಿ ಮಾರಾಟ ಮಾಡಿದ ಶ್ರೇಯಸ್ಸು ಈ ಪ್ರಕಾಶನದ್ದಾಗಿದೆ.

ಬಿ. ಎಮ್. ಪಾಟೀಲರ ಪುತ್ರ ಎಂ. ಬಿ. ಪಾಟೀಲರು ತಂದೆಯವರು ಹಾಕಿದ ಮಾರ್ಗದಲ್ಲಿಯೇ ದಾಪುಗಾಲು ಹಾಕುತ್ತ ಸಂಸ್ಥೆಯನ್ನು ಸಾಕಷ್ಟು ವಿಸ್ತಾರವಾಗಿ ಬೆಳೆಸುವುದರೊಂದಿಗೆ ಗುಣಾತ್ಮಕ ಶಿಕ್ಷಣವನ್ನು ನೀಡುತ್ತಾ ತಂದೆಯಂತೆ ಲೋಕಸಭಾ ಸದಸ್ಯರಾಗಿ ನಂತರ ಶಾಸಕರಾಗಿ ಡಿಮಡ್ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹೀಗೆ ತಂದೆಯ ಉತ್ತರಾಧಿಕಾರಿಯಾಗಿ ಬಂದ ಎಂ. ಬಿ. ಪಾಟೀಲರು ಜನತೆಯ ಹೃದಯದಲ್ಲಿ ತಂದೆಯ ನಂತರ ತನ್ನ ಸ್ಥಾನವನ್ನು ಸುಭದ್ರಗೊಳಿಸಿಕೊಂಡಿದ್ದಾರೆ.

೧.೭ ಡಾ. ಎನ್. ಎಸ್. ಬಿರಾದಾರ :

ಡಾ. ದೇವೇಂದ್ರ ಕುಮಾರ ಹಕಾರಿಯವರು ರಚಿಸಿದ ಡಾ. ಎನ್. ಎಸ್. ಬಿರಾದಾರ ಅವರ ಜೀವನ ಸಾಧನೆ ಮತ್ತು ವೈಜ್ಞಾನಿಕ ವಿಕಾಸ ಕೃತಿಯನ್ನು ಅನುಪಮ ಪ್ರಕಾಶನವು ಪ್ರಕಟಿಸಿದೆ.

ಡಾ. ಎನ್. ಎಸ್. ಬಿರಾದಾರ ಅವರು ಸರಳ ಮತ್ತು ಉನ್ನತ ಮಟ್ಟದ ಸಂಶೋಧಕ ವಿಜ್ಞಾನಿಯಾಗಿದ್ದಾರೆ. ಅವರ ಜೀವನ ಸಾಧನೆಯನ್ನು ಈ ಪುಸ್ತಕವು ಬೆಳಕಿಗೆ ತಂದಿದೆ. ಯಾವುದೇ ವ್ಯಕ್ತಿಯ ಪ್ರತಿಭೆ, ದುಡಿಮೆ ತನ್ನ ಕ್ಷೇತ್ರಕ್ಕೆ ಬೆರಗನ್ನು ಕೊಡಬೇಕಾದರೆ ಆ ವ್ಯಕ್ತಿಯ ಬದುಕಿನ ದುಡಿಮೆಯು ಉಳಿದ ವ್ಯಕ್ತಿಗಳ ಬೆಳವಣಿಗೆಗೆ ಕಾರಣವಾಗಬೇಕು.

"ಜನತೆಯ ಜೀವಶಕ್ತಿ" ಲೇ. ಲಕ್ಷ್ಮಣ. ಎನ್. ಬಳ್ಳೊಳ್ಳಿ, ಅನುಪಮ ಪ್ರಕಾಶನ ಅಥಣಿ

ಒಬ್ಬ ವ್ಯಕ್ತಿಯ ಪರಿಚಯವು ಅವನ ಕ್ಷೇತ್ರದ ಹಾಗೂ ಬದುಕಿನ ಪರಿಚಯವಾಗಲಿಕ್ಕ ಕಾರಣವಾಗುತ್ತದೆ. ಆದ್ದರಿಂದ ಈ ಅಪೂರ್ವ ವಿಜ್ಞಾನಿ ಡಾ. ಎನ್. ಎಸ್. ಬಿರಾದಾರ ಅವರ ಕುರಿತ ಕೃತಿಯು ಈ ನಿಟ್ಟಿನಲ್ಲಿ ತನ್ನದೇ ಆದ ಕೊಡುಗೆಯನ್ನು ಕೊಟ್ಟಿದೆಯೆಂದು ಹೇಳಬಹುದು. ಇಂತಹ ವ್ಯಕ್ತಿಗಳ ಪರಿಚಯವನ್ನು ನಾಡಿಗೆ ಮಾಡಿ ಕೊಡುವುದೇ ಈ ಪುಸ್ತಕದ ಉದೇಶವಾಗಿದೆ.

ವಿಜ್ಞಾನಿಗಳು ದೇಶದ ಹಿತಕ್ಕಾಗಿ ಹೆಚ್ಚು ಶ್ರಮಿಸಬೇಕು ಎಂಬ ಉಪದೇಶವು ಪ್ರಧಾನಿಯಿಂದ ಹಿಡಿದು ಸಾಮಾನ್ಯರವರೆಗೆ ಎಲ್ಲರಿಂದಲೂ ಪದೇ ಪದೇ ಬರುತ್ತಲೇ ಇರುತ್ತದೆ. ಆದರೆ ಪ್ರತ್ಯಕ್ಷದಲ್ಲಿ ಈ ಗುರಿಯು ಯಾಕೆ ಕಾರ್ಯಗತವಾಗಿಲ್ಲ ಎಂಬುದರ ಬಗ್ಗೆ ಯಾರು ಬಿಚ್ಚಿ ಹೇಳುವುದಿಲ್ಲ. ಆದ್ದರಿಂದ ವಿಜ್ಞಾನಿಗಳ ಜನಕಲ್ಯಾಣ ಸಂಶೋಧನದ ಪರಿಣಾಮಗಳು "ಹಿತ್ತಲ ಗಿಡ ಮದ್ದಲ್ಲ" ಎಂಬಂತೆ ಗೆದ್ದಲಿಗೆ ಆಹುತಿಯಾಗುತ್ತಲೇ ಇವೆ. ಇಂಥದೊಂದು ಉದಾಹರಣೆ ನಿಷ್ಠಾವಂತ ಪ್ರಯೋಗಶೀಲ ರಾಸಾಯನಿಕ ವಿಜ್ಞಾನಿ ಡಾ. ಎನ್. ಎಸ್. ಬಿರಾದಾರರು. ಅವರ ಜೀವನವಿಡೀ ಸಾಧಿಸಿದ ಸಂಶೋಧನೆಗಳು ಅನನ್ಯ. ಅವರ ಜಾಡಿನಲ್ಲಿಯೇ ಸಂಶೋಧನೆ ಕೈಕೊಂಡು ಕಾರ್ಯ ಮಾಡಿದ ಅನೇಕರು ಇಂದು ವಿಜ್ಞಾನ ಲೋಕದಲ್ಲಿ ಜಾಗತಿಕ ಮನ್ನಣೆ ಪಡೆದು ನೋಬೆಲ್ ಪಾರಿತೋಷಕಕ್ಕೆ ಅರ್ಹರಾಗಿದ್ದಾರೆ. ಆದರೆ ಡಾ. ಎನ್. ಎಸ್. ಬಿರಾದಾರ ಸ್ವತಃ ಇಷ್ಟು ಯೋಗ್ಯವಾಗಿದ್ದರೂ "Sin is geographical" ಎನ್ನುವಂತೆ ಕರ್ನಾಟಕದವರಾದ್ದರಿಂದ ಭಾರತದಲ್ಲಿಯೇ ಪರಿಗಣಿಸಲ್ಪಟ್ಟಿದ್ದಾರೆ. ಹೀಗಾಗಿ ರಸಾಯನಶಾಸ್ತ್ರ ಸಂಶೋಧನ ವಿಭಾಗದಲ್ಲಿ ಜಾಗತಿಕ ಕೊಡುಗೆಯಾಗಬೇಕಿದ್ದ ಡಾ. ಎನ್. ಎಸ್. ಬಿರಾದಾರರು ಭಾರತ ಮತ್ತು ಕರ್ನಾಟಕ ಎರಡರಲ್ಲಿಯೂ ಯಾವುದೇ ಬಗೆಯ ಅಧಿಕ ಸಂಶೋಧನೆಗೆ ಅವಕಾಶವಿಲ್ಲದೆ ಮೌನವಾಗಿ ತಮ್ಮ ಸಂಶೋಧನೆಯ ಆಸಕ್ತಿಯನ್ನು ಓದು ಬರಹ ಮಾರ್ಗದರ್ಶನಗಳ ಮೂಲಕ ಜೀವಂತವಾಗಿರಿಸಿಕೊಂಡು ಬಂದಿದ್ದಾರೆ.

ಸಮೂಹ ಮಾಧ್ಯಮದಲ್ಲಿ ಡಾ. ಎನ್. ಎಸ್. ಬಿರಾದಾರ :

ಡಾ. ಎನ್. ಎಸ್. ಬಿರಾದಾರ ಅವರು ಮಾಡಿದ ಶೋಧನೆ, ಅವುಗಳ ವೈಶಿಷ್ಟ್ಯ ಕುರಿತು ವೃತ್ತ ಪತ್ರಿಕೆಗಳಲ್ಲಿ ಟಿಪ್ಪಣಿ, ವಿವರಣೆಗಳು ಪ್ರಕಟವಾಗಿವೆ. ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್, ಹಿಂದೂ ಪತ್ರಿಕೆಗಳಲ್ಲಿ ಪ್ರಕಟವಾದ ಡಾ. ಎನ್. ಎಸ್. ಬಿರಾದಾರರ ಸಾಧನೆ–ವೈಶಿಷ್ಟ್ಯಗಳಿಗೆ ಸಂಬಂಧಿಸಿದ ಟಿಪ್ಪಣಿಗಳು ಗಮನಾರ್ಹವಾಗಿವೆ.

ಉದಾ: ಪ್ರಜಾವಾಣಿ ಪತ್ರಿಕೆಯಲ್ಲಿ ೩೧–೦೮–೧೯೭೭ರಲ್ಲಿ ಪ್ರಕಟವಾದ 'ತೇಲುವ ನಗರಗಳ ನಿರ್ಮಾಣ" ಲಘುಭಾರದ ಜಲನಿರೋಧಕ ಶಕ್ತಿಯುಳ್ಳ ಕಟ್ಟಡ ಸಾಮಗ್ರಿಗಳ ಮೂಲಕ ಕಡಿಮೆ

ವೆಚ್ಚದಲ್ಲಿ ಗಗನಚುಂಬಿ ಕಟ್ಟಡ ನಿರ್ಮಾಣ ಸಾಧ್ಯತೆಗಳ ವಿವರಣೆ ಅನೇಕ ಉದ್ದಿಮೆದಾರರ ಗಮನ ಸೆಳೆಯಿತು.

ರಾಷ್ಟ್ರಕ್ಕೆ ಡಾ. ಎನ್. ಎಸ್. ಬಿರಾದಾರ ಅವರ ಕೊಡುಗೆ :

ಬೆಳೆಯುತ್ತಿರುವ ವಿಜ್ಞಾನ ಕ್ಷೇತ್ರದಲ್ಲಿ ಡಾ. ಎನ್. ಎಸ್. ಬಿರಾದಾರರವರು ಹಲವಾರು ಕ್ಷೇತ್ರಗಳ ಕುರಿತು ಅನ್ವೇಷಣೆ ಮಾಡಿದ್ದಾರೆ. ಅವುಗಳೆಂದರೆ ವಿಸ್ತರಣ ರಸಾಯಣಶಾಸ್ತ್ರ, ಅಯಸ್ಕಾಂತೀಯ ರಸಾಯಣಶಾಸ್ತ್ರ, ಕೇಂದ್ರಿತ ರಸಾಯಣಶಾಸ್ತ್ರ, ಬಹುವಿಧ ರಸಾಯಣಶಾಸ್ತ್ರ, ಸೇಂದ್ರಿಯ ಧಾತು ರಸಾಯಣಶಾಸ್ತ್ರ, ವಿಶ್ಲೇಷಣಾತ್ಮಕ ರಸಾಯಣಶಾಸ್ತ್ರ, ಸಾದೃಶ್ಯ ರಸಾಯಣಶಾಸ್ತ್ರ, ಜೀವನಿರೀಂದ್ರಯ ರಸಾಯಣಶಾಸ್ತ್ರ ಮತ್ತು ಬಹುವಿಧ ಇಂಜಿನಿಯರಿಂಗ್ ಶಾಸ್ತ್ರ ಈ ಮೊದಲಾದ ಕ್ಷೇತ್ರಗಳಿಗೆ ತಮ್ಮ ಸಂಪ್ರಬಂದಗಳ ಮೂಲಕ ಮಹತ್ವದ ಕೊಡುಗೆ ನೀಡಿದ್ದಾರೆ.

ಅಂತರಾಷ್ಟ್ರೀಯ ಖ್ಯಾತ ವಿಜ್ಞಾನಿ :

ಅಮೇರಿಕಾದ ವಿಶ್ವ ವಿಖ್ಯಾತ ಬ್ರುಕ್ ಹೆವನ್ ಲ್ಯಾಬೋರೇಟರಿಯಲ್ಲಿ ಸಂಶೋಧನೆ ಮಾಡಿ ಮೆಚ್ಚುಗೆ ಪಡೆದ ಡಾ. ಎನ್. ಎಸ್. ಬಿರಾದಾರ ಅವರು ೧೫೦ ಸಂಪ್ರಬಂಧಗಳ ಹಿರಿಮೆಯನ್ನು ವಿಶ್ವದ ನಾನಾ ವಿಜ್ಞಾನಿಗಳು ತಮ್ಮ ಸಂಶೋಧನ ಪ್ರಬಂಧಗಳ ರಚನೆಗೆ ಮಹತ್ವದ ಆಧಾರವಾಗಿ ಆಕರವಾಗಿ ಉಲ್ಲೇಖಿಸಿ ಬಳಸಿಕೊಂಡಿರುವುದು. ಡಾ. ಎನ್. ಎಸ್. ಬಿರಾದಾರ ಅವರ ಸಂಪ್ರಬಂಧಗಳನ್ನು ಆಕರವಾಗಿ ಬಳಸಿಕೊಂಡು ಉಲ್ಲೇಖಿಸಿ ರಚಿತವಾದ ಪ್ರಕಟಿತ ವೈಜ್ಞಾನಿಕ ಪ್ರಬಂಧಗಳ ಸಂಖ್ಯೆಯೇ ೫೦೦ಕ್ಕೂ ಮಿಕ್ಕಿದೆ. ಇಂಥದೊಂದು ಮಹತ್ ಸಾಧನೆಯ ಕೇಂದ್ರ ವ್ಯಕ್ತಿ ಡಾ. ಎನ್. ಎಸ್. ಬಿರಾದಾರ ಇನ್ನೂ ಅನೇಕ ಸಂಶೋಧನೆಯ ಕನಸುಗಳನ್ನು ಕಾಣುತ್ತಲೇ ಇದ್ದಾರೆ.

ಡಾ. ಎನ್. ಎಸ್. ಬಿರಾದಾರ ಸಂಶೋಧನೆ ಪುಸ್ತಕ, ಲೇಖನಗಳಲ್ಲಿ ಮಾತ್ರ ಉಳಿಯದೇ ಅದು ನಮ್ಮ ನಿತ್ಯದ ಬದುಕಿಗೆ ಪ್ರಯೋಜನಕ್ಕೆ ಬಳಕೆಗೊಳ್ಳಬೇಕು ಎನ್ನುವ ಹಂಬಲವುಳ್ಳವರು. ಸದಾ ತಮ್ಮ ಮನಸ್ಸಿನಲ್ಲಿ ಹತ್ತಾರು ಕನಸ್ಸುಗಳನ್ನು ಹೊತ್ತು ಅವುಗಳ ಕ್ರಿಯಾತ್ಮಕತೆಗಾಗಿ ಚಿಂತಿಸುವವರಾಗಿದ್ದಾರೆ. ಪ್ರಸ್ತುತ ವ್ಯಕ್ತಿಚಿತ್ರವು ತುಂಬ ಮೌಲಿಕವಾಗಿ ಬಂದಿದೆ.

"ಡಾ. ಎನ್. ಎಸ್. ಬಿರಾದಾರ" ಲೇ. ಡಾ. ದೇವೇಂದ್ರಕುಮಾರ ಹಕಾರಿ, ೧೯೯೨ರಲ್ಲಿ ಅನುಪಮ ಪ್ರಕಾಶನ ಅಥಣಿ

೧.೮ **ದಳವಾಯಿ :**

ಪ್ರೊ. ಸಿದ್ದಣ್ಣ. ಬಿ. ಉತ್ನಾಳರವರು ದಿ. ಶ್ರೀ 'ನಿಂಗಪ್ಪ ಬಹಾದ್ದೂರ ದಳವಾಯಿ' ಅವರ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಇದನ್ನು ಅನುಪಮ ಪ್ರಕಾಶನವು ಪ್ರಕಟನೆ ಮಾಡಿದೆ.

ಇಂದಿನ ವೈಜ್ಞಾನಿಕ ಸಮೂಹ ಮಾಧ್ಯಮದಲ್ಲಿ ಅಕ್ಷರ ಸಂಸ್ಕೃತಿ ಅರ್ಥಾತ ಪುಸ್ತಕ ಸಂಸ್ಕೃತಿ ದಿನೇ ದಿನೇ ಕಡಿಮೆಯಾಗುತ್ತಿದೆ. ದೂರದರ್ಶನದ ಮುಂದೆ ಕುಳಿತು ಆನಂದಿಸುವುದು ದೃಷ್ಟಿ ಆನಂದವೇ ವಿನಃ ಹೃದಯಾನಂದವೆಂದು ಹೇಳಲು ಸಾಧ್ಯವಿಲ್ಲ. ಇಂತಹ ಸಂಕೀರ್ಣ ಸ್ಥಿತಿಯಲ್ಲಿ ಸಾಹಿತ್ಯದ ಭಾಗವಾದ ಜೀವನ ಚರಿತ್ರೆಗಳು ಪ್ರಕಟಗೊಳ್ಳುತ್ತಿರುವುದು ಸಂತೋಷದ ವಿಷಯವಾಗಿದೆ.

'ದಳವಾಯಿ' ಇದೊಂದು ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಎನ್. ಬಿ. ದಳವಾಯಿಯವರ ಬಾಳ-ಬದುಕಿನ ಚಿತ್ರವಾಗಿದೆ. ಶ್ರೀಯುತರು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಕೃಷ್ಣಾ ತೀರದ ದರೂರ ಎಂಬ ಚಿಕ್ಕ ಗ್ರಾಮದಲ್ಲಿ ಕೃಷಿಕ ಕುಟುಂಬದಲ್ಲಿ ಜನಿಸಿ ಸ್ವಸಾಮರ್ಥ್ಯದಿಂದ ಶಿಕ್ಷಣ ಪಡೆದು ಮುಂದೆ ನ್ಯಾಯಶಾಸ್ತ್ರ (ಕಾನೂನು ಪದವಿ) ಅಭ್ಯಾಸ ಮಾಡಿ ಅಥಣಿಗೆ ಬಂದರು. ಅಷ್ಟರಲ್ಲಿ ಸ್ವಾತಂತ್ರ್ಯದ ಕಿಡಿ ತನ್ನ ಕೆನ್ನಾಲಗೆಯನ್ನು ಚಾಚುತ್ತಲಿತ್ತು. ಮಹಾತ್ಮಾ ಗಾಂಧೀಜಿಯವರ ಆದರ್ಶಗಳಿಂದ ಪ್ರಭಾವಿತರಾಗಿ ನ್ಯಾಯಾಲಯಕ್ಕೆ ಶರಣು ಹೊಡೆದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ವಾಮನರಾವ ಬಿದರಿ ಅವರು ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ನಾಯಕರಾದರೆ ಶ್ರೀ ಎನ್. ಬಿ. ದಳವಾಯಿ ಅವರು ಅಥಣಿ ಭಾಗದ ಜವಾಬ್ದಾರಿ ಹೊತ್ತರು.

ಕೌಟುಂಬಿಕ ಜವಾಬ್ದಾರಿಯನ್ನು ಬದಿಗಿಟ್ಟು ಹಳ್ಳಿ-ಹಳ್ಳಿಗೆ ಹೋಗಿ ಜನರಲ್ಲಿ ಸ್ವಾತಂತ್ರ್ಯದ ಅರಿವು ಮೂಡಿಸುವಾಗ ಬ್ರಿಟಿಷರ್ ಕೆಂಗಣ್ಣಿಗೆ ಬಿದ್ದು ವಾಸವನ್ನು ಕೂಡ ಅನುಭವಿಸಿದರು. ಆದರೆ ಅದನ್ನು ಸಂತೋಷದಿಂದ ಒಪ್ಪಿಕೋಂಡರು. ನಂತರ ಹೊರಗೆ ಬಂದು ಇನ್ನೂ ಹೆಚ್ಚಿಗೆ ಒತ್ತು ಕೊಟ್ಟು ಜನರನ್ನು ಅಹೋರಾತ್ರಿ ಹುರಿದುಂಬಿಸುತ್ತಾ ಸ್ವಾತಂತ್ರ್ಯದ ಕನಸು ಕಾಣಹತ್ತಿದರು. ೧೯೪೬ರಲ್ಲಿ ಮುಂಬೈ ಪ್ರಾಂತದ ಭಾಗವಾದ ಚುನಾಯಿತ ಸದಸ್ಯರಾಗಿ ಆರಿಸಿ ಹೋದರು. ಇದು ಅವರ ಶಕ್ತಿಗೆ ಕುಂದಣವಿಟ್ಟಂತೆ ಆಯಿತು.

ಸ್ವಾತಂತ್ರ್ಯದ ನಂತರ ಸರ್ವಸಮಾಜದ ಉನ್ನತಿಗಾಗಿ ದುಡಿಯ ಹತ್ತಿದರು. ಸಮಾಜದ ಶಿಕ್ಷಣ ಪ್ರಗತಿಗಾಗಿ ಹಾಸ್ಟೆಲ್ ಹಾಗೂ ಶಿಕ್ಷಣ ಸಂಸ್ಥೆ ಕಟ್ಟಲು ಕಾರಣೀಭೂತರಾದರು. ಅಥಣಿ ಭಾಗದ ೧೯೭೩ರ ಬರಗಾಲದ ಬವಣೆಯನ್ನು ಅಳಿಸಿಹಾಕಲು ಅನೇಕ ಸರಕಾರಿ ಸಂಸ್ಥೆಗಳ ಸಹಾಯಕ್ಕೆ ಟೊಂಕಕಟ್ಟಿ ನಿಂತು ಪ್ರಾಮಾಣಿಕತೆ ಹಾಗೂ ಛಲ ಭಾವನೆಗಳಿಂದ ಜನರ ಬವಣೆಯನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾದರು.

"ದಳವಾಯಿ" ಲೇ. ಎಸ್. ಬಿ. ಉತ್ನಾಳ ೨೦೦೨ರಲ್ಲಿ ಅನುಪಮ ಪ್ರಕಾಶನ ಅಥಣಿ.

ಗ್ರಾಮೀಣ ಪ್ರದೇಶಗಳ ಹಿಂದುಳಿದ ಹಾಗೂ ಬಡ ಕುಟುಂಬಗಳನ್ನು ರಾಷ್ಟ್ರೀಯ ಅಭಿವೃದ್ಧಿಯ ಮುಖ್ಯಧಾರೆಯಲ್ಲಿ ಸೇರಿಸಲು ಅವರಿಗೆ ಶಿಕ್ಷಣ ಅವಶ್ಯವೆಂಬುದನ್ನು ಮನಗಂಡು ಶ್ರೀ ಎನ್. ಬಿ. ದಳವಾಯಿ ಅವರು ಶಿಕ್ಷಣದ ದೀಕ್ಷೆಗಾಗಿ ಬೆಳಗಾವಿ ನಗರದಲ್ಲಿ ಶಿಕ್ಷಣ ಸಂಸ್ಥೆ ಸ್ಥಾಪಿಸಿದರು.

ಅವರ ಜೀವನದ ಅನೇಕ ಘಟನೆಗಳು ಲಿಖಿತ ರೂಪದಲ್ಲಿರಲಿಲ್ಲ. ನಮ್ಮ ರಾಷ್ಟ್ರದ ಹಿಂದಿನ ಉಪರಾಷ್ಟ್ರಪತಿಗಳಾದ ಸನ್ಮಾನ್ಯಶ್ರೀ ದಿ. ಬಿ. ಡಿ. ಜತ್ತಿಯವರು ಹಾಗೂ ಅವರಂತಹ ಅನೇಕ ಶ್ರೀ ದಳವಾಯಿಯವರ ಸಮಕಾಲೀನ ಬದುಕಿದವರಿಂದ ಘಟನೆಗಳನ್ನು ಸಂಗ್ರಹಿಸಿ ಈ ಕೃತಿಯನ್ನು ಹೊರ ತರುವಲ್ಲಿ ಲೇಖಕರು ಮಾಡಿದ ಪ್ರಯತ್ನ ಶ್ಲಾಘನೀಯವಾದುದು. ಶ್ರೀ ದಳವಾಯಿಯವರ ಬದುಕಿನ ಹಾಗೂ ವಿಶೇಷವಾಗಿ ಅವರ ಹೋರಾಟದ ಚರಿತ್ರೆಯ ಸಂಪೂರ್ಣ ಸ್ವಾರಸ್ಯವನ್ನು ಕ್ರೋಢಿಕರಿಸಿ ಇಂದಿನ ಪೀಳಿಗೆಗೆ ನೀಡಿದ್ದಾರೆ.

೧.೯ ಮೂರು ರೇಡಿಯೊ ರೂಪಕಗಳು :

ಶ್ರೀ ಐ. ಬಿ. ಹಿರೇಮಠ ಕೊಣ್ಣೂರ ಅವರು ರಚಿಸಿದ ಮೂರು ರೇಡಿಯೊ ರೂಪಕಗಳು ನಾಟಕವನ್ನು ಅನುಪಮ ಪ್ರಕಾಶನವು ಪ್ರಕಟಿಸಿದೆ. ೧) ಬೆಕ್ಕು ಇಲ್ಲದಾಗ ೨) ಸುಶ್ರುತ ೩) ಗಂಧದ ಜೊತೆ ಗುದ್ದಾಟ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.

ಮೂರು ರೇಡಿಯೊ ರೂಪಕಗಳು ಎಂಬ ನಾಟಕವು ಅಂಧಶ್ರದ್ಧೆ ಮತ್ತು ಅವೈಜ್ಞಾನಿಕತೆಯನ್ನು ಹೋಗಲಾಡಿಸುವ ಉದ್ಧೇಶವನ್ನು ಹೊಂದಿದೆ.

ಬೆಕ್ಕು ಇಲ್ಲದಾಗ :

ಈ ಬೆಕ್ಕು ಇಲ್ಲದಾಗ ದೃಶ್ಯವು ಪರಿಸರದಲ್ಲಿ ಪ್ರತಿಯೊಂದು ಜೀವಿಗೂ ತನ್ನದೇ ಆದ ಸ್ಥಾನಮಾನವಿದೆ. ಅದರದೇ ಆದ ಮಹತ್ವವವಿದೆ. ಆ ಜೀವಿಯ ಕೊರತೆಯಿಂದ ಪರಿಸರಕ್ಕೆ ಆ ಮೂಲಕ ಮನುಕುಲಕ್ಕೆ ಹಾನಿ ಇದೆ ಎಂಬುದನ್ನು ತಿಳಿಸುವದು.

ಪ್ರಾಣಿ-ಪಕ್ಷಿ-ಮನುಷ್ಯರ ಮಧ್ಯದಲ್ಲಿನ ಸಂಬಂಧಗಳು ತ್ಯಾಗ, ಪ್ರೇಮ ಸ್ವಾರ್ಥ ಇವುಗಳನ್ನು ಪಾತ್ರಗಳ ಮೂಲಕ ಚರ್ಚಿಸುವ ಒಂದು ವಿನೂತನ ಪ್ರಯೋಗ.

ಒಂದು ಬೆಕ್ಕು ಪರಿಸರದಲ್ಲಿ ಇಲ್ಲದೆ ಹೋದರೆ ಮನುಕುಲಕ್ಕೆ ಹಸಿರಿನ-ಕಾಳಿನ-ಉಸುರಿನ ತೊಂದರೆಯಾದೀತು ಎಂಬ ಕಾಲಜ್ಞಾನದ ಎಚ್ಚರಿಕೆಯ ಕರೆಗಂಟೆ ಇಲ್ಲಿದೆ.

ಪಾತ್ರಗಳು :

೧. ಬೆಕ್ಕು : ನಾಯಕ ಪಾತ್ರದಲ್ಲಿರುವ ಪ್ರಾಣಿ

೨. ಅಮ್ಮ : ಮಧ್ಯಮ ವರ್ಗದ ಗೃಹಿಣಿ

೩. ಪುಟ್ಟು : ಬಾಲಕ (ಮಧ್ಯಮ ವರ್ಗದ ಮನೆತನ)

೪. ಕಿಟ್ಟು : ಬಾಲಕ (ಮಧ್ಯಮ ವರ್ಗದ ಮನೆತನ)

೫. ಪಿಂಕು : ಬಾಲಕಿ (ಮಧ್ಯಮ ವರ್ಗದ ಮನೆತನ)

೬. ರಿಂಕು : ಬಾಲಕಿ (ಮಧ್ಯಮ ವರ್ಗದ ಮನೆತನ)

೭. ಮಂಚ : ಇಲಿ

೮. ದಂಶ : ಇಲಿ

೯. ಕಂಕ : ಇಲಿ

೧೦. ವೃಕ್ಷ : ನಿಸರ್ಗ ದೇವತೆ

೧೧. ಬೆಳ್ಳಕ್ಕಿ : ಪಕ್ಷಿ

ಸುಶ್ರುತ :

ಇದು ಪ್ರಾಚೀನ ವಿಜ್ಞಾನಿ ಕುರಿತ ರೂಪಕ ಇಲ್ಲಿ ಚರ್ಚೆಯ ಮೂಲಕ ಸುಶ್ರುತರ ಹಾಗೂ ಅವರ ಗ್ರಂಥ ಸುಶ್ರುತ ಸಂಹತಾ ಕುರಿತು ಶಿಕ್ಷಕರೊಬ್ಬರು ಅವರ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವ ಸಂದರ್ಭವಿದೆ. ಒಟ್ಟಾರೆ ರೂಪಕ ಮಕ್ಕಳಿಗೆ ಸುಶ್ರುತ ಹಾಗೂ ಸುಶ್ರುತೆ ಸಂಹಿತೆ ಕುರಿತು ಸಮಗ್ರ ಪರಿಚಯ ನೀಡುತ್ತದೆ.

ಪಾತ್ರಗಳ :

೧. ಪ್ರಸಾದ : ಪ್ರೌಢಶಾಲಾ ವಿದ್ಯಾರ್ಥಿ

೨. ಗುರುಗಳು : ಪ್ರೌಢಶಾಲಾ ವಿಜ್ಞಾನ ಶಿಕ್ಷಕ

೩. ವಿವೇಕ : ಪ್ರೌಢಶಾಲಾ ವಿದ್ಯಾರ್ಥಿ

೪. ನಿಕೀಲ : ಪ್ರೌಢಶಾಲಾ ವಿದ್ಯಾರ್ಥಿ

೫. ಸುನಿತ : ಪ್ರೌಢಶಾಲಾ ವಿದ್ಯಾರ್ಥಿ

"ಮೂರು ರೇಡಿಯೊ ರೂಪಕಗಳು" ಲೇ. ಐ. ಬಿ. ಹಿರೇಮಠ ಕೊಣ್ಣೂರ ೨೦೦೬ರಲ್ಲಿ ಅನುಪಮ ಪ್ರಕಾಶನ ಅಥಣಿ.

ಗಂಧದ ಜೊತೆ ಗುದ್ದಾಟ :

ಇದು ಗಾದೆ ಮಾತು ಆಧಾರಿತ ರೇಡಿಯೊ ರೂಪಕ. ಇಂದು ವಿದ್ಯಾರ್ಥಿಗಳು ಡ್ರಗ್ಸ್‌ನಂತ ಕೆಟ್ಟು ಚಾಳಿಗೆ ಒಳಗಾಗಿ ಚಟಗಳ ಮೂಲಕ ಅವರ ಭವ್ಯ ಭವಿಷ್ಯ ಚಟ್ಟವನ್ನೇ ಏರುತ್ತದೆ. ಮಕ್ಕಳಲ್ಲಿ ಚಟಗಳನ್ನು ತಪ್ಪಿಸಲು ಒಳ್ಳೆಯ ಹವ್ಯಾಸಗಳನ್ನು ಹೇಗೆ ಬೆಳೆಸಬಹುದು ಎಂಬ ಆಲೋಚನೆ ಇಲ್ಲಿದೆ.

೧.೧೦ ಶರಣ ಸೌರಭ :

ಐದು ಜನ ಶರಣ-ಶರಣೆಯರ ಚರಿತ್ರೆಯನ್ನು ಒಳಗೊಂಡಂತೆ ಧರ್ಮ ಹಾಗೂ ಆಚರಣೆಗಳ ಕುರಿತಾದ ವೈಚಾರಿಕತೆ ವಿಶ್ಲೇಷಣೆಯೊಂದಿಗೆ ಸಿದ್ಧವಾದ "ಶರಣ ಸೌರಭ" ಪ್ರೊ. ಸಿದ್ಧಣ್ಣ ಉತ್ನಾಳ ಅವರ ಬಿಡಿ ಲೇಖನಗಳ ಸಂಗ್ರಹವಾಗಿದೆ.

ಯಾವುದೇ ವ್ಯಕ್ತಿಯ ಅಂತರಂಗದಲ್ಲಿ ಹುದುಗಿರಬಹುದಾದ ಧರ್ಮ ಪ್ರಜ್ಞೆ ಮೂಲತಃ ಭಕ್ತಿ ಅಥವಾ ಭಾವ ಮೂಲವಾಗಿರುವ ಇಂಥ ಭಾವುಕತೆಯಿಂದ ಧಾರ್ಮಿಕ ಕಟ್ಟಳೆಗಳನ್ನು ಸ್ವೀಕರಿಸುವ ವ್ಯಕ್ತಿಯನ್ನು ಎಂಥದೋ ಒಂದು ಅವ್ಯಕ್ತ ಭಯ ಬಹುಶಃ ಪಾಪಪ್ರಜ್ಞೆಯ ಭಯ ನಿಯಂತ್ರಿಸುತ್ತವೆ. ಹೀಗಾಗಿ ಧರ್ಮತತ್ವರಗಳನ್ನು ವೈಚಾರಿಕವಾಗಿ ನೋಡಲು ಆತ ಹಿಂಜರಿಯುತ್ತಾನೆ. ಈ ಪರಿಧಿಯೊಳಗೆ ಬಂಧಿಯಾದ ವ್ಯಕ್ತಿಯ ಶ್ರದ್ಧೆ ಅಂಧಶ್ರದ್ಧೆಯಾಗಿ, ಆಚರಣೆ ಆಢಂಬರವಾಗಿ, ನಂಬಿಕೆ ಮೂಢನಂಬಿಕೆಯಾಗಿ ಉಳಿಯುವುದೊಂದು ದೊಡ್ಡ ಸಾಮಾಜಿಕ ದುರಂತ.

ಪರಮ ಸತ್ಯದ ಅನ್ವೇಷಣೆಯೇ ಧರ್ಮದ ಗುರಿಯಾಗಿದೆ ಎಂದುಕೊಂಡರೆ ಧರ್ಮ ತತ್ವಗಳು ಈ ಗುರಿ ತಲುಪಲು ಸಾಧನೆಗಳಾಗುತ್ತವೆ. ಅಂದರೆ ಧರ್ಮ ತತ್ವಗಳ ತಪ್ಪುಗ್ರಹಿಕೆಯಿಂದಾಗಿ ಮನುಷ್ಯ ದಾರಿ ತಪ್ಪುತ್ತಾನೆ. ಎಲ್ಲವೂ ಆಚರಣೆಯ ಮಟ್ಟದಲ್ಲೇ ಉಳಿದು ಮೌಲಿಕವಾದುದೆಂದು ಭಾವಿಸಿ ಇದ್ದಲ್ಲಿಯೇ ಇದ್ದು ಕೊಳೆಯುತ್ತಾನೆ. ಪರಿವರ್ತನಶೀಲವಾದ ಬದುಕಿಗೆ ಹೊಂದಿಕೊಳ್ಳದ ವ್ಯಕ್ತಿ ಧರ್ಮಾಂಧನಂತೆ ತೋರುತ್ತಾನೆ.

'ಶರಣ ಸೌರಭ' ಈ ಎಲ್ಲ ನ್ಯೂನ್ಯತೆಗಳನ್ನು ಕುರಿತು ಚಿಂತಿಸುತ್ತವೆ. ಧರ್ಮ ಹಾಗೂ ನಮ್ಮ ನಂಬಿಕೆಗಳು ನಗೆಪಾಟಲಿಗೀಡಾಗುವುದನ್ನು ತಪ್ಪಿಸಲು ಕೆಲವೊಂದು ಸಂಗತಿಯನ್ನು ವೈಚಾರಿಕ ಒರೆಗಲ್ಲಿಗೆ ತಿಕ್ಕಿ ನೋಡಿ ಪರೀಕ್ಷಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಮುಖ್ಯವಾಗಿ ವೀರಶೈವ ಧರ್ಮವು ಇಲ್ಲಿ ವಿಶ್ಲೇಷಣೆಗೊಳಗಾದರೂ ಎಲ್ಲ ಧರ್ಮಗಳನ್ನು ಇಂಥ ವಿಶ್ಲೇಷಣೆಗಳಿಗೆ ಒಳಪಡಿಸುವ ಅಗತ್ಯವೊಂದು ಇಲ್ಲಿ ಎದ್ದು ತೋರುತ್ತದೆ.

"ಅರವತ್ಮೂರು ಪುರಾತನರ ಪೂಜೆಯು ವೀರಶೈವರಿಗೆ ನಿಷಿದ್ಧ" ಬಸವಣ್ಣನವರ ದೃಷ್ಟಿಯಲ್ಲಿ ಪಂಚಾಂಗ ಹಾಗೂ ಲಿಂಗತ್ಯಾಗವು ವಿದ್ವತನ್ಯಾಸವಲ್ಲ ಎಂಬ ಮೂರು ಲೇಖನಗಳು ತುಂಬ ಗಮನಾರ್ಹವಾಗಿವೆ.

"ಅರವತ್ತೂರು ಪುರಾತನರ ಪಾದ ಪೂಜೆಯಂತೆ ಪ್ರತಿಮಾ ಪೂಜೆಯಾದರೂ ವೀರಶೈವ ಸಿದ್ಧಾಂತಕ್ಕೆ ಅಥವಾ ಶಿವಾನುಭವಿಗಳ ಸಂಪ್ರದಾಯಕ್ಕೂ ಹೊರತಾದುದಾಗಿದೆ" ಎಂದು ಹೇಳುತ್ತ ಪುರಾತನರ ಪಾದಪೂಜೆಯನ್ನು ಮಾಡಿ ಅವರ ಪಾದೋದಕವನ್ನು ತಮ್ಮ ಇಷ್ಟಲಿಂಗದ ಮೇಲೆ ಎರೆಯುವುದೆಂದರೆ ಲಿಂಗಾಂಗಿಗಳಿಗೆ ಅನುಚಿತವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಪುರಾತನರು ಷಟ್‌ಸ್ಥಲ ವಿಜ್ಞಾನಿಗಳಾದ ಶಿವಯೋಗಾರೂಢರಂತೆ ಶಿವಾದ್ವೈತ ಭಕ್ತಿಯಿಂದ ಹೇಳಿ ಅವರು ಲಿಂಗಾಂಗಿಗಳಿಗೆ ಪೂಜ್ಯಪಾದನಲ್ಲ. ನಿರಾಭಾರಿ ಜಂಗಮರೇ ಪೂಜ್ಯಪಾದರು ಎಂದಿದ್ದಾರೆ. ಭಕ್ತಸ್ಥಲದಿಂದ ಐಕ್ಯಸ್ಥಲದ ಹಂತದವರೆಗೆ ಇರುವ ವೀರಶೈವ ಉಪಾಸನೆಯು ಮೊದಲ ಹಂತದಲ್ಲಿ ಮಾತ್ರ ಪುರಾತನವನ್ನು ಸ್ಮರಿಸಬಹುದು.

"ಬಸವಣ್ಣನವರ ದೃಷ್ಟಿಯಲ್ಲಿ ಪಂಚಾಂಗ" ಎಂಬ ಲೇಖನದಲ್ಲಿ 'ಪಂಚಾಂಗ' ಹೇಗೆ ನಮ್ಮ ಜನಜೀವನವನ್ನು ನಿಯಂತ್ರಿಸುತ್ತಿದೆ ಎಂಬುದನ್ನು ವಿವರಿಸಿದ್ದಾರೆ. ಪಂಚಾಂಗ ನೋಡಿ ಕಾರ್ಯಪ್ರವೃತ್ತರಾಗುವ ಹಾಗೂ ಭವಿಷ್ಯ ತಿಳಿಯುವ ಅನಿಷ್ಟ ಪದ್ಧತಿಯ ವಿರುದ್ಧ ಬಸವಣ್ಣನವರು ವೈಚಾರಿಕರಾಗಿ ಪ್ರತಿಭಟಿಸಿದ್ದನ್ನು ಇಲ್ಲಿ ದಾಖಲಿಸಲಾಗಿದೆ.

"ಮಠದ ಸ್ವಾಮಿಗಳು ಯಾವುದೇ ಶುಭ ಕಾರ್ಯ ಮಾಡುವಾಗ ತಿಥಿ, ನಕ್ಷತ್ರ ನೋಡಿ ಕಾರ್ಯಪ್ರವೃತ್ತರಾಗುತ್ತಾರೆ. ನಮ್ಮ ಎಲ್ಲ ಆಚರಣೆಗಳು ಪಂಚಾಂಗ ಗರ್ಭದಲ್ಲೇ ಅಡಗಿಕೊಂಡಿವೆ ಎಂದು ಖೇದ ವ್ಯಕ್ತಪಡಿಸುತ್ತಾರೆ. ಬಸವಣ್ಣನವರ ಮಾತುಗಳನ್ನೇ ಉದ್ಧರಿಸುತ್ತಾ ಸಾಂಕ್ರಾಮಿಕ ರೋಗದಂತೆ ಜಗತ್ತನ್ನೆಲ್ಲ ತಿಥಿ, ಮುಹೂರ್ತಗಳು ಆವರಿಸಿಕೊಂಡಿವೆ. ವೇದದ ಕರ್ಮಕಾಂಡದ ಅಂಗವಾಗಿ ಬೆಳೆದುಬಂದ ಹಿಂಸಾಮೂಲವಾದ ಯಜ್ಞ-ಯಾಗಾದಿಗಳಿಗೆ ಸಮಯ ಸೂಚಿಸುವ ಜ್ಯೋತಿಷ್ಯ ಶಾಸ್ತ್ರವನ್ನು ಶಕುನ, ಮೂಢನಂಬಿಕೆ ಮುಂತಾದ ಅನಿಷ್ಟ ಪದ್ಧತಿಗಳನ್ನು ಖಂಡಿಸಬೇಕು" ಎಂದಿದ್ದಾರೆ.

ಪೌರೋಹಿತ್ಯ ಕರ್ಮಕಾಂಡದ ಕಬ್ಬಿಣದ ಸಂಕೋಲೆಗಳನ್ನು ಕಡಿದು ಹಾಕಿದವರಲ್ಲಿ ಶರಣರು ಆದ್ಯರು ಎಂಬುದನ್ನು ವಿವರಿಸಿ ವೀರಶೈವರನ್ನು ಎಚ್ಚರಿಸುತ್ತಾರೆ.

ಲಿಂಗತ್ಯಾಗವು ವಿದ್ವತ್ಸನ್ಯಾಸವಲ್ಲ ಎಂಬ ಲೇಖನದಲ್ಲಿಯೂ ಖಚಿತ ಅಭಿಪ್ರಾಯಗಳು ಈ ಪುಸ್ತಕದ ಮಾಹಿತಿಯನ್ನು ಹೆಚ್ಚಿಸುತ್ತವೆ. ಉದಾಹರಣೆಗೆ "ವೀರಶೈವ ಗ್ರಂಥಗಳ ಆಧಾರದ ಮೇಲಿಂದ ಲಿಂಗವಂತರಿಗೆ ಯಾವ ವರ್ಣಾಶ್ರಮಗಳೇ ಇಲ್ಲವೆಂದು ಸ್ಪಷ್ಟವಾಗುತ್ತಿರುವಾಗ ಕೆಲವು ಸ್ವಾಮಿಗಳು ತಾವು ವಿದ್ವತ್ಸನ್ಯಾಸಿಗಳೆಂದು ಹೇಳಿಕೊಳ್ಳುವುದು ಅವರ ಮೂರ್ಖತನವಾಗುತ್ತದೆ. ಲಿಂಗಧಾರಣ ವಿಷಯದಲ್ಲಿ ಅಶ್ರದ್ಧೆಯನ್ನು ಹುಟ್ಟಿಸುತ್ತ ಭಕ್ತರನ್ನು ಭವಿಗಳನ್ನಾಗಿ ಮಾಡುವವರ ವಿರುದ್ಧ ಎಚ್ಚರಿಕೆಯಿಂದ ಇರಬೇಕೆಂದು ಸೂಚಿಸುತ್ತಾರೆ."

ವರದಾನಿ ದಾನಮ್ಮ, ರೆಮ್ಮೆವ್ವೆ, ಯತಿಕುಲ ಪಿತಾಮಹ ಶ್ರೀ ಅಥಣಿ ಶಿವಯೋಗಿಗಳು, ಪರಮ ದಾಸೋಹಮೂರ್ತಿ ಸಿದ್ಧಲಿಂಗ ಚರವರೇಣ್ಯರ ಬಗ್ಗೆ ಇರುವ ಚರಿತ್ರಾತ್ಮಕ ಲೇಖನಗಳಲ್ಲಿ ಪ್ರೊ. ಎಸ್. ಬಿ. ಉತ್ನಾಳರ ಸಂಶೋಧನಾ ಪ್ರವೃತ್ತಿ ಎದ್ದು ತೋರುತ್ತದೆ. ಶಿವಯೋಗದ ನಿಲುವಿನಿಂದ ಸಾಮಾಜಿಕ ಸೂತ್ರವನ್ನವಲಂಭಿಸಿ ಕೆಳಗಿಳಿದು ಧಾರ್ಮಿಕ ಪ್ರಚಾರದ ಕ್ರಿಯಾಶಕ್ತಿಯನ್ನು ಮೆರೆದ ಈ ಶರಣ-ಶರಣೆಯರ ಬಗ್ಗೆ ಅವರು ಮನ ತುಂಬುವಂತೆ ವಿವರಿಸುತ್ತಾರೆ.

ಭಕ್ತರ ದುರ್ಗುಣಗಳನ್ನು ಭೀಕ್ಷೆಯಾಗಿ ಪಡೆಯುವ ಮಹಾಂತ ಜೋಳಿಗೆಯ ರಚನಾತ್ಮಕ ಸೃಷ್ಟಿಯನ್ನು ಅವರು ಸ್ವಾಗತಿಸುತ್ತಾರೆ. ಸಕಲಗುಣ ರಹಿತನಾದವನೇ ಮುಕ್ತನು. ಈ ಅರ್ಥದಲ್ಲಿ ಪಾಪ ಹಾಗೂ ಪುಣ್ಯರಹಿತನಾದವನೇ ಮುಕ್ತನು. ಮಹಾಂತ ಜೋಳಿಗೆಯಲ್ಲಿ ಸಂಗ್ರಹವಾದ ಪಾಪಕ್ಕೆ ಪುಣ್ಯದ ವೆಚ್ಚವಾಗಿ ಲೋಕಕಲ್ಯಾಣವಾಗುತ್ತದೆ.

ಜತ್ತದ ಶಿವಲಿಂಗಮ್ಮನವರನ್ನು ಕುರಿತು ಲೇಖಕರು ನಡೆಸಿದ ಆಳವಾದ ಅಧ್ಯಯನ ಹಾಗೂ ಸಂಶೋಧನೆಗಳು ತುಂಬಾ ಉಪಯುಕ್ತವಾಗಿವೆ. ಗಡಿನಾಡಿನಲ್ಲಿ ಆಗಿಹೋದ ಶ್ರೇಷ್ಠ ಶರಣೆಯರ ಬಗ್ಗೆ ಇದುವರೆಗೆ ಯಾರೂ ಲಕ್ಷ್ಯವಹಿಸಿರಲಿಲ್ಲ. ವಸ್ತು ಸಂಗತಿಗಳನ್ನು ಆಧಾರ ಸಹಿತ ವಿವರಿಸಿ ಇತಿಹಾಸವನ್ನು ಸಕ್ರಮಗೊಳಿಸಿದ ಶ್ರೇಯಸ್ಸು ಲೇಖಕರದು.

ಧರ್ಮ ವ್ಯಕ್ತಿಯ ಮಾನಸಿಕ, ಸಾಂಸ್ಕೃತಿಕ, ಸಾಮಾಜಿಕ ವಿಕಾಸಕ್ಕೆ ಕಾರಣವಾಗಬಹುದು. ಶರಣ ತತ್ವಗಳನ್ನು ವೈಚಾರಿಕವಾಗಿ ಗ್ರಹಿಸುವುದು ಮುಖ್ಯ ಎಂಬ ಸಂದೇಶ ಇಲ್ಲಿಯ ಬಹುತೇಕ ಲೇಖನಗಳಲ್ಲಿ ಗುಪ್ತಗಾಮಿನಿಯಾಗಿ ಪ್ರವಹಿಸುತ್ತದೆ.

ಲೇಖನಗಳನ್ನು ಬರೆಯುವ ಸಂದರ್ಭದಲ್ಲಿ ತೂರಿಬರುವ ವಿಚಾರಗಳ ಒತ್ತಡದಿಂದಾಗಿಯೋ ಏನೋ ಇಲ್ಲಿಯ ಲೇಖನಗಳಲ್ಲಿ ಆಂತರಿಕ ಬೆಳವಣಿಗೆಗೆ ಶಿಥಿಲವೆನಿಸುತ್ತದೆ. ಶೈಲಿ ಹರಿತವಾಗಿದೆ ಒಟ್ಟಿನಲ್ಲಿ ಲೇಖನಗಳಲ್ಲಿ ಸಾಮಾಜಿಕ, ಧಾರ್ಮಿಕ ಚಿಂತನೆಗಳಿಗೆ ಮುಕ್ತ ಅವಕಾಶ ದೊರಕಿದೆ. ಲೇಖನಗಳಲ್ಲಿಯ ವಿಚಾರ ಪ್ರಚೋಧಕ ಗುಣ ಬುದ್ಧಿಜೀವಿಗಳನ್ನು ಕೆಣಕುವಂತೆ ಜನಸಾಮಾನ್ಯರನ್ನು ಬೆಳಕಿನತ್ತ ಕೊಂಡೊಯ್ಯುತ್ತದೆ.

೧.೧೧ ಷಹೀದೆ ಕರ್ಬಲಾ :

ದ. ಗ. ಶಿ. ಹುರಳಿ ಅವರು ರಚಿಸಿದ "ಷಹೀದೆ ಕರ್ಬಲಾ" ಎಂಬ ವ್ಯಕ್ತಿಚಿತ್ರಣ ಕತೆ ಇದನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

"ಶರಣ ಸೌರಭ" ಲೆ : ಎಸ್. ಬಿ. ಉತ್ನಾಳ ೧೯೮೭ರಲ್ಲಿ ಅನುಪಮ ಪ್ರಕಾಶನ ಅಥಣಿ.
"ಷಹೀದೆ ಕರ್ಬಲಾ" ಲೇ : ಗ. ಶಿ. ಹುರಳಿ, ಅನುಪಮ ಪ್ರಕಾಶನ ಅಥಣಿ.

ಸತ್ಯಪ್ರಿಯತೆ, ತತ್ವನಿಷ್ಠೆ, ನ್ಯಾಯ, ನಿಷ್ಠುರತೆ, ವಿಚಾರ ಸ್ವಾತಂತ್ರ್ಯ ಮುಂತಾದ ಉಚ್ಚ ತತ್ವಗಳ ಪರಿಪಾಲನೆಗಾಗಿ ಯಾರಿಗೂ ಅಂಜದೆ, ಅಳುಕದೆ, ಪ್ರಚಂಡವಾದ ಪಾಶವೀಶಕ್ತಿಯನ್ನು ಸಹ ಎದುರಿಸಿ ಆತ್ಮಾರ್ಪಣ ಮಾಡಿದ ಧರ್ಮ ವೀರರಾದ ಹಜರತ್ ಇಮಾಮ್ ಹುಸೇನರ ಕತೆಯಿದು. ಕರ್ಬಲಾದ ಮರಭೂಮಿಯಲ್ಲಿ ನಡೆದುಹೋದ ಎಂದೂ ಮರೆಯಲಾಗದ ಈ ಐತಿಹಾಸಿಕ ದುರಂತದ ಕತೆಯನ್ನು ರಚಿಸಲಾಗಿದೆ. ಉರ್ದು ಗ್ರಂಥಗಳ ಆಧಾರದಿಂದ ಕರ್ಬಲಾದ ಕತೆಯನ್ನು ಬರೆಯಲಾಗಿದೆ.

೧.೧೨ ಶಾಂತಸಾಗರ (ಜೀವನ ಚರಿತ್ರೆ) :

ಶ್ರೀಮತಿ ಲೀಲಾ ಕಲಕೋಟಿಯವರು ಬರೆದ "ಶಾಂತ ಸಾಗರ" ಜೀವನ ಚರಿತ್ರೆಯನ್ನು ಅನುಪಮ ಪ್ರಕಾಶನವು ಪ್ರಕಟಿಸಿದೆ.

ಕೇವಲ ಕವನ ಸಂಕಲನಗಳನ್ನೇ ಬರೆಯುತ್ತಿದ್ದ ಲೀಲಾ ಕಲಕೋಟಿಯವರಿಗೆ ಶ್ರೀಮತಿ ಶಾಂತಾದೇವಿಯವರ ನಿಕಟ ಸಂಕರ್ಪದಿಂದಾಗಿ ಮತ್ತು ಅವರ ಕೃತಿಗಳ ಸಮೀಕ್ಷೆಯಿಂದಾಗಿ ಅವರು ಕರ್ನಾಟಕಕ್ಕೆ ಸಲ್ಲಿಸಿದ ಮತ್ತು ಮಹಿಳೆಯರಿಗೆ ಸಲ್ಲಿಸಿದ ಹಲವಾರು ರೀತಿಯ ಸೇವೆಗಳನ್ನು ಗಮನಿಸಿದಾಗ ಅವರ ನಡೆ, ನುಡಿಗಳನ್ನು ನೋಡಿ ಇಂತಹ ಖ್ಯಾತ ಮಹಿಳೆಯ ಪರಿಚಯವನ್ನು ಕರ್ನಾಟಕದ ಎಲ್ಲ ಮಹಿಳೆಯರಿಗೆ ಮಾಡಿಕೊಡಬೇಕೆನ್ನುವ ವಿಚಾರದಿಂದಾಗಿ ಮತ್ತು ಉಳಿದ ಮಹಿಳೆಯರಿಗೆ ಇವರು ಮಾರ್ಗದರ್ಶಿಯಾಗಲಿ, ಇವರಂತೆ ತಮ್ಮ ಜೀವನದಲ್ಲೂ ಅನೇಕ ಸಾಧ್ಯವೆನಿಸಿದ ಮಾರ್ಪಾಡುಗಳನ್ನು ಮಾಡಿಕೊಳ್ಳಲು ಅನುಕೂಲವಾಗಲೆಂದು ಇವರ ಜೀವನ ಚರಿತ್ರೆಯನ್ನು ಬರೆದಿದ್ದಾರೆ.

ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ಬೆಳಗಾವಿಯಲ್ಲಿ ಡಿಸೆಂಬರ್ ೧೦ ೧೯೨೨ರಂದು ಶ್ರೀಮತಿ ಜಯವಂತಿದೇವಿ, ಶ್ರೀಯುತ ಮುರಿಗೆಪ್ಪ ಶೆಟ್ಟಿಯವರ ಮೂರನೇ ಮಗಳಾಗಿ ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ಬೆಳಗಾವಿ ೧ನೇ ನಂಬರ ಶಾಲೆಯಲ್ಲಿ ಕಲಿತು ಅನಂತರ ಹೈಸ್ಕೂಲ ಶಿಕ್ಷಣವನ್ನು ಡಿಸೆಂಬರ್ ೧೨ ೧೯೪೨ರಂದು ಶಾಂತಾದೇವಿಯವರು ಶ್ರೀಯುತ ಮಾಳವಾಡರೊಂದಿಗೆ ವಿವಾಹವಾದರು. ಬಾಲ್ಯದಿಂದಲೂ ಬೆಳೆದುಕೊಂಡ ಬಂದಿದ್ದ ಇವರ ಓದುವ ಹವ್ಯಾಸಕ್ಕೆ ಹೊಸ ಸ್ಫೂರ್ತಿಯನ್ನು ಕೊಟ್ಟಂತೆ ಶ್ರೀಯುತ ಮಾಳವಾಡರು ಇವರಿಗೆ ಕಾಲೇಜ ಗ್ರಂಥಾಲಯದಿಂದ ಶಾಂತೇಶ ವಾಚಲನಾಲಯ ಮತ್ತು ಸಾಹಿತ್ಯ ಮಂದಿರಗಳಿಂದ ಓದಲು ಕತೆ, ಕಾದಂಬರಿ, ಪುಸ್ತಕಗಳನ್ನು ತಂದು ಕೊಡುತ್ತಿದ್ದರು ಅವುಗಳನ್ನು ಓದಿ ಅಪಾರವಾದ ಜ್ಞಾನವನ್ನು ಹೊಂದಿದರು. ನಂತರ ತಮ್ಮ ಸುತ್ತಲಿನ ಜೀವನದಲ್ಲಿ ತಾವು ಕಂಡ ಕೆಲ ಸತ್ಯ

ಸಂಗತಿಗಳಿಗೆ ಸಾಹಿತ್ಯದ ಕಲ್ಪನೆಯನ್ನು ಸೇರಿಸಿ ೧೯೪೧ರಲ್ಲಿ "ಮೊಗ್ಗೆಯ ಮಾಲೆ" ಕಥಾ ಸಂಕಲನವನ್ನು ಹೊರತಂದರು. ಇದರಲ್ಲಿಯ ಹೆಚ್ಚು ಕಥೆಗಳು ದಾಂಪತ್ಯ ಜೀವನದಲ್ಲಿಯ ಸಮಸ್ಯೆ ತಪ್ಪು ತಿಳುವಳಿಕೆಗಳನ್ನು ಕುರಿತವುಗಳಾಗಿವೆ.

ಈ ಕೃತಿಯು ಸ್ಫೂರ್ತಿಯಿಂದಾಗಿ ೧೯೫೪ರಲ್ಲಿ "ಕುಂಕುಮ ಬಲ" ಎನ್ನುವ ಕಥಾ ಸಂಗ್ರಹ ರಚಿಸಿದ್ದಾರೆ. ಇದರಲ್ಲಿ ಕೆಲ ಕಥೆಗಳು ಐತಿಹಾಸಿಕ ಹಿನ್ನೆಲೆಯನ್ನು ಪಡೆದಂಥವು. ಇನ್ನೂ ಕೆಲವು ವಿವಾಹಿತ ಸ್ತ್ರೀಗೆ ಸಂಬಂಧಿಸಿದ ಕಥೆಗಳಿವೆ.

ನಂತರ ೧೯೫೭ರಲ್ಲಿ "ಕನ್ನಡ ತಾಯಿ" ೧೯೫೬ರಲ್ಲಿ "ಮಹಿಳೆಯರ ಆತ್ಮಶ್ರೀ" ೧೯೫೮ರಲ್ಲಿ ಹರಿಹರನ ಪ್ರಾರ್ಥನೆಗಳು, ಎನ್ನುವ ಕವನ ಸಂಕಲನ ಹೊರತಂದರು.

೧೯೬೧ರಲ್ಲಿ ಮಹಿಳೆಯರ ಅಲಂಕಾರ ಎಂಬ ಸಂಶೋಧನಾ ಗ್ರಂಥ.

೧೯೬೧ರಲ್ಲಿ "ಸೊಬಗಿನ ಮನೆ" ಎನ್ನುವ ಗೃಹಾಲಂಕಾರ ಕೃತಿ.

೧೯೬೮ರಲ್ಲಿ ಬಸವ ಪ್ರಕಾಶ ಚಾರಿತ್ರಿಕ ಕೃತಿ.

೧೯೬೮ರಲ್ಲಿ "ಧಾರವಾಡ ಜಿಲ್ಲೆ" ಎಂಬ ಪರಿಚಯ ಪುಸ್ತಕ.

೧೯೬೮ರಲ್ಲಿ "ದಾಂಪತ್ಯ ಯೋಗ" ಕೃತಿ.

೧೯೭೨ರಲ್ಲಿ "ಅಕ್ಕನ ಭಾವ ಸೌರಭ" ಕಥಾ ಸಂಕಲನ.

೧೯೭೩ರಲ್ಲಿ "ಕೆಳದಿ ಚೆನ್ನಮ್ಮ" ಎನ್ನುವ ಪುಸ್ತಕ ಪ್ರಕಟವಾಗಿದೆ.

ಮಕ್ಕಳಿಗಾಗಿ ಇದನ್ನು ಬರೆದರು. ಕೆಳದಿ ಸಂಸ್ಥಾನವನ್ನು ಆಳಿದ ಶೌರ್‍ಯದ, ಧೈರ್‍ಯದ ಗಣಿಯಾದ ರಾಣಿಚೆನ್ನಮ್ಮನ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಇಂತಹ ಸಾಹಸಮಯವಾದ ಕೃತಿಯನ್ನು ಮಕ್ಕಳಿಗೆ ಕೊಟ್ಟ ಅದರಲ್ಲಿ ಸ್ಫೂರ್ತಿ ಹೊಮ್ಮಿ ಬರುವಂತೆ ಮಾಡಿದ್ದಾರೆ.

ಹೀಗೆ ನಾನಾ ಬಗೆಯಲ್ಲಿ ಸಾಹಿತ್ಯ ಸೇವೆಯನ್ನು ಸಲ್ಲಿಸಿ ಕರ್ನಾಟಕಕ್ಕೆ ಸಾಹಿತ್ಯದ ಕೊಡುಗೆಯನ್ನು ನೀಡಿದ ಇವರಿಗೆ ೧೯೬೭ರಲ್ಲಿ ಜ.ಚ.ನಿ. ಬೆಳ್ಳಿ ಹಬ್ಬದ ಪ್ರಶಸ್ತಿ "ಸಾಹಿತ್ಯ ಸುಮ" ಬಂಗಾರದ ಪದಕ, ೧೯೭೫ರಲ್ಲಿ ಹುಬ್ಬಳ್ಳಿ ವೆಸ್ಟರೋಟರಿ ಕ್ಲಬ್ ಹಾಗೂ ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತುಗಳು ಮಹಿಳಾ ವರ್ಷದ ಸವಿನೆನಪಿಗಾಗಿ ಸತ್ಕಾರವನ್ನು ಮಾಡಿದರು. ೧೯೭೮ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ೧೯೮೨ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯು ದೊರಕಿತು. ಇವುಗಳಲ್ಲದೇ ಅನೇಕ ಸಂಘ–ಸಂಸ್ಥೆಗಳು, ಶಾಲೆ–ಕಾಲೇಜುಗಳು ಇವರನ್ನು ಸತ್ಕರಿಸಿವೆ.

"ಶಾಂತಸಾಗರ" ಜೀವನ ಚರಿತ್ರೆ ಲೇ : ಶ್ರೀಮತಿ ಲೀಲಾ ಕಲಕೋಟಿ ೧೯೯೦ರಲ್ಲಿ ಅನುಪಮ ಪ್ರಕಾಶನ ಅಥಣಿ.

ಸಾಹಿತ್ಯ ಮನ ಕೆರಳಿಸುವಂತಹದಾಗದೇ ಮನ ಅರಳಿಸುವಂತಾಗಬೇಕು. ಪ್ರತಿ ಕ್ಷೇತ್ರದಲ್ಲಿ ಸಾಹಿತ್ಯ ಮುಂದೆ ಬರಬೇಕು. ಇನ್ನೂ ಗಟ್ಟಿಯಾದ ಸಾಹಿತ್ಯವನ್ನು ಪ್ರಯತ್ನಿಸಬೇಕೆಂದು ತಮ್ಮ ದೀರ್ಘ ಅನುಭವದಿಂದಾಗಿ ಹೇಳಿರುವುದು ಸಮಂಜಸವಾಗಿದೆ.

೨.೧ ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ :

ಪ್ರೊ. ಸಿದ್ದಣ್ಣ. ಬಿ. ಉತ್ನಾಳರವರು ಬರೆದಿರುವ "ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ" ಕೃತಿಯನ್ನು ಅನುಪಮ ಪ್ರಕಾಶನವು ಪ್ರಕಟಿಸಿದೆ.

"ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ"ಯನ್ನು ಇಂಗ್ಲೀಷ್ ಹಾಗೂ ಹಿಂದಿ ಕಾದಂಬರಿಗಳ ಉದಾಹರಣೆ ಹೋಲಿಕೆಗಳಿಂದ ವಿಷಯ ವಿವರಿಸಿದೆ. ಲೇಖಕರ ಅಭ್ಯಾಸ ಆಳ ಅಗಲ ಓದುಗರಿಗೆ ಪರಿಚಯವಾಗದಿರದು. ಉತ್ನಾಳ ಅವರು ಭಾಷೆಯ ಮಡಿ ಮೈಲಿಗೆಯಿಂದ ಬಲು ದೂರ! ಯಾವುದೇ ಒಂದು ವಿಷಯದ ಅಭ್ಯಾಸಕ್ಕೆ ಹರವಾದ ಹೃದಯ.ಸ ಆಳ ಅಭ್ಯಾಸ ಪ್ರಾಮಾಣಿಕ ಪ್ರಯತ್ನ ಅವಶ್ಯವೆಂಬುದು ಅರಿತರೆ ಸಾಕಲ್ಲದೆ ಸಾಧನೆಯೂ ಬೇಕು. "ಸಾಹಿತ್ಯ ನಿರ್ಮಾಣಕ್ಕೆ ಪರಿಸ್ಥಿತಿ ಪ್ರೇರಕವಾದರೆ ಪರಿಸರ ಪೂರಕವಾಗಿರುತ್ತದೆ."

"ಕಾದಂಬರಿಯು ಮಾನವೀಯತೆಯಿಂದ ವಂಚಿತವಾದರೆ ಅದೊಂದು ನಿರರ್ಥಕ ಶಬ್ದಗಳ ರಾಶಿಯಾಗುತ್ತದೆ" ಎನ್ನುವ ಪೋಸ್ಟರ್‌ರ ಮಾತನ್ನು ಆಧರಿಸಿದ ಲೇಖಕರು ಮಾನವೀಯತೆಯ ಮೂಲ ಗುಣಧರ್ಮಗಳಾದ ಕರುಣೆ, ಕಕ್ಕುಲತೆ, ನವರಸಗಳ ಹೊಂಡ ಪ್ರಾದೇಶಿಕತೆ ಎಂಬುದನ್ನು ಸ್ಪಷ್ಟಪಡಿಸಲು ಯತ್ನಿಸಿದ್ದಾರೆ. ಅವರ ಪರಿಶ್ರಮ ಸಾರ್ಥಕ! "ಪ್ರತಿಯೊಂದು ಕಾದಂಬರಿಯು ನಿಜ ಜೀವನವನ್ನೇ ತಳಹದಿಯಾಗಿಟ್ಟುಕೊಂಡಿದೆ. ಅಷ್ಟರಮಟ್ಟಿಗೆ ನಾನು ಜೀವನವನ್ನೇ ಅವಲಂಭಿಸಿದ್ದೇನೆ" ಎನ್ನುವ ರಾವ ಬಹಾದ್ದೂರ ಅವರ ಮಾತು ಪ್ರಾದೇಶಿಕತೆಗೆ ಪೂರಕವಾಗಿದೆ.

ಜನಜೀವನಕ್ಕೆ ಪ್ರಾದೇಶಿಕತೆ ಪ್ರಮುಖ. ಜನರ ಆಹಾರ-ವಿಹಾರ, ಉಡುಗೆ-ತೊಡುಗೆ, ಉದ್ಯೋಗ, ಭಾಷೆ-ಬರಹಗಳಲ್ಲಿ ಪ್ರಾದೇಶಿಕತೆ ಪ್ರಕಟವಾಗದಿರದು. ಪ್ರಾದೇಶಿಕ ಪ್ರಭಾವಕ್ಕೊಳಗಾದ ವ್ಯಕ್ತಿ ತನ್ನ ಪರಿಸರದ ಮಡಿಲಲ್ಲಿಯೇ ಜೋಪಾನವಾಗಬೇಕಾದುದು ಅನಿವಾರ್ಯ. ಅದಕ್ಕಾಗಿ ನಿಸರ್ಗದತ್ತ ಪ್ರಾದೇಶಿಕತೆಯ, ಪರಿಸರದ ಮಾಲಿನ್ಯ ಕಾಯ್ದುಕೊಂಡು ಬದುಕುವುದು ಆರೋಗ್ಯಕರ ಲಕ್ಷಣ! ನಾಗರಿಕತೆಯ (ಛಾಯೆ) ನೆರಳು ಭಾಷೆ-ಬರಹ-ಬದುಕಿನಲ್ಲಿ ಒಡಮೂಡುತ್ತದೆ. ನಾಗರಿಕತೆಯೊಂದೇ ಪರಿಪೂರ್ಣ ಬದುಕಿನ ಸಂಕೇತವಲ್ಲ. ಕವಿ ಕಣವಿ ಅವರು ಹೇಳುವಂತೆ 'ನಾಗರಿಕತೆ ಮುಗಿಲಿಗೇರಿ ಬಾಂಬಿನ ಮಳೆಗರೆಯಿತು!' ಎನ್ನುವಂತಾಗುತ್ತದೆ. ಅದಕ್ಕಾಗಿ ಆತ್ಮ ವ್ಯವಸಾಯದ ಸಾಂಸ್ಕೃತಿಕ ಪ್ರಾದೇಶಿಕತೆ ಪರಿಪಕ್ವ ಆಹಾರವಾಗಬೇಕು. ಆಗ ಬದುಕು ಸಾರ್ಥಕ! ಸಂಸ್ಕೃತಿಗೆ ಸಾಹಿತ್ಯ ತಾಯಿಬೇರು. ಅಂತಹ ಸಾಹಿತ್ಯ ನಿರ್ಮಾಣ ಕಾರ್ಯದಲ್ಲಿ ಕಾದಂಬರಿಗಳ ಪಾತ್ರ

ಹಿರಿದು! ಇಂದಿನ ಕತೆ, ಕಾದಂಬರಿಗಳು ಚಲನಚಿತ್ರಗಳಾಗಿ ಬದುಕಿನ ಆಗು–ಹೋಗುಗಳಿಗೆ ಚಲನೆ ನೀಡುತ್ತಿರುವುದು ನಾವಿಂದು ಕಾಣುವ ಸತ್ಯಚಿತ್ರ! ವಿಚಿತ್ರವಾಗಿದೆ. ಅದಕ್ಕಾಗಿ ಒಳ್ಳೆಯ ಆಚಾರ–ವಿಚಾರಗಳ ಪ್ರಚೋದನೆಗೆ ಪಕ್ವ–ಪ್ರೌಢ, ಕತೆ–ಕಾದಂಬರಿಗಳ ಅವಶ್ಯಕತೆ ಹಿಂದಿನಗಿಂತಲೂ ಹೆಚ್ಚು ಅವಶ್ಯ! ಅಂತಹ ಕಾದಂಬರಿಗಳಿಗೆ ಪ್ರಾದೇಶಿಕತೆಯು ಪರಿಪೂರ್ಣ ಆಹಾರ! ನಮ್ಮ ನಾಡಿನ ಕೆಲವು ಶ್ರೇಷ್ಠ ಕಾದಂಬರಿಗಳನ್ನು ಆರಿಸಿಕೊಂಡು ಅವುಗಳನ್ನು ಒಡಮೂಡಿದ ಪ್ರಾದೇಶಿಕತೆಯನ್ನು ಎಸ್. ಬಿ.ಉತ್ನಾಳ ಅವರು ಸಮಯೋಚಿತವಾಗಿ, ಸರಳ ಸುಂದರವಾಗಿ ಚಿತ್ರಿಸಲು ಯತ್ನಿಸಿದ್ದಾರೆ. ಇಂದೊಂದು ಹೊಸ ವಿಚಾರವಾದರೂ ಹಿತವಾದುದಾಗಿದೆ.

"ಹೃದಯ ಸ್ಪರ್ಶಿ ಪ್ರಾದೇಶಿಕ ವರ್ಣನೆಯ ಕಾದಂಬರಿಕಾರನಿಗೆ ವಿಶೇಷ ಹಿರಿಮೆ ಮತ್ತು ಕಲೆಯ ಸೌಷ್ಠವವನ್ನು ಕೊಡುತ್ತದೆ" ಎಂದು ಹೇಳುವ ಲೇಖಕರ ಮಾತು ಓದುಗರ ಹೃದಯಕ್ಕೆ ಸೂಜಿಗಲ್ಲಾಗಿದೆ.

ಇಂದಿರಾಬಾಯಿ :

ಪ್ರಾದೇಶಿಕ ಸತ್ವವುಳ್ಳ ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿ ಇಂದಿರಾಬಾಯಿ. ಇದನ್ನು ಶ್ರೀ ಗುಲ್ವಾಡಿ ವೆಂಕಟರಾಯರು ೧೮೯೯ರಲ್ಲಿ ಬರೆದರು. ಈ ಕಾದಂಬರಿಯಲ್ಲಿ ಸಾಮಾಜಿಕ ಅನಿಷ್ಟಗಳ ವಿರುದ್ಧ ತಿಳಿಹಾಸ್ಯ ಬೆರೆತ ವಿಡಂಬಣೆಯ ಮೂಲಕ ಪ್ರಾದೇಶಿಕ ಭಾಷೆಯನ್ನು ಹರಿತವಾಗಿ ಬಳಸಿಕೊಳ್ಳಲಾಗಿದೆ.

ಕಾನೂರು ಸುಬ್ಬಮ್ಮ ಹೆಗ್ಗಡತಿ :

ರಾಷ್ಟ್ರಕವಿ ಕುವೆಂಪು ಅವರ "ಕಾನೂರು ಸುಬ್ಬಮ್ಮ ಹೆಗ್ಗಡತಿ" ಪ್ರಾದೇಶಿಕತೆಯ ಶ್ರೇಷ್ಠ ಕಾದಂಬರಿ. 'ಮಲೆಗಳಲ್ಲಿ ಮದುಮಗಳು' ಅನುಭವದ ಆಳ–ಅಗಲಗಳಿಂದ ಅದಕ್ಕಿಂತ ಗುಂಜಿ ತೂಕ ಹೆಚ್ಚೆಂಬುದು ಉತ್ನಾಳರವರ ಅಭ್ಯಾಸದ ನಿಲುವು. ನಿಸರ್ಗದ ಮಡಿಲಲ್ಲಿ ಬೆಳೆಯುವ ಬದುಕಿನ ಸುಂದರ ಚಿತ್ರ ಅವಾಗಿವೆ. ಭಾವ–ಭಾಷೆ, ಭಿನ್ನತೆಗಳನ್ನು ಲೇಖಕರು ಆಧಾರ ಸಹಿತವಾಗಿ ನೀಡಿದ್ದು ಸೂಕ್ತ ಹಾಗೂ ಸಮಂಜಸ. ಕಥೆ ಅಥವಾ ಕಾದಂಬರಿಗಳಲ್ಲಿ ಚಿತ್ರಿತವಾದ ಸನ್ನಿವೇಶಗಳಿಗೆ ಪ್ರಾದೇಶಿಕ ವ್ಯವಹಾರಗಳು ಹಿನ್ನೆಲೆಯಾಗಿರುವುದು ಸಹಜ. ಅದು ಜೀವಂತಿಕೆಯ ಲಕ್ಷ್ಮಣ! ನಿಸರ್ಗವೂ ಮಾನವನ ನಿಜವಾದ ಗುರುವಲ್ಲದೆ ಸೂತ್ರಧಾರವೂ ಹೌದು.

"ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ" ಲೇ : ಎಸ್. ಬಿ. ಉತ್ನಾಳ ೧೯೯೦ರಲ್ಲಿ ಅನುಪಮ ಪ್ರಕಾಶನ ಅಥಣಿ.

ಮರಳಿ ಮಣ್ಣಿಗೆ :

ಕಡಲ ತೀರದ ಭಾರ್ಗವ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯ ಹೆಸರು ಭೂಮಿಯ ಗುಣಾಂಶ ಸೂಚಿತ ಶಬ್ದವಾಗಿದೆ. ಮಣ್ಣು ಪ್ರಾದೇಶಿಕತೆಯ ಜನನಿ! ಅದರ ವಾಸನೆಯೇ ಸಾಹಿತ್ಯದ ನವರಸ! ಈ ಕಾದಂಬರಿಯಲ್ಲಿಯ ಲಗ್ನದ ಸನ್ನಿವೇಶ ಬದುಕಿನ ಬದಲಾವಣೆಯ ಬುನಾದಿ. ಅದು ಆಯಾ ಪ್ರಾದೇಶಿಕತೆಯ ಪ್ರಧಾನ ಸಂಕೇತ.

ನಿಸರ್ಗ :

ದಿ. ಮಿರ್ಜಿ ಅಣ್ಣಾರಾಯರ 'ನಿಸರ್ಗ' ಕಾದಂಬರಿಯಲ್ಲಿಯ ಜಾನಪದ ಭಾಷೆ ಸುಲಿದ ಬಾಳೆಯ ಹಣ್ಣು! ಗ್ರಾಮೀಣ ಬದುಕಿನಲ್ಲಿಯೇ ಬಾಳಿದ ಅಣ್ಣಾರಾಯರ ಬದುಕು-ಬರಹ ಸರಳ-ಸುಂದರ! 'ನಿಸರ್ಗ' ಅವರ ಶ್ರೇಷ್ಠ ಕೃತಿ. ಅದರಲ್ಲಿಯೂ ಸುಖ-ಸಂತೋಷ, ದುಃಖ_ದುಮ್ಮಾನಗಳ ಚಿತ್ರ ಜನತೆಯ ಮನ ಮಿಡಿಯುತ್ತಿವೆ. ಸಾಂಪ್ರದಾಯಿಕ ಮೂಢನಂಬಿಕೆಗಳಿಗೆ ಮುಂದಾಗಿರುವ 'ವಿಧವಾ ವಿವಾಹ' ಸನ್ನಿವೇಶ ಸಾಮಾಜಿಕ ಪ್ರಗತಿಯ ಶುಭ ಸಂಕೇತ! ಬೆಳಗಾವಿ ಜಿಲ್ಲೆಯ ಗಡಿಯಲ್ಲಿರುವ ಗಾದೆಯ ಮಾತುಗಳು ಮೂಗು ಮುಚ್ಚುವಂತೆ ಅನಿಸಿದರೂ ರಸಿಕ ಅಭ್ಯಾಸಿಗಳಿಗೆ ಕಳೆದ ಸಿಗುರಿನ ಕಬ್ಬಿನಂತಿವೆ.

'ಗ್ರಾಮಾಯಣ' :

ರಾವಬಹಾದ್ದೂರ ಅವರ 'ಗ್ರಾಮಾಯಣ' ಕಾದಂಬರಿ ಕ್ಷೇತ್ರದಲ್ಲಿ ಒಂದು ಮೈಲುಗಲ್ಲು! ಗ್ರಾಮಾಯಣ-ರಾಮಾಯನದಷ್ಟೇ ಜನಪ್ರಿಯವಾದದ್ದು ವಿಶೇಷ; ಗ್ರಾಮ ಜೀವನದ ಜೀವಂತ ಪ್ರತಿಬಿಂಬ ಗ್ರಾಮಾಯಣ! ಪ್ರಾದೇಶಿಕತೆಯ ಪರಾಕಾಷ್ಠೆ ಇದೊಂದು ಕೃತಿ! ಅದರ ಜಾಡಿನಲ್ಲಿಯೇ ನಡೆಯಲು ಯತ್ನಿಸಿದರೂ ಅದರ ಎತ್ತರ-ಆಳಕ್ಕೆ ಮುಟ್ಟಲು ಕೆಲವರಿಗೆ ಸಾಧ್ಯವಾಗದಷ್ಟು 'ಗ್ರಾಮಾಯಣ' ಬೆಳೆದಿದೆ. ರಾವಬಹಾದ್ದೂರರು ಜಾನಪದದ ಜೇನು. ಅವರಿಗಾಗಿ ಉತ್ನಾಳ ಅವರು ಉಪಯೋಗಿಸಿದ 'ಧನ್ವಂತರಿ' ಶಬ್ದ ಅರ್ಥ ಪೂರ್ಣ! ಅದಕ್ಕಾಗಿ ಅವರ ಹೆಸರು ಕೃತಿ ಅಜರಾಮರವೆಂಬುದು ಕಾದಂಬರಿ ಕ್ಷೇತ್ರಕ್ಕೆ ಸತ್ಕೀರ್ತಿ!! ನಾಡ ನಾರಿಯರು ಕೂಡಿ ಗಂಡನಾ ಮನೆಯ ಕಂಡ ಬಾಳುವೆ ಹಾಡಿ ಉಂಡು ಓಡಾಡಿ ನಲಿದಾಡಿ ನಾಗರ ಹೆಡಿಹಾಂಗ ಆಡುವ ಹಬ್ಬಹರಿದಿನಗಳಲ್ಲಿಯ ಚಿತ್ರ ಹೃದಯಂಗಮವಾಗಿದೆ. ಪ್ರಾದೇಶಿಕತೆಯ ಸತ್ಸಂಪ್ರದಾಯದ ಸಂಕೇತವದು. ಜನಸಾಮಾನ್ಯರು 'ಮಳೆ ಬೆಳೆ ಪುಣ್ಯದ ಫಲವೆನ್ನುವುದು, ಅವರ ದೈವಿಕೃಪೆಯನ್ನು ನಂಬಿದ ಮುಗ್ಧತೆಯ ದ್ಯೋತಕ!' ಸಾದಾಸೀದಾ ಜೀವನದ ಸಾಕ್ಷ್ಯಚಿತ್ರ' 'ಮಾಡಿದವರ ಪಾಪ

ಆಡಿದವರ ಬಾಯಾಗ' ಎಂಬುದು 'ನೆರೆಮನೆಯ ದುಃಖಕ್ಕೆ ಆಳುವವರ ಕಂಡು ನೆಚ್ಚ ನಮ್ಮ ಕೂಡಲ ಸಂಗಮದೇವ' ನುಡಿಗೆ ಪುಷ್ಠಿಯಾಗಿದೆ. ಸುಖ-ದುಃಖ, ಪಾಪ-ಪುಣ್ಯಗಳಿಗೆ ಕ್ರಿಯಾಕ್ರಮಗಳೇ ಆಧಾರವೆಂಬುದು ಸರ್ವಕಾಲಿಕ ಸತ್ಯ! ಉತ್ನಾಳ ಅವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಿಂತ 'ಗ್ರಾಮಾಯಣ' ಜನಮನಕ್ಕೆ ತೀರ ಸಮೀಪವೆಂಬುದು ತೌಲನಿಕ ಅಭ್ಯಾಸ ಬಲದಿಂದ ನುಡಿದಿದ್ದಾರೆ.

ಜೋಗಿ ಮರಡಿ :

ಆದರ್ಶ ಶಿಕ್ಷಕ ದು. ನಿಂ. ಬೆಳಗಲಿ ಅವರ 'ಜೋಗಿ ಮರಡಿ' ಕಾದಂಬರಿ ಎಚ್. ಎಲ್. ನಾಗೇಗೌಡರ 'ನನ್ನೂರು' ಪುಸ್ತಕಯ 'ಈಗಿನ ನನ್ನೂರು' ನೆನಪಿಗೆ ತರುವಂತಿದೆ. ಈ ಲೇಖನದ ವಿಸ್ತಾರತೆಯೇ ಈ ಕಾದಂಬರಿ ಎನ್ನುವಷ್ಟು ಸಾಮಿಪ್ಯವಿದೆ. ಆದರೂ ಹಣ್ಣು-ಕಾಯಿಗಳ ವ್ಯತ್ಯಾಸ ಅಭ್ಯಾಸಿಗಳಿಗೆ ಕಾಣದಿರದು. ಬೇಟಗೇರಿ ಕೃಷ್ಣ ಶರ್ಮ ಅವರ ಜಾನಪದ ಜೀವನ ಕಥೆಗಳಲ್ಲಿಯ ಸರಳ ಸುಂದರ ಶೈಲಿಯ ಸ್ವಾದ ಸವಿದಂತೆನಿಸಿದರೆ ಆಶ್ಚರ್ಯವೇನಿಲ್ಲ. ಜಾನಪದ ಸ್ವಾದ ಸವಿಯುವವರ ನಾಲಿಗೆಯ ರುಚಿಯನ್ನವಲಂಭಿಸಿದೆ ಎನ್ನುವುದು ಮರೆಯುವಂತಿಲ್ಲ. "ಕನ್ನಡ ಸಾಹಿತ್ಯಕ್ಕೆ ಒಂದು ಉತ್ತಮ ಪ್ರಾದೇಶಿಕ ಕಾದಂಬರಿ 'ಜೋಗಿಮರಡಿ'ಯನ್ನು ನೀಡಿದ ದು. ನಿಂ. ಬೆಳಗಲಿ ಅವರು ಅಭಿನಂದನಾರ್ಹ" ಎಂದು ಹೇಳಿದ ಶ್ರೀ ಎಸ್. ಜಿ ಸಿದ್ಧರಾಮಯ್ಯನವರ ವಿಮರ್ಶಾ ಮಾತು ಲೇಖನಕ್ಕೆ ಪುಷ್ಠಿ! ಉತ್ನಾಳ ಅವರು ದಕ್ಷಿಣೋತ್ತರ ಕರ್ನಾಟಕದ ಪ್ರಮುಖ ಲೇಖಕರ ಶ್ರೇಷ್ಠ ಐದು ಕಾದಂಬರಿಗಳನ್ನಷ್ಟೇ ಅಭ್ಯಾಸಕ್ಕಾಗಿ ಆಯ್ದುಕೊಂಡು ದಿನಕ್ಕೆ ಒಂದೆರಡರಂತೆ ಹುಟ್ಟಿಕೊಳ್ಳುವ ಕಾದಂರಿಯ ಇಂದಿನ ದಿನದಲ್ಲಿ ಎಲ್ಲವನ್ನೂ ಮೈಮೇಲೆ ಹಾಕಿಕೊಳ್ಳುವ ಹವ್ಯಾಸಕ್ಕೆ ಹೋಗದೆ ಉಳಿದುಕೊಂಡಿದ್ದಾರೆ. ಅಧ್ಯಯನದ ದೃಷ್ಟಿಯಿಂದ ಹಲ-ಕೆಲವು ಕನ್ನಡ ಹಿಂದಿ ಕಾದಂಬರಿಗಳನ್ನು ಹೆಸರಿಸಿ ಓದುಗರ ಹಸಿವು ಹೆಚ್ಚಿಸಲು ಹವಣಿಸಿದ್ದು ಸ್ತುತ್ಯ. ನಾಡಿನ ಹೆಸರಾಂತ ಕಾದಂಬರಿಗಳ ಅಧ್ಯಯನ ಮಾಡಲು ನಾಂದಿ ಹಾಡಿದ್ದಾರೆ. "ಎಳೆ ಸಿಕ್ಕರೆ ಹಚಡಾನೇ ನುಂಗಬಲ್ಲೆ" ಚಾಕಚಕ್ಯತೆ ಅವರ ಬರವಣಿಗೆಯಿಂದ ಕಂಡುಕೊಳ್ಳಬಹುದು.

ಉತ್ನಾಳ ಅವರು ತಮ್ಮ ಗ್ರಂಥದ ಕಡೆಯ ಭಾಗದ 'ಪ್ರಾದೇಶಿಕ ಭಾಷೆಯ ವೈವಿಧ್ಯ' ಮತ್ತು 'ಸಮಾರೋಪ'ದಲ್ಲಿ ಅಭ್ಯಾಸಿಗಳಿಗೆ ಅನುವು ಮಾಡಿಕೊಟ್ಟು ಮಾರ್ಗದರ್ಶನ ನೀಡಿದಂತಿದೆ. ಪ್ರಾದೇಶಿಕ ಕಾದಂಬರಿಗಳಲ್ಲಿ ಪ್ರಧಾನವಾಗಿರುವ ಭಾಷೆ ಪ್ರಜ್ಞಾವಂತ ವಿಮರ್ಶಕರಿಗೆ ಮೂರು ಮುರಿಯುವಂತೆ ಮಾಡದೇ ಮೂಗು ಹಿಗ್ಗಿಸುವಂತೆ ಮಾಡುವುದು ಸತ್ಯವಾದರೂ ಭಾಷಾ ಮಡಿವಂತರಿಗೆ ಮಾತ್ರ ಮೂಗು ಮುಚ್ಚುವಂತಹುದು ಹೌದು.

ಕೊನೆಯಲ್ಲಿ 'ಸಮಾರೋಪ' ಬರೆದದ್ದು ಸೂಕ್ತವಾಗಿದೆ. ವಾಸ್ತವಿಕತೆ ಎಂಬುದು ಕೇವಲ ಪ್ರಾದೇಶಿಕ ಕಾದಂಬರಿಗಳಿಗೆ ಸೀಮಿತವಾದುದಲ್ಲ; ಯಾವುದೇ ಕೃತಿಯಲ್ಲಿ ವಾಸ್ತವಿಕತೆ ಒಳಗೊಂಡಿದ್ದರೆ ಅದು ಆರೋಗ್ಯಕರ ಪರಿಣಾಮ ಬೀರಬಲ್ಲದು. ನಮ್ಮ ದೇಹದ ಶಕ್ತಿಯನ್ನು ಭೂಮಿ ಹೀರುತ್ತಿದೆಯಾದರೂ ಅದರ ರಸ ಸ್ವಾದದಿಂದಲೇ ದೇಹ ದಷ್ಟಪುಷ್ಟಿಯಾಗಿರುವುದನ್ನು ಮರೆಯುವಂತಿಲ್ಲ.

೨.೨ ಚಿನ್ಮಯ ಚೇತನ ಲಚ್ಯಾಣ ಶ್ರೀ ಸಿದ್ಧಲಿಂಗ ಮಹಾರಾಜರು :

ಪ್ರೊ. ಸಿದ್ದಣ್ಣ ಉತ್ನಾಳ ಅವರು ರಚಿಸಿದ "ಚಿನ್ಮಯ ಚೇತನ ಲಚ್ಯಾಣ ಶ್ರೀ ಸಿದ್ಧಲಿಂಗ ಮಹಾರಾಜರು" ಎಂಬ ಆಧ್ಯಾತ್ಮಿಕ ಕೃತಿಯನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ಚಿನ್ಮಯ ಚೇತನ ಲಚ್ಯಾಣ ಶ್ರೀ ಸಿದ್ಧಲಿಂಗ ಮಹಾರಾಜರಿಂದ ಉಪದೇಶ ಪಡೆದು ಭಕ್ತರಾದವರ ಸಂಖ್ಯೆ ಅಸಂಖ್ಯವಾಗಿದೆ. ಆದರೆ ಸನ್ಯಾಸವನ್ನು ಸ್ವೀಕರಿಸಿ, ಗುರು ಸಿದ್ಧಲಿಂಗ ನಾಮವನ್ನು ಜಗತ್ತಿಗೂ ತೋರಿಸಿದ ಶ್ರೀ ಯಲ್ಲಾಲಿಂಗ ಮಹಾರಾಜರು ಮುಗಳಖೋಡ, ಕ್ಷೀರಾಲಿಂಗ ಮಹಾಸ್ವಾಮಿಗಳು ಪುಣೆ, ಶ್ರೀ ಆತ್ಮಾನಂದ ಸ್ವಾಮಿಗಳು ಅಹೇರಿ, ಗಿರೆಮ್ಮ ತಾಯಿ ರೂತಿ, ಶ್ರೀ ಸಿದ್ಧಲಿಂಗ ಮಹಾರಾಜರು ಮಧುರಖಂಡಿ, ಶ್ರೀ ಹಣಮಂತ ಮಹಾರಾಜರು ಕೆಂಬಾವಿ ಪ್ರಮುಖರಾಗಿದ್ದಾರೆ.

ಶ್ರೀ ಕ್ಷೀರಾಲಿಂಗ ಮಹಾರಾಜರು ಶ್ರೀ ಸಿದ್ಧಲಿಂಗ ಮಹಾರಾಜರಿಂದ ಉಪದೇಶ ಪಡೆದು ಮುಂದೆ ಮಹಾಸ್ವಾಮಿಗಳಾಗಿ ಪುಣೆಯಲ್ಲಿ ಮಠ ಕಟ್ಟಿಕೊಂಡು ಸಾವಿರಾರು ಭಕ್ತರಿಗೆ ಗುರುಗಳಾಗಿ ಶ್ರೀಗುರು ತೋರಿದ ಮಾರ್ಗದಲ್ಲಿ ಸಾಗಿದರು. ನೀರನ್ನು ಹಾಲು ಮಾಡಿ ಕೊಟ್ಟಿದ್ದಕ್ಕಾಗಿ ಇವರು ಕ್ಷೀರಾನಂದ ಸ್ವಾಮಿಗಳೆಂದೇ ಪ್ರಸಿದ್ಧರಾದರು.

ಕೆಂಭಾವಿಯ ಶ್ರೀ ಹಣಮಂತ ಮಹಾರಾಜರು ಪೂರ್ವಾಶ್ರಮದಲ್ಲಿ ಆಗರ್ಭ ಶ್ರೀಮಂತರು. ಮುಂದೆ ಶ್ರೀ ಸಿದ್ಧಲಿಂಗರಿಂದ ಉಪದೇಶ ಹೊಂದಿ, ಕಪ್ಪತ್ತಗುಡ್ಡದಲ್ಲಿ ಅಖಂಡ ೨೫ ವರ್ಷ ತಪಸ್ಸು ಮಾಡಿದರು. ಸೊರಟೂರೆಂಬ ಗ್ರಾಮದಲ್ಲಿ ಆಶ್ರಮ ಕಟ್ಟಿಕೊಂಡು ವಾಸವಾದರು, ಕೃಷ್ಣಾನದಿಯ ತಟಾಕದಲ್ಲಿರುವ ದೊಡ್ಡಿಹಾಳದಲ್ಲಿ ಒಂದು ಆಶ್ರಮ ಕಟ್ಟಿಸಿದರು. ದಿನಾಲು ದಾಸೋಹ, ಬರುವ ಅಸಂಖ್ಯಾತ ಭಕ್ತರಿಗೆ ಇಷ್ಟಾರ್ಥ ಪೂರೈಸಿ ಸಾಕ್ಷಾತ ಪರಮಾತ್ಮನೆಂದು ಕರೆಯಿಸಿಕೊಂಡರು. ಶ್ರೀ ಗುರು ಸಿದ್ಧಲಿಂಗ ಮಹಾರಾಜ ಹೆಸರಿನಿಂದ ದೊಡ್ಡಿಹಾಳದಲ್ಲಿ ಮಠ ನಿರ್ಮಾಣವಾಯಿತು. ಇವರ ಪವಾಡಗಳನ್ನು ಜನರು ಇಂದಿಗೂ ಹೇಳುತ್ತಾರೆ.

"ಲಚ್ಯಾಣ ಶ್ರೀ ಸಿದ್ಧಲಿಂಗ ಮಹಾರಾಜರು" ಲೇ : ಎಸ್. ಬಿ. ಉತ್ನಾಳ ಅನುಪಮ ಪ್ರಕಾಶನ ಅಥಣಿ.

ದೊಡ್ಡಿಹಾಳ ಮಠವೆಂದೇ ಪ್ರಸಿದ್ಧವಾಯಿತು. ಶ್ರೀ ಆತ್ಮಾನಂದ ಮಹಾಸ್ವಾಮಿಗಳು ವಿಜಾಪೂರ ಹತ್ತಿರ ಅಹೇರಿಯಲ್ಲಿಯೇ ಉಗ್ರತಪಸ್ಸುಗೈದು ಭಕ್ತರ ಕಾಮಧೇನುವಾದರು. ಒಂದು ಆಶ್ರಮ ಹಾಕಿಕೊಂಡು ದಿನಾಲು ಬರುವ ಭಕ್ತರ ಇಷ್ಟಾರ್ಥಗಳನ್ನು ಪೂರೈಸಿ ಪ್ರಸಿದ್ಧರಾದರು. ಒಂದು ದಿನ ಊರಿನ ಹಿರಿಯರು ಹಾಗೂ ದೇಗಿನಾಳ, ಜಂಬಗಿ ಮುಂತಾದ ಊರ ಭಕ್ತರು ಸೇರಿ ಮಠ ಮಾಡುವುದಾಗಿ ನಿಶ್ಚಯಿಸಿದರು. ಮುಂದೆ ಅಹೇರಿ ಆತ್ಮಾನಂದ ಮಠವೆಂದು ಪ್ರಸಿದ್ಧಿ ಪಡೆಯಿತು. ಇವರು ಮನುಷ್ಯರಿಗೂ, ಪ್ರಾಣಿಗಳಿಗೂ ಬರುವ ಮಹಾರೋಗಗಳನ್ನು ಮಂತ್ರಶಕ್ತಿಗಳಿಂದ ಕಳೆಯುತ್ತಿದ್ದರು. ಇವರು ಲಿಂಗೈಕ್ಯರಾದರು. ಇವರ ಸಮಾಧಿ ಹತ್ತಿರ ಕೊಬ್ಬರಿ ಎಣ್ಣೆ ಇಟ್ಟು ಸುತ್ತು ಹಾಕಿ ತೆಗೆದುಕೊಂಡು ಹೋಗಿ ಹಚ್ಚಿಕೊಂಡರೆ ರೋಗಗಳು ದೂರವಾಗುತ್ತವೆ. ಗುರುಸಿದ್ಧಲಿಂಗ ಮಹಾರಾಜರು ತಮ್ಮ ಮಠವನ್ನು ಹೇಗೆ ಗುರುಗಳಾದ ಶಂಕರಲಿಂಗರ ಮಠಕ್ಕೊಪ್ಪಿಸಿದರೋ ಹಾಗೇ ಇವರು ತಮ್ಮ ಮಠವನ್ನು ಬಂಥನಾಳಕ್ಕೆ ಒಪ್ಪಿಸಿದ್ದಾರೆ.

ರೂಗಿ ಗಿರೆಮ್ಮ ತಾಯಿಯವರು ಲಚ್ಯಾಣ ಸಿದ್ಧಲಿಂಗ ಮಹಾರಾಜರಿಂದ ಗುರುದೀಕ್ಷೆ ಪಡೆದುಕೊಂಡರು. ಇವರಿಗೆ ಗುರುಪದೇಶ ದೊರೆಯಬೇಕಾದರೆ ಸ್ಮಶಾನದಲ್ಲಿ ಕುಳಿತು ತದೇಕ ದೃಷ್ಟಿಯಿಂದ ಚಿನ್ಮಯನನ್ನು ಅವಧರಿಸೆಂದು ಹೇಳಿದರು. ಹಾಗೆ ಮಾಡಿದಾಗ ಒಂದು ದಿನ ಸಿದ್ಧಲಿಂಗ ಮಹಾರಾಜರು ತಾವೇ ಸ್ವತಃ ಹೋಗಿ ಕರೆದುಕೊಂಡು ಬಂದು ಉಪದೇಶ ಮಾಡಿದರು.

ಇವರು ರೂಗಿಯಲ್ಲಿ ಮಠ ಕಟ್ಟಿಸಿ, ಗುರು ನಾಮಸ್ಮರಣೆಯನ್ನು ಬೆಳೆಸಿದರು. ಲಚ್ಯಾಣ ಮಠಕ್ಕೆ ಬಂದು ಅದರಲ್ಲೂ ಜಾತ್ರೆಯಲ್ಲಿ ಬರುವ ಭಕ್ತರಿಗೆಲ್ಲಾ ದಾಸೋಹ ನೋಡಿಕೊಳ್ಳುವ ಜವಾಬ್ದಾರಿ ಇವರದಾಗಿತ್ತು.

ಜಾತ್ರೆಯಲ್ಲಿ ಸಂಜೆಗೆ ತೇರಿನ ಪೂಜೆ ಮಾಡಿ ಆರತಿ ಹಿಡಿದು ಜೈಕಾರ ಹಾಕಿದಾಗ ತೇರು ಸಾಗುತ್ತಿತ್ತು. ಈ ತಾಯಿಯ ಲಿಂಗನಿಷ್ಠೆ ತಪಸ್ಸಿನ ಫಲ ಇತ್ಯಾದಿ ಶಕ್ತಿಯಿಂದ ಅಸಂಖ್ಯಾತ ಭಕ್ತರನ್ನು ಉದ್ಧಾರ ಮಾಡಿ ರೋಗಿಯ ಮಠದಲ್ಲಿಯೇ ಇವರ ಸಮಾಧಿ ಇದೆ.

ಮಧುರಖಂಡಿಯ ಸಿದ್ಧಲಿಂಗ ಮಹಾರಾಜರು ಕೂಡಾ ಸಿದ್ಧಪುರುಷರಾಗಿ ಬಾಳಿ ಬೆಳಗಿದರು. ಇವರು ಏನು ಅನ್ನತ್ತಾರೆಯೋ ಅದು ಸಾಧ್ಯವಾಗಿ ಹೋಗುತ್ತಂತೆ. ಅದಕ್ಕಾಗಿ ಭಕ್ತರು ಬಂದು ಸತ್ಯಶುದ್ಧ ಕಾಯಕ ಮಾಡಿ, ಇವರಿಂದ ಆಶೀರ್ವಾದ ಪಡೆದುಕೊಂಡು ಹೋಗುವ ದೃಶ್ಯ ಸರ್ವೇಸಾಮಾನ್ಯವಾಗಿತ್ತಂತೆ. ಇವರಿಂದ ನಡೆದ ಅನೇಕ ಪವಾಡಗಳನ್ನು ಇಂದಿಗೂ ಹೇಳುತ್ತಾರೆ.

ಹೀಗೆ ಲಚ್ಯಾಣ ಶ್ರೀ ಸಿದ್ಧಲಿಂಗ ಮಹಾರಾಜರಿಂದ ಅನೇಕರು ಸನ್ಯಾಸ ದೀಕ್ಷೆ ಪಡೆದು ಈ ಲೋಕೋದ್ಧಾರ ಕಾರ್ಯದಲ್ಲಿ ಮಹಾತ್ಮರೆಂದೆ ಕರೆಯಿಸಿಕೊಂಡಿದ್ದಾರೆ. ಆದ್ದರಿಂದ ಶ್ರೀ ಸದ್ಗುರು ಸಿದ್ಧಲಿಂಗ ಮಹಾರಾಜರ ಸಿದ್ಧಶಕ್ತಿ ಇಂದಿಗೂ ಜಾಗೃತ. ಇವರ ಶಿಷ್ಯ ಪರಂಪರೆ ನಾಡಿನುದ್ದಗಲಕ್ಕೂ ಪಸರಿಸಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಹಾಗೂ ಕೇರಳದಲ್ಲಿದ್ದಾರೆ. ಇವರ ಶಿಷ್ಯರಲ್ಲಿ ಜಾತಿ, ಮತ, ಪಂಥಗಳಿಲ್ಲದೆ ಭಾವ ಭಕ್ತಿಗಳಿಗೆ ಹೆಚ್ಚಿನ ಮಹತ್ವವಿದೆ. ಸಿದ್ಧಶಕ್ತಿಯಲ್ಲಿಯೇ

ಮೇರುಪರ್ವತವಾಗಿ ಮೆರೆದ ಸಿದ್ಧಲಿಂಗ ಮಹಾರಾಜರ ಪರಂಪರೆ ಈಗಂತೂ ಭಾರತದ ತುಂಬೆಲ್ಲಾ ಶ್ರೀ ಶ್ರೀ ಶ್ರೀ ಷಡಕ್ಷರಿ ಶಿವಯೋಗಿ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು ಅವರಿಂದ ಹಬ್ಬಿದೆ, ಹಬ್ಬುತ್ತಲಿದೆ. ಸಾಕ್ಷಾತ ಲಚ್ಯಾಣ ಶ್ರೀ ಸಿದ್ಧಲಿಂಗರ ಅವತಾರವೇ ಭೂಮಿಗೆ ಸಿದ್ಧರಾಮ ಶಿವಯೋಗಿಗಳಾಗಿ ಬಂದು ಬಾಗಿ ಬಂದ ಭಕ್ತರಿಗೆ ಕಾಮಧೇನುವಾಗಿ ಭೂಮಿಯ ಮೇಲೆ ಮಾತನಾಡುವ ದೇವರೆಂದೇ ಪ್ರಸಿದ್ಧರಾಗಿದ್ದಾರೆ. ಪರಮಗುರುವಿನ ಅಣತಿಯಂತೆ ಶ್ರೀ ಶ್ರೀ ಶ್ರೀ ಷಡಕ್ಷರಿ ಶಿವಯೋಗಿ ಮುರುಘರಾಜೇಂದ್ರ ಮಹಾಸ್ವಾಮಿಗಳಿಗೆ ಆಶೀರ್ವದಿಸಿ, ದೀಕ್ಷೆ ನೀಡಿ, ಸಿದ್ಧಸಂಪ್ರದಾಯದ ಪರಂಪರೆಯ ಶಕ್ತಿಗೆ ಚೈತನ್ಯ ಒದಗಿಸಿಕೊಟ್ಟಿದ್ದಾರೆ.

೨.೩ ಮೈಲಾರದೇವರ ದಿವ್ಯಕ್ಷೇತ್ರಗಳು :

ಡಾ. ಎಂ. ಬಿ. ನೇಗಿನಹಾಳರವರು ರಚಿಸಿದ 'ಮೈಲಾರದೇವರ ದಿವ್ಯಕ್ಷೇತ್ರಗಳು' ಕೃತಿಯನ್ನು ಅನುಪಮ ಪ್ರಕಾಶನ ಪ್ರಕಟಿಸಿದೆ. ಇದೊಂದು ಧಾರ್ಮಿಕ ಪ್ರಪಂಚದಲ್ಲಿಯ ಅಮೂಲ್ಯ ಕೃತಿ. ಈ ಕೃತಿಯ ಚರಿತ್ರೆ ನಾಯಕ ಶ್ರೀ ಮೈಲಾರ ದೇವರ ಭಕ್ತರು ಭಾರತದ ತುಂಬೆಲ್ಲಾ ಹರಡಿಕೊಂಡಿದ್ದಾರೆ. ಕೇಂದ್ರ ಸರಕಾರದ ಆರ್ಥಿಕ ನೆರವಿನ ಮೂಲಕ ದೇಶದ ಉದ್ದಗಲಕ್ಕೂ ಸಂಚರಿಸಿ ಈ ಕೃತಿಯನ್ನು ರಚಿಸಿದ್ದಾರೆ.

ಮಣಿಚೂಲ ಎಂಬುದು ಒಂದು ಪರ್ವತ. ಅದು ಅನೇಕ ಬಗೆಯ ಪ್ರಾಣಿಗಳಿಂದಲೂ, ಅಪೂರ್ವ ವನರಾಜಿಯಿಂದಲೂ, ನದಿ-ನಿರ್ಝರಗಳಿಂದಲೂ ಶೋಭಾಯಮಾನವಾಗಿ ಮೆರೆಯುತ್ತಿತ್ತು. ಹಲವು ಜನ ಋಷಿಗಳು ಪತಿವ್ರತೆಯರಾದ ತಮ್ಮ ಪತ್ನಿಯರೊಂದಿಗೆ ಆಶ್ರಮಗಳಲ್ಲಿ ಯಜ್ಞ ಯಾಗಾದಿಗಳನ್ನು ನೇರವೇರಿಸುತ್ತ ಸುಖದಿಂದ ಕಾಲ ಕಳೆಯುತ್ತಿದ್ದರು. ಅವರಲ್ಲಿ ಏಳು ಜನ 'ಧರ್ಮಪುತ್ರ'ರು ಪ್ರಸಿದ್ಧರಾಗಿದ್ದರೆ. ಅವರ ಆಶ್ರಮಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದವು.

ಹೀಗಿರುತ್ತ ಒಮ್ಮೆ ಮಲ್ಲನೆಂಬ ದೈತ್ಯನೂ ಮಣಿಚೂಲ ಪರ್ವತಕ್ಕೆ ಬೇಟೆಗೆಂದು ಬಂದು ಋಷಿಗಳು ವಾಸವಾಗಿದ್ದ ಶ್ರಮಗಳ ಮೇಲೆ ದಾಳಿ ಮಾಡಿ ಅವರನ್ನು ಗಾಸಿಗೊಳಿಸಿದ. ಋಷಿಗಳು ತಮ್ಮ ಪತ್ನಿಯರು ಮತ್ತು ವಟುಗಳೊಂದಿಗೆ ಹೇಗೋ ಅವನ ಕೈಯಿಂದ ತಪ್ಪಿಸಿಕೊಂಡು ಹೋಗಿ ಬೇರೆಡೆ ಅಡಗಿಕೊಂಡರು. ತರುವಾಯ ಅವರು ಸನತ್ಕುಮಾರನಲ್ಲಿಗೆ ಹೋಗಿ ತಮ್ಮ ದುಃಖ ತೋಡಿಕೊಂಡರು. ಸನತ್ಕುಮಾರನು ಋಷಿಗಳಿಗೆ ಸಾಂತ್ವನ ಹೇಳಿದ. ಮಲ್ಲಾಸುರನು ಏಕಪಾದದಿಂದ ನಿಂತು ಘೋರ ತಪಸ್ಸು ಮಾಡಿ ಬ್ರಹ್ಮನಿಂದ ವರ ಪಡೆದ ಸಂಗತಿಯನ್ನು ಋಷಿಗಳಿಗೆ ತಿಳಿಸಿ ಇಂದ್ರನಲ್ಲಿ ಮೊರೆಯಿಡುವಂತೆ ಧರ್ಮಪುತ್ರ ಋಷಿಗಳಿಗೆ ಸಲಹೆಯಿತ್ತನು. ಅದೇ ರೀತಿ ಧರ್ಮಪುತ್ರರು ದೇವೇಂದ್ರನಲ್ಲಿಗೆ ಹೋದರು.

"ಮೈಲಾರ ದೇವರ ದಿವ್ಯಕ್ಷೇತ್ರಗಳು" ಲೇ : ಎಂ. ಬಿ. ನೇಗಿನಹಾಳ ಅನುಪಮ ಪ್ರಕಾಶನ ಅಥಣಿ.

ದೇವೇಂದ್ರ ಋಷಿಗಳ ಕಷ್ಟ ಕೇಳಿಕೊಂಡನಾದರೂ ಮಲ್ಲಾಸುರ ಮತ್ತು ಅವನ ಪರಿವಾರದ ಮುಂದೆ ತನ್ನ ಆಟ ಸಾಗದೆಂದು ಹೇಳಿದ. ತರುವಾಯ ಋಷಿಗಳು ವಿಷ್ಣುವಿನಲ್ಲಿಗೆ ಹೋದರು. ವಿಷ್ಣು ಕೂಡ ತನ್ನ ಅಸಹಾಯಕತೆಯನ್ನು ತೋಡಿಕೊಂಡು ಧರ್ಮಪುತ್ರರನ್ನು ಕರೆದುಕೊಂಡು ಮಹಾದೇವನಲ್ಲಿಗೆ ಬಂದನು. ಋಷಿಗಳು ಶಿವನನ್ನು ನಾನಾ ಬಗೆಯಾಗಿ ಸ್ತುತಿಸಿ ತಮ್ಮ ಕಷ್ಟ ತೋಡಿಕೊಂಡರು. ಶಿವನು ಅವರಿಗೆ ಅಭಯವಿತ್ತು ಮಲ್ಲಾಸುರನನ್ನು ಸಂಹರಿಸುವುದಾಗಿ ಹೇಳಿದನು.

ಸನತ್ಕುಮಾರನು ಶಿವನ ಪೂಜಾವಿಧಾನವನ್ನು ಪ್ರೇಮಪುರದ ಮಹಿಮೆಯನ್ನು ವಿಸ್ತರಿಸಿ ಹೇಳಿದನು. ಅಲ್ಲಿರುವ ಅಸಂಖ್ಯ ತೀರ್ಥಗಳನ್ನು ಅಷ್ಟತೀರ್ಥ ಷಟ್‌ತೀರ್ಥಗಳ ಮಹಿಮೆಯನ್ನು ಈಶಾನ್ಯದಲ್ಲಿರುವ 'ಗುಪ್ತ ಮಲ್ಲೇಶ್ವರ' ಎಂಬ ವಾಪೀಮಯ ತೀರ್ಥ ಮಹಿಮೆಯನ್ನು ವಿವರಿಸಿದನು. ಅಂದಿನಿಂದ ಪ್ರೇಮಪುರ ಕ್ಷೇತ್ರವೂ ಅಲ್ಲಿನ ತೀರ್ಥಗಳೂ ಲೋಕ ಪಾವನವೆನಿಸಿದವು.

ಮೇಲಿನ ಕತೆ ಬ್ರಹ್ಮಾಂಡ ಪುರಾಣದ ಕ್ಷೇತ್ರ ಖಂಡದ ಭಾಗವೆಂದು ಹೇಳಿ ಅದಕ್ಕೆ 'ಮಲ್ಲಾರಿ ಮಹಾತ್ಮ್ಯ' ಎಂದು ಹೆಸರಿಡಲಾಗಿದೆ. ಮೂಲ ೨೨ ಅಧ್ಯಾಯಗಳ ಒಂಬೈನೂರ ನಾಲ್ವತ್ತು ಶ್ಲೋಕಗಳುಳ್ಳ ಈ ಕತೆ ಮೂಲತಃ ಶಿವನು ಪಾರ್ವತಿಗೆ ವಿವರಿಸಿದಂತೆ ಬಂದಿದೆ.

ಇದನ್ನೇ ಸಿದ್ಧಪಾಲ ಕೇಸರಿ ಎಂಬ ಕವಿ ಕ್ರಿ.ಶ. ೧೫೮೫ರಲ್ಲಿ ಮರಾಠಿಗೆ ಓವೀ ಛಂದಸ್ಸಿನಲ್ಲಿ ಅನುವಾದಿಸಿದ್ದಾನೆ. ಮೂಲ ಸಂಸ್ಕೃತ ಮಾತೃಕೆ ಕ್ರಿ.ಶ. ೧೪ನೆಯ ಶತಮಾನದಲ್ಲಿ ರಚಿಸಲ್ಪಟ್ಟರಬೇಕೆಂಬುದು ಶ್ರೀ ರಾ. ಬೆಂಡೇರೆ ಅವರ ಅಭಿಪ್ರಾಯ. ಸಂಸ್ಕೃತ ಕೃತಿಗೂ ಸಿದ್ಧಪಾಲ ಕೇಸರಿಯ ಕೃತಿಗೂ ವ್ಯತ್ಯಾಸಗಳಿಲ್ಲ ಆದರೆ ತರುವಾಯ ಮರಾಠಿ ಭಾಷೆಯಲ್ಲಿ ಇದರ ಹಲವು ರೂಪಾಂತರಗಳು ಬಂದಿವೆ. 'ಜಯಾದ್ರಿ ಮಾಹಾತ್ಮ್ಯ' ಎಂಬುದು ಅಂಥವುಗಳಲ್ಲಿ ಒಂದು. ಇದು ಜೆಜೂರಿ ಕ್ಷೇತ್ರ ಮಹಿಮೆಯನ್ನು ಪ್ರೇಮಪುರ ಮಹಿಮೆಯ ಜೊತೆಯಲ್ಲಿಯೇ ವರ್ಣಿಸುತ್ತದೆ. ಬಾಣಾಯಿ ಕತೆ ಇದರಲ್ಲಿ ಎಡೆಪಡೆದಿದೆ.

'ಮಾರ್ತಂಡ ವಿಜಯ' ಎಂಬ ಇನ್ನೊಂದು ಮರಾಠಿ ಕಾವ್ಯ ಕ್ರಿ.ಶ. ೧೮೨೪ರಲ್ಲಿ ಗಂಗಾಧರ ಎಂಬ ಕವಿಯಿಂದ ರಚಿತವಾಗಿದೆ. ಇದರಲ್ಲಿ ಬಾಣಾಯಿ ಹೆಗ್ಗಡೆ, ಪ್ರಧಾನಿ ಫ್ರತಮಾರಿ, ಪಂಚಲಿಂಗಗಳು ಬಾಣಾಯಿ ಮುಂತಾದವರ ಮಹಿಮೆಗಳು ಸೇರಿಸಲ್ಪಟ್ಟಿವೆ. ಅಲ್ಲದೆ ಖಂಡೋಬಾ ಸಂಬಂಧಿಯಾದ 'ತಳಿ' ಕಾಯ್-ಕೋಲು ದೀವಟಿಗೆ ಜಾಗರಣ, ಭಂಡಾರ, ಶ್ವಾನ ಮುಂತಾದವುಗಳ ಆಚರಣೆ ಮತ್ತು ಮಹತ್ವಗಳು ಸೇರಿಸಲ್ಪಟ್ಟಿವೆ. ಇದು ವಿಸ್ತಾರದಲ್ಲಿ ಇತರ ಎಲ್ಲ ಗ್ರಂಥಗಳಿಗಿಂತ ದೊಡ್ಡದಾಗಿದೆ. ಆದರೆ ಇದರಲ್ಲಿಯೂ 'ಮಲ್ಲಾರಿ ಮಹಾತ್ಮ್ಯ'ದ ಮೂಲ ಸ್ವರೂಪವನ್ನು ಇದ್ದಂತೆ ಉಳಿಸಿಕೊಳ್ಳಲಾಗಿದೆ. ಮಲ್ಲಾಸುರನ ಮೊಮ್ಮಗ, ನಿಕುಂಭಾಸುರನ ಪ್ರಸಕ್ತಿಮಾತ್ರ ಹೆಚ್ಚಿನ ಕಥಾಂಶವಾಗಿ ಬಂದಿದೆ.

ಮೇಲಿನ ಮಹಿಮೆಗಳನ್ನು ಕೃತಿಗಳಲ್ಲದೆ ಮರಾಠಿಯಲ್ಲಿ ಸ್ಥಾನಿಕ ಮಾರ್ಪಾಟುಗಳನ್ನು ಮಹಿಮೆಗಳನ್ನೂ ಒಳಗೊಂಡ ಕೃತಿಗಳು ಇನ್ನು ಕೆಲವು ಇವು ಇರುವುದಾಗಿ ತಿಳಿದು ಬರುತ್ತವೆ. ಆದರೆ ಅವು ದುರ್ಬಲವಾಗಿವೆ.

ಕನ್ನಡದಲ್ಲಿ ವಿರೂಪಾಕ್ಷ ಸೂರಿ ಎಂಬ ಕವಿ ೧೯ನೆಯ ಶತಮಾನದ ಪೂರ್ವಾರ್ಧಧಲ್ಲಿ ರಚಿಸಿದ 'ಮಲ್ಲಾರಿ ಮಹಾತ್ಮ್ಯ' ಎಂಬ ವಾರ್ಧಕ ಷಟ್ಪದಿ ರೂಪದ ಕೃತಿ ಇದೆ. ಇದರಲ್ಲಿ ಹಿರೇ ಮೈಲಾರದೇವರಗುಡ್ಡ ಕ್ಷೇತ್ರಗಳನ್ನು ದೃಷ್ಠಿಯಲ್ಲಿಟ್ಟುಕೊಂಡು ಸಂಸ್ಕೃತ 'ಮಲ್ಲಾರಿ ಮಹಾತ್ಮ್ಯ'ವನ್ನು ಕನ್ನಡಿಸಿರುವುದು ಕಂಡು ಬರುತ್ತದೆ.

ಶಿವನು ಮಲ್ಲಯ್ಯ, ಮೈಲಾರಲಿಂಗ, ಖಂಡೋಬಾ ಇತ್ಯಾದಿ ಹೆಸರುಗಳಿಂದ ನಾನಾ ಸ್ಥಳಗಳಲ್ಲಿ ಲಿಂಗರೂಪದಲ್ಲಿ ಅವತರಿಸಿದ್ದಾನೆ. ಶಿವನು ಯಾವಾಗಲೂ ಭಕ್ತಪ್ರೇಮಿ ಕಾರಣ ಅವರ ಅನುಕೂಲಕ್ಕಾಗಿ ದೇಶದ ಬಹುಭಾಗದಲ್ಲಿ ಸ್ವಯಂಭೂರೂಪದಲ್ಲಿ ಆಟದ ಮರಗಳ ಸನ್ನಿಧಿಯಲ್ಲಿ ನೆಲೆ ನಿಂತಿದ್ದಾನೆ. ಅಂಥ ಕ್ಷೇತ್ರಗಳ ಸಂಖ್ಯೆ ಅಪಾರ. ಆದರೆ ಎಪ್ಪತ್ತೇಳು ಗಿರಿಗಳು ಅವುಗಳಲ್ಲಿ ಪ್ರಖ್ಯಾತವಾಗಿವೆ. ಅವೆಲ್ಲ ಕ್ಷೇತ್ರಗಳು ಪಾವನವಾದವುಗಳೇ. ಅವನ್ನೆಲ್ಲ ಸಂದರ್ಶಿಸಿ ಅವುಗಳ ವಿವರಗಳನ್ನು ಸಂಗ್ರಹಿಸಲಾಗಿದೆ. ಈ ದಿವ್ಯಕ್ಷೇತ್ರಗಳ ಪರಿಚಯ ಭಕ್ತಕೋಟಿಗೆ ದೊರಕಲೆಂಬ ಉದ್ಧೇಶದಿಂದ ಈ ಕೃತಿಯನ್ನು ಬರೆಯಲಾಗಿದೆ.

೨.೪ ವೀರಗಣಾಚಾರಿ ಗುಡ್ಡಾಪೂರ ದಾನಮ್ಮ :

ಪ್ರೊ. ಸಿದ್ದಣ್ಣ ಉತ್ನಾಳರವರು ಬರೆದ "ವೀರಗಣಾಚಾರಿ ಗುಡ್ಡಾಪೂರ ದಾನಮ್ಮ" ಅನುಪಮ ಪ್ರಕಾಶನವು ಪ್ರಕಟಿಸಿದೆ.

ಪ್ರಪಂಚದಲ್ಲಿಯೇ ಭಾರತೀಯ ಧಾರ್ಮಿಕ ಸೃಷ್ಠಿಯಲ್ಲಿ ಶರಣ ಮಾರ್ಗ ಸರಳ ಮತ್ತು ಸ್ಪಷ್ಟವಾದುದು. ಕರ್ನಾಟಕದಲ್ಲಿ ಕಾಲಕಾಲಕ್ಕೆ ತಪಸ್ವಿಗಳು, ಯೋಗಿಗಳು, ಶರಣ-ಶರಣೆಯರು, ಸಿದ್ಧಪುರುಷರು, ಮುನಿಗಳು, ಮಹಾಂತರು ಜನ್ಮ ಪಡೆಯುತ್ತಾ ಬಂದಿದ್ದಾರೆ. ಬೇಡಿ ಬಂದ ಭಕ್ತರಿಗೆ ಇಷ್ಟಾರ್ಥ ಮತ್ತು ಜ್ಞಾನ ನೀಡಿ ಮೋಕ್ಷಾರ್ಥಿಗಳನ್ನಾಗಿ ಮಾಡಿದ್ದಾರೆ; ಮಾಡುತ್ತಲಿದ್ದಾರೆ. ಭಕ್ತಿ ಮಾರ್ಗದ ಸುಗ್ಗಿಯ ಕಾಲ. ಜಗತ್ತಿನ ನಾನಾ ಮೂಲೆಗಳಿಂದ ಕಲ್ಯಾಣಕ್ಕೆ ಆಗಮಿಸಿದ ಶರಣ-ಶರಣೆಯರು ಮಾನವರ ಅಜ್ಞಾನ ಮೈಲಿಗೆಯನ್ನು ತೊಳೆದು ಅನುಭಾವಿಗಳನ್ನಾಗಿ ಮಾಡಿದ ಆಡಿದ ಪಾತ್ರ ಹಿರಿದಾದುದು.

"ಗುಡ್ಡಾಪೂರ ದಾನಮ್ಮ" ಲೇ : ಎಸ್. ಬಿ. ಉತ್ನಾಳ ೧೯೯೪ರಲ್ಲಿ ಅನುಪಮ ಪ್ರಕಾಶನ ಅಥಣಿ.

ಇಂತಹ ಪ್ರಸಂಗದಲ್ಲಿ ಭಕ್ತಿಯ ಮೇರು ಪರ್ವತವಾಗಿ ಮೈದಾಲೀ ಬಂದ ದಾನಮ್ಮ ತಾಯಿಯ ಚರಿತ್ರೆ ಅಮೋಘವಾದುದು. ಶರಣ-ಶರಣೆಯರಿಂದ ಪೂಜಿಸಿಕೊಂಡು, ಬಸವಣ್ಣನವರಿಂದ 'ದಾನಮ್ಮ' ಎಂಬ ಅಭಿದಾನ ಪಡೆದು, ಅಕ್ಕನಾಗಮ್ಮನವರಿಂದ 'ವರದಾನಿ' ಎಂಬ ಹೆಗ್ಗಳಿಕೆ ಹೊಂದಿದ ಹೊನ್ನ ಕಳೆಯ ಗುಡ್ಡಾಪೂರ ಗುಡ್ಡವ್ವೆ ಶಕ್ತಿ ನಾಡ ತುಂಬೆಲ್ಲಾ ಹಬ್ಬಿದೆ.

ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ದಾನಮ್ಮ ವೀರಗಣಾಚಾರಿ ತತ್ವವನ್ನು ಪಾಲಿಸಿ ಒಂದು ಕೈಯಲ್ಲಿ ಖಡ್ಗ ಮಗದೊಂದು ಕೈಯಲ್ಲಿ ಲಿಂಗ ಹಿಡಿದು ಶರಣ ಸಂಕುಳವನ್ನು ಸಂರಕ್ಷಿಸಿದ್ದಲ್ಲದೆ; ಸುರಕ್ಷಿತ ಸ್ಥಳಗಳಿಗೆ ತಲುಪಿಸಿದಳು. ನಮಥರ ಬಸವಧರ್ಮವನ್ನು ಜೋಕೆ ತೂಕಗಳಿಂದ ರಕ್ಷಿಸುವುದರೊಂದಿಗೆ ನಾಡಿನ ತುಂಬೆಲ್ಲಾ ಸಂಚರಿಸಿ ಲಕ್ಷೋಪಲಕ್ಷ ಭಕ್ತರಿಗೆ ಲಿಂಗಧಾರಣ ಮಾಡಿ ಪಾವನ ಮಾಡಿದ ಮಹಾಶಿವಶರಣೆ ದಾನಮ್ಮಳ ಪಾತ್ರ ಅಚ್ಚರಿಪಡಿಸುವಂತಿದೆ. ಒಂದರ್ಥದಲ್ಲಿ "ಶರಣರ ರಕ್ಷಾಮಣಿ"ಯೆನಿಸಿಕೊಂಡಿದ್ದಾಳೆ.

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ ದೇವತೆಗಳ ಪೂಜೆಗೆ ಅತೀ ಮಹತ್ವವಿದೆ. ಬಾದಾಮಿಯ ಬನಶಂಕರಿ, ಮಾರಿಕಾಂಬಾ, ವಿಶಾಲಾಕ್ಷಿ, ಎಲ್ಲಮ್ಮ, ಅಂಭಾಭವಾನಿ ಇತ್ಯಾದಿ ಪೌರಾಣಿಕ ದೇವತೆಗಳು. ಅಂದಿನಿಂದಲೂ ಪೂಜೆ ನಡೆದುಕೊಂಡು ಬಂದಿದೆ. ಆದರೆ ಐತಿಹಾಸಿಕ ಮಹಿಳೆಯರಲ್ಲಿ ದೇವತಾ ಸ್ವರೂಪವನ್ನು ತಾಳಿ ಅದರಂತೆ ಪೂಜೆಗೊಳ್ಳುತ್ತಿರುವ ಶರಣೆ ದಾನಮ್ಮನಂತಹವರ ಉದಾಹರಣೆ ಸಿಗುವುದು ಬಹಳೇ ವಿರಳ. ಸಾಮಾನ್ಯವಾಗಿ ಮಂಗಳವಾರ, ಶುಕ್ರವಾರ ದೇವಿಯ ವಾರಗಳೆಂದು ಗಣಿಸಲ್ಪಡುತ್ತವೆ. ಶಿವಶರಣೆ ದಾನಮ್ಮನ ದಿನ ಗುರುವಾರ.

ಕಲ್ಯಾಣ ಕ್ರಾಂತಿಯ ನಂತರವೂ ದಾನಮ್ಮಳ ಪಾತ್ರ ಬಹುಮುಖ್ಯವಾದುದು. ಉಳುವಿಗೆ ಚನ್ನಬಸವಣ್ಣ ಹಾಗೂ ಅಕ್ಕನಾಗಮ್ಮನವರನ್ನು ತಲುಪಿಸಿದ ಮತ್ತು ನಾಗಮ್ಮನವರ ಆಜ್ಞೆಯಂತೆ ಶ್ರೀಶೈಲ ಕಡೆ ಸಾಗಿದ ಶರಣರ ಯೋಗಕ್ಷೇಮ ಕೈಕೊಂಡು ಒಟ್ಟಿನಲ್ಲಿ ವೀರಶೈವ ಧರ್ಮಕ್ಕೆ ಬಂದ ಕುತ್ತುಗಳನ್ನು ಕಿತ್ತೊಗೆದು ವೀರಗಣಾಚಾರ ತತ್ವದ ವೀರವನಿತೆಯಾದಳು. ಹೀಗೆ ಹೋರಾಡಿದ ವೀರಮಹಿಳೆ ಶರಣೆಯರಲ್ಲಿ ದಾನಮ್ಮಳೊಬ್ಬಳೆ.

"ಇಡೀ ಶರಣೆಯರ ಸಮುದಾಯದಲ್ಲಿಯೇ ಈಕೆ ವಿಶಿಷ್ಟಳಾದವಳೆಂಬುದನ್ನು ಅವರ ಈ ಜೀವನ ಕಥೆ ಸಾರಿ ಹೇಳುತ್ತದೆ. ಶಿವಯೋಗದಲ್ಲಿ ಈಕೆಯ ನಿಲುವಿಗೇರಿದ ಶರಣೆಯರು ಅನೇಕರು ಆಗಿಹೋಗಿದ್ದಾರೆ. ಆದರೆ ಆ ನಿಲುವಿನಿಂದ ಸಾಮಾಜಿಕ ಸೂತ್ರವನ್ನವಲಂಭಿಸಿ ಕೆಳಗಿಳಿದು ಧಾರ್ಮಿಕ ಪ್ರಚಾರದ ಕ್ರಿಯಾಶಕ್ತಿಯನ್ನು ಮೆರೆದ ಶರಣೆ ಈಕೆಯೊಬ್ಬಳೇ. ತನ್ನ ಕರ್ತೃತ್ವಶಕ್ತಿಯಿಂದ ಸಂಘಟನೆಯಿಂದ ಈಕೆ ಧಾರ್ಮಿಕ ಆಚಾರ್ಯ ಪದವಿಗೇರಿದ್ದಾಳೆ. ನೇರವಾಗಿ ತಾನೇ ದೀಕ್ಷೆಯನ್ನು ಕೊಟ್ಟು ಅಸಂಖ್ಯಾತ ಭಕ್ತರಿಗೆ ಗುರುವಾಗಿದ್ದಾಳೆ. ಏಕೈಕ ನಿಷ್ಠೆಗೆ ಪರಿಶುದ್ಧ ಜೀವನಕ್ಕೆ ಇನ್ನೊಂದು

ಹೆಸರಾದ ಈಕೆ ಜನಮನದಲ್ಲಿ ಸೇರಿದ್ದಾಳೆ. ಸಮಷ್ಟೀ ಚೇತನವನ್ನು ಉನ್ಮೇಷನಗೊಳಿಸುವ ಮಹಾಶಕ್ತಿಯ ಸಂಕೇತವಾಗಿ ಪರಿಣಮಿಸಿದ್ದಾಳೆ" ಎಂದು ಡಾ. ಎಚ್. ತಿಪ್ಪೇರುದ್ರ ಸ್ವಾಮಿಯವರು ಹೇಳಿದ್ದಾರೆ.

೨.೫ ಶರಣ ದಾಸರ ಭಕ್ತಿ :

ಪ್ರೊ. ಸಿದ್ದಣ್ಣ. ಬಿ. ಉತ್ನಾಳರವರು "ಶರಣ ದಾಸರ ಭಕ್ತಿ" ಕೃತಿಯನ್ನು ಬರೆದಿದ್ದಾರೆ. ಶರಣ ದಾಸ ಸಾಹಿತ್ಯಕ್ಕೆ ಇದು ಒಂದು ಬೆಲೆಯುಳ್ಳ ಕಾಣಿಕೆಯಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನವರು ೧೯೮೫ರಲ್ಲಿ 'ರಾಜ್ಯಮಟ್ಟದ ದಾಸ ಸಾಹಿತ್ಯ' ವಿಚಾರ ಸಂಕಿರಣ ಏರ್ಪಡಿಸಿದ್ದರು. ನಾಡಿನುದ್ದಗಲಕ್ಕೂ ವ್ಯಾಪಿಸಿದ ದಾಸ ಸಾಹಿತ್ಯದ ಸಂಶೋಧಕರು, ಅಭ್ಯಾಸಿಗಳು, ಬರಹಗಾರರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಉತ್ನಾಳರಿಗೆ "ದಾಸ ಸಾಹಿತ್ಯದಲ್ಲಿ ವಿಡಂಬಣೆ" ಕುರಿತು ಪ್ರಬಂಧ ಮಂಡಿಸುವ ಅವಕಾಶ ಲಭಿಸಿತು. ಅದರ ಫಲವೇ ಈ "ಶರಣ ದಾಸರ ಭಕ್ತಿ"

ವ್ಯಷ್ಟಿ ಹಿತಕ್ಕಿಂತ ಸಮಸಷ್ಟಿ ಹಿತ ಲೇಸೆಂಬುದು ಶರಣ–ದಾಸರ ಭಾವ; ಅದೇ ಅವರ ಆದರ್ಶ. ಶರಣ ದಾಸರು ತಮ್ಮಷ್ಟಕ್ಕೆ ತಾವೇ ಉದ್ಧಾರವಾದರೆ ಸಾಲದು ಇಡೀ ಜನಾಂಗವನ್ನೇ ಉದ್ಧರಿಸಿ ತಮ್ಮಂತೆಯೇ ಮಾಡಿಕೊಳ್ಳುವ ಹಂಬಲವೇ ಇವರ ಆದರ್ಶ.

'ವಿಡಂಬನೆ' ಸಾಹಿತ್ಯದಲ್ಲಿ ಹೆಚ್ಚು ಪರಿಣಾಮಕಾರಿ ಆದುದು. ದಾರ್ಶನಿಕರು ತಮ್ಮ ಗ್ರಂಥಗಳಲ್ಲಿ ವಿಡಂಬನೆಯನ್ನು ವಿವಿಧ ಅಂದರೆ ಆನೆಗೆ ಅಂಕುಶ ತೋರಿದಂತೆ.

ದಾಸರಿಗೆ ಹೆಚ್ಚು ಪ್ರಿಯವಾದ ಗ್ರಂಥ; ಭಾಗವತ ಪುರಾಣ' ಇದರಲ್ಲಿ ಭಕ್ತಿಯೇ ಮುಕ್ತಿಗೆ ಮೂಲವೆನ್ನುವ ಸಿದ್ಧಾಂತ; ಭಕ್ತಿಗಳಿಗೆ ಜ್ಞಾನ, ವೈರಾಗ್ಯ ಮಕ್ಕಳೆಂಬ ಕಥೆ ಕಂಡಾಗ ವೇದವ್ಯಾಸರು ಕಲಿಯುಗದಲ್ಲಿ ಭಕ್ತಿ ಮಾರ್ಗವೇ ಶ್ರೇಷ್ಠವಾದುದು.

ವಿಷ್ಣುವಿನ ಭಕ್ತನಾಗದ ಹೊರತು ಮುಕುತಿ ಇದೆಯೆನ್ನುವುದು ಕಂಡಾಗ ಭಕ್ತಿ ಪ್ರಧಾನವಾದ ಈ ದಾಸಪಂಥವು ಶ್ರೀ ವಿಷ್ಣು ಪಾರಮ್ಯವನ್ನು ಜೀವದಾಸ್ಯ ಭಾವವನ್ನು ಪರಮಧ್ಯೇಯವನ್ನಾಗಿ ಅಂಗೀಕರಿಸಿತು. "ಸುಧಾ ಓದಿ ಪದಾ ನೋಡು" ಎಂಬ ಮಾತನ್ನು ಅಕ್ಷರಶಃ ಸತ್ಯವನ್ನಾಗಿಸಿದ್ದಾರೆ ದಾಸರು.

ಶರಣ ನರ–ಹರನಾಗುವ ಮಾರ್ಗವನ್ನೇ ದಾಸರು ನರ–ನಾರಾಯಣವಾಗುವುದನ್ನು ತೋರಿದರು. ಅದನ್ನೇ ಕಬೀರದಾಸರು

ಪಶೂಕಾ ಹೋತ ಪನ್ಹೆಯಾ ನರಕಾ ಕಮಾನ ಹೋತ।
ನರ ಕರಣಿ ಕರೇ ತೋ ನರಕಾ ನಾರಾಯಣ ಹೋತ॥

ಸಾರ್ಥಕ ಕಾರ್ಯ ಮಾಡಿದರೆ ನರನಿದ್ದವನೇ ನಾರಾಯಣನಾಗುತ್ತಾನೆ ಎಂಬಲ್ಲಿ ಪಡಿಮೂಡಿಸಿದ್ದಾರೆ. "ವಚನ ಸಾಹಿತ್ಯ"ದಂತೆ ದಾಸ ಸಾಹಿತ್ಯವೂ ಕನ್ನಡದ ಭಕ್ತಿ ವಾಙ್ಮಯದಲ್ಲಿ ಒಂದು ಮುಖ್ಯವಾದ ಮಜಲು, ಶಿವಶರಣರಂತೆ ಹರಿದಾಸರು ತಮ್ಮ ಸರ್ವಸ್ವವನ್ನು ಭಗವಂತನಿಗೆ ಅರ್ಪಿಸಿ 'ದಾಸೋಹಂ' ಭಾವದಿಂದ ಕೀರ್ತನೆಗಳನ್ನು ಹಾಡಿ ಭಾರತದ ಅಷ್ಟೇ ಏಕೆ? ಜಗತ್ತಿನ ಭಕ್ತಿ ಸಾಹಿತ್ಯದ ಭಂಡಾರಕ್ಕೆ ಕನ್ನಡವು ತನ್ನ ಪಾಲಿನ ಕಾಣಿಕೆಯನ್ನು ಹೆಮ್ಮೆಯಿಂದ ಸಲ್ಲಿಸುವಂತೆ ಮಾಡಿದ್ದಾರೆ.

ಭಕ್ತಿಯ ಹುಚ್ಚು ಹಿಡಿದಾಗ ಶಿವನ ಮೆಚ್ಚು; ಹುಚ್ಚು ಹಿಡಿಯಿತು ಎನಗೆ ಅಚ್ಚುತನ ಧ್ಯಾನವೆಂಬೋ........ ಎನ್ನುವ ಪುರಂದರ ದಾಸರ ವಾಣಿಯಿಂದ ಕನ್ನಡ ಸಾರಸ್ವತ ಪ್ರಪಂಚದಲ್ಲಿ ದಾಸರ ಭಕ್ತಿ ಎರಡನೇ ಪ್ರಯತ್ನವೆಂದು ಹೇಳಲೇಬೇಕಾಗುತ್ತದೆ. ಅನುಭಾವಿಗಳ ಭಾಷೆ ಸಜೀವವಾಗಿ ಓದುಗರೊಡನೆ ಸಹವಾಸ ಮಾಡುತ್ತದೆ.

ಭಕ್ತಿ ಸೂತ್ರದಲ್ಲಿ ನಾರದರು 'ನಾ ಪರಾನುಶಕ್ತಿಃ ಈಶ್ವರೇ' ಎಂದು ವಿವರಿಸಿದ್ದಾರೆ. ಶರಣರು, ದಾಸರು ಮೂಲತಃ ಭಕ್ತರು. ಇವರಲ್ಲಿ ಭಕ್ತಿಯೇ ಮುಕ್ತಿಗೆ ಸೋಪಾನ. 'ಸೋಹಂಕ್ಕಿಂತಲೂ ದಾಸೋಹಂ' ಭಾವ ಇಲ್ಲಿ ಮುಖ್ಯ. ಮಾನವ ದೇವನಾಗಲು, ನರ ನಾರಾಯಣವಾಗಲು ಅನೇಕ ಮಾರ್ಗಗಳುಂಟು. ಆದರೆ ಭಕ್ತಿಮಾರ್ಗ ಸರಳ, ಸುಂದರ. ಭಕ್ತಿ ಭಾವದೊಂದಿಗೆ ದಾಸ್ಯ ಭಾವ ಕೂಡಿದರೆ ಸಾಕು. ಇದರೊಂದಿಗೆ ದಾಸರ ಹಾಡುಗಳು ಹೊಸದಾಗಿ ಹರಿದವು.

ದ್ವೈತ ಅದ್ವೈತ ಹಾಗೂ ವಿಶಿಷ್ಟಾದ್ವೈತಗಳಲ್ಲಿರುವ ವೈದಿಕ ಸಂಪ್ರದಾಯವನ್ನು ಬದಿಗೊತ್ತಿ ಭಕ್ತಿಮಾರ್ಗಕ್ಕೆ ತಿರುಗಿಸಿದವರಲ್ಲಿ ಶರಣರ ನಂತರ ದಾಸರು ಪ್ರಮುಖರು. ಭಕ್ತಿ ತತ್ವಗಳನ್ನು ಬೀರುವುದರಲ್ಲಿ ಒಂದು ದೃಷ್ಟಿಯಿಂದ ಶರಣರಿಗಿಂತ ಒಂದು ಹೆಜ್ಜೆ ದಾಸರೇ ಮುಂದೆ ಹೋಗಿದ್ದಾರೆ. ಶರಣರು ಭಕ್ತಿ ತತ್ವವನ್ನು ಸ್ಥಾನಿಕವಾಗಿ ನೆಲೆನಿಂತು ತಮ್ಮಲ್ಲಿ ಬರುವ ಜಿಜ್ಞಾಸುಗಳಿಗೆ ಹಾಗೂ ಆರ್ತಕರಿಗೆ ಭಕ್ತಿ ರಸವನ್ನು ನೀಡಿದರು. ದಾಸರು ಪರತತ್ವದ ಸವಿಯನ್ನು ತಮ್ಮ ಭಕ್ತಿಪೂರಿತ ಮಧುರ ರಸವನ್ನು ಓಣಿ ಓಣಿ, ಬೀದಿ ಬೀದಿಗಳಲ್ಲಿ ಹರಿನಾಮಗಳನ್ನು ಕೊಂಡಾಡುತ್ತ ಭಕ್ತಿ ಪಂಥದ ಹಿರಿಮೆ ಸಾರುತ್ತ ಮನೆಮನೆಗೆ ಮುಟ್ಟಿಸುವಲ್ಲಿ ಯಶಸ್ವಿಯಾದರು.

ಶರಣರು ಭಕ್ತಿ ಮಾರ್ಗವನ್ನು ಉರ್ಜಿತಗೊಳಿಸಿ ಕೊನೆಗೆ ಸೋಹಂ ಭಾವ ತಲುಪಿದರು. ಆದರೆ ದಾಸರ ಭಾವಗಳು ಭಕ್ತಿ ಪಾರವಶ್ಯತೆಯಲ್ಲಿ ಲಯ ಹೊಂದಿದೆನ್ನಬಹುದು. ಇದು ಆಯಾ ಮತಗಳ ದೃಷ್ಟಿಕೋನ ಭಿನ್ನತೆ ಎಂದು ಪರಿಗಣಿಸಲು ಸಾಧ್ಯ.

"ಶರಣ ದಾಸರ ಭಕ್ತಿ" ಲೇ : ಎಸ್. ಬಿ. ಉತ್ನಾಳ ೧೯೯೨ರಲ್ಲಿ ಅನುಪಮ ಪ್ರಕಾಶನ ಅಥಣಿ.

ದಾಸ ಸಾಹಿತ್ಯದಲ್ಲಿ ಸಾಮಾಜಿಕ ಮೌಲ್ಯದ ಕೊರತೆ ಕಂಡುಬರುತ್ತದೆ. ದಾಸರು ಹರಿಯ ಅತೀ ಪಾರಮ್ಯದಿಂದಾಗಿಯೋ? ಸಂಗೀತ ಲಯೋದ್ಭವವಾಗಿಯೋ? ಭಾವುಕತನ ಹೆಚ್ಚಾಗಿ ತೋರುತ್ತದೆ. ಭಕ್ತಿಯ ಭಾವುಕತನದಿಂದಾಗಿ ಸಾಮಾಜಿಕ ಮೌಲ್ಯಗಳು ತೋರದಂತಾಗಿವೆ. ಮಡಿವಂತರ ಡಾಂಭಿಕರ ಮುಖವಾಡವನ್ನು ಹೀಯಾಳಿಸಿದ್ದಾರೆ. ಜನಸಾಮಾನ್ಯರಿಗೂ ಆಧ್ಯಾತ್ಮದ ಅನುಭೂತಿ; ವೇದಾಂತ ದರ್ಶನ ಮಾಡಿಸಿದ ಕೀರ್ತಿ ಮಧ್ವರಲ್ಲಿ ದಾಸರಿಗೆ ಸಲ್ಲುತ್ತದೆ.

೨.೬ ಬಿಸಿಲಸಿದ್ಧೇಶ್ವರ ಲೀಲೆ :

ಶ್ರೀ ಲಕ್ಷ್ಮಣ. ಎಸ್. ಬಳ್ಳೊಳ್ಳಿ ಅವರು ಬರೆದ "ಬಿಸಿಲಸಿದ್ಧೇಶ್ವರ ಲೀಲೆ" ಎಂಬ ಚಾರಿತ್ರಿಕ ಕೃತಿಯನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ಪುಣ್ಯ ಪುರುಷ ಅಚಕನಳ್ಳಿಯ ಬಿಸಲಸಿದ್ಧೇಶ್ವರರು ಘನಮಹಿಮರು. ಅಸಂಖ್ಯಾತ ಮಹಾತ್ಮೆಗಳಿಗೆ ಅವರ ಮಹಾಬಾಳು ಆಶ್ರಯನ್ನಿತ್ತಿದೆ. ಅವರೊಲಮೆಯಿಂದ ಅಂದು ಕನಕ ಕಲ್ಲೆಲ್ಲಾವಾಯಿತು, ಹುಲ್ಲೆಲ್ಲಾ ರಾಜಾನ್ನವಾಯಿತು, ವಿಷವೆಲ್ಲಾ ಅಮೃತವಾಯಿತು. ಈ ಮಹಿಮರ ಗೈದ ಲೋಕೋಪಚಾರ ಅನಂತ ಮುಖವಾಗಿದೆ. ಬಿಸಲಸಿದ್ಧೇಶ್ವರರು ಗೈದ ಲೋಕೋತ್ತರ ಲೀಲೆಗಳು ನೈಜ ಸಂಗತಿ ಎಂಬುದಕ್ಕೆ ಅವರ ಲಕ್ಷಾಂತರ ಭಕ್ತರ ಬಳಗ ಇನ್ನೂ ಜೀವಂತ ಸಾಕ್ಷಿಯಾಗಿದೆ. ಇಲ್ಲಿ ಅವರ ಮಹಿಮೆಗಳನ್ನು ಚಿತ್ರಿಸಲು ಪ್ರಯತ್ನಿಸಲಾಗಿದೆ. ಇಲ್ಲಿ ಅವರು ಗಳಿಸಿದ ಸಿದ್ಧಿ, ನಿಂತ ನಿಲುಮೆ, ಅವರ ವ್ಯಕ್ತಿಗತವು ವಿಶ್ವಗತವು ಆದ ಜೀವನ ಚಿತ್ರಣವಿದೆ.

ಜತ್ತ ಪರಗಣಿಯಲ್ಲಿ ನಿರ್ವಾಡ ಎಂಬ ಗ್ರಾಮವಿದೆ. ಸುಮಾರು ಒಂಬತ್ತು ನೂರು ವರ್ಷಗಳ ತತ್ಪೂರ್ವಾದದಲ್ಲಿ ಆ ಪುಟ್ಟ ಗ್ರಾಮದ ಒಡೆಯನಾಗಿದ್ದ ನಂದೆಪ್ಪಗೌಡರು ತುಂಬಾ ಬಲಾಢ್ಯನೂ, ಪ್ರಜಾಪ್ರೇಮಿಯೂ, ಕುಶಲ ಆಡಳಿತಗಾರನು. ಅವನು ಅಪಾರವಾದ ಆಸ್ತಿ ಪಾಸ್ತಿಯನ್ನು ಸಂಪಾದಿಸಿ ಲಕ್ಷ್ಮೀ ಪುತ್ರನೆನೆಸಿದ್ದನಲ್ಲದೆ, ಗಂಗಾದೇವಿ ಎಂಬ ಶೀಲವತಿ, ರೂಪವತಿ ಹಾಗೂ ಮಾನವತಿಯಾದ ಅರ್ಧಾಂಗಿಣಿಯ ಕೈಹಿಡಿದು ಶ್ರೀಮಂತಿಕೆಯ ಸುಖದ ಶಿಖರದ ಮೇಲೆ ದಂಪತಿಗಳು ಕಾಲು ಕಳೆಯುತ್ತಿದ್ದರು. ಆದರೆ ಅವರಿಗೆ ತಮ್ಮ ವಂಶವನ್ನು ಉಳಿಸಿ ಮನೆಯ ಜ್ಯೋತಿಯನ್ನು ಬೆಳಗಿಸಬಲ್ಲ ಗಂಡು ಸಂತತಿಯನ್ನು ಪಡೆದಿರಲಿಲ್ಲ ಅದಕ್ಕಾಗಿ ದಂಪತಿಗಳು ನಿರಂತರ ಚಿಂತಿಸುತ್ತಿದ್ದರು.

ನಂದೆಪ್ಪಗೌಡರ ಧರ್ಮ ಪತ್ನಿಯಾದ ಮಾತೋಶ್ರೀ ಗಂಗಮ್ಮನವರು ಗಂಡು ಸಂತತಿಯನ್ನು ಪಡೆಯುವುದಕ್ಕಾಗಿ ಅಖಂಡವಾದ ವೀರವ್ರತವನ್ನೇ ನಡೆಯಿಸಿದ್ದಳು. ಇದರ ಫಲವಾಗಿ ಗಂಗಮ್ಮನವರು ಗಂಡು ಸಂತತಿಯನ್ನು ಪಡೆದಳು. ದಂಪತಿಗಳ ಕನಸು ನನಸಾಯಿತು. ಹದಿಮೂರನೆಯ ದಿನ ಮುತ್ತೈದೆಯರು ತೊಟ್ಟಿಲಲ್ಲಿ ಪುಟ್ಟ ಶಿಶುವನ್ನು ಹಾಕಿದರು, ಹಾಡಿ ಹರಸಿ ಬೆನ್ನು ಚಪ್ಪರಿಸಿ ಮಹಾಲಿಂಗನೆಂದು ಹೆಸರು ಇಟ್ಟು ತೊಟ್ಟಿಲು ತೂಗಿದರು.

ಅಪಾರವಾದ ಆಸ್ತಿಗೆ ಏಕಮಾತ್ರ ಪುತ್ರನಾಗಿ ಜನಿಸಿದ ಮಹಲಿಂಗ ತಂದೆ ತಾಯಿಗಳ ತೋಳ ತೆಕ್ಕೆಯಲ್ಲಿ ಬಾಲ್ಯಜೀವನವನ್ನು ಬಹು ಲೀಲಾಜಾಲವಾಗಿ ಕಳೆಯುತ್ತ ಹತ್ತು ಹನ್ನೆರಡರ ಪ್ರಾಯದಲ್ಲಿ ಅಡಿಯಿರಿಸಿದರು.

ಬಿಸಿಲಸಿದ್ಧನ ಸೇವೆಯ ಹೊರತು ಬೇರಾವುದರ ಗೋಜಿಗೆ ಮನವೆಳಸದ ಮಹಲಿಂಗ ಮಳೆ-ಗಾಳಿ ಬಿಸಲು ನಿದ್ರೆ ನೀರಡಿಕೆ ಹಸಿವುಗಳಿಗೆ ಹಣಿಯದೆ ಕಷ್ಟ-ನಷ್ಟ ಕಾರ್ಪಣ್ಯಗಳು ಬಂದು ಒದಗಿದರೂ, ಯಾವುದಕ್ಕೂ ಅಂಜದೇ ಅಳುಕದೆ ಗುರುಸೇವೆಯಲ್ಲಿ ನಿರಂತರ ತಲ್ಲೀನರಾದರು.

ಮಹಲಿಂಗನಿಗೆ ಹಿಂದೆಂದೂ ಆಗದ ಅನುಭವ ಒಮ್ಮೆಲೆ ಆಗಿ ಆಶ್ಚರ್ಯಚಕಿತನಾದನು. ಅವನನ್ನು ಕುರಿತು ಪರಮ ತಪಸ್ವಿ ಈ ಬಗೆಯಾಗಿ ನುಡಿದರು. ಮಹಲಿಂಗ ನೀನು ಸಾಮಾನ್ಯ ಭಕ್ತನಲ್ಲ. ಅಲೌಕಿಕನಾದ ಸದ್ಭಕ್ತ ನಿನ್ನ ಅಚಲವಾದ ಭಕ್ತಿಗೆ ನಮ್ಮ ತಪಸ್ಸು ಶಕ್ತಿಗಳೆಲ್ಲವೂ ನಿಶ್ಯಕ್ತವಾಗಿವೆ ನೀನು ಇರುವಲ್ಲಿಗೆ ನಾವು ಬರುತ್ತೇವೆ. ಹೊರತು ನಾವು ಇರುವಲ್ಲಿಗೆ ನೀನು ಬರಬೇಕಾಗಿಲ್ಲ. ನೀನು ಪುಣ್ಯ ಪುರುಷರ ಇತಿಹಾಸದಲ್ಲಿ ಧನ್ಯಪುರುಷನಾಗಿ ಹೊಂಗಳಸಾಗಿ ಕಂಗೊಳಿಸುವೆ! ಎಂದು ಸಿದ್ಧಪುರುಷ ನುಡಿಯುತ್ತ ತನ್ನ ವರಹ ಹಸ್ತವನ್ನು ಮಹಲಿಂಗನ ಮಸ್ತಕದ ಮೇಲಿರಿಸಿ "ತಥಾಸ್ತು" ಎಂದು ಆಶೀರ್ವದಿಸಿ ನಿರ್ವಾಡಕ್ಕೆ ಕಳುಹಿಸಿದರು.

ನಿತ್ಯ ಗುರುದೇವನ ಸೇವೆಗಾಗಿ ಕವಡಿಯನ್ನು ಹೊತ್ತುಕೊಂಡು ಹೊತ್ತೇರುವುದರಲ್ಲಿಯೇ ಸಿದ್ಧನ ಅಗ್ನಿಕುಂಡಕ್ಕೆ ಹಾಲು, ಮೊಸರು, ತುಪ್ಪ, ಅರ್ಪಿಸಲು ದಯಮಾಡಿಸುತ್ತಿದ್ದ ಸದ್ ಭಕ್ತನಾದ ಮಹಲಿಂಗನ ಸ್ವಗ್ರಾಮದಲ್ಲಿ ಮಧ್ಯರಾತ್ರಿಯಲ್ಲಿ ತಲೆ ತಿರುಕನ ಕೊಲೆಯೊಂದು ಆಗಿತ್ತು. ನಂದೇಪ್ಪಗೌಡರ ಉತ್ತರಾಧಿಕಾರಿಯಾಗಿ ಪಾರ್ಥಿವ ಶರೀರದ ಪಂಚನಾಮೆಗಾಗಿ ಮಹಲಿಂಗ ತನ್ನ ಮನೆಯಿಂದ ಲಗುಬಗೆಯಿಂದ ಚಾವಡಿಗೆ ಬಂದನು. ಅಲ್ಲಿ ತನ್ನ ಬಟವಾ ಬಿಚ್ಚುತ್ತಲೇ ಕೃಷ್ಣಕಾಂತರ ಹೊಲದಲ್ಲಿ ಶಿಲಾರೂಪದಿಂದ ನೆಲದಲ್ಲಿ ಬಯಲಾದ ಉಭಯ ವಿಭೂತಿಗಳ ವಿಷಯವನ್ನು ಹೇಳುತ್ತಲೇ ಕೌತುಕದ ಕತೆಯನ್ನು ಹೇಳಲಾರಂಭಿಸಿದನು. ಅಲ್ಲಿ ಕುಳಿತುಕೊಂಡ ಎಲ್ಲ ಜನರು ಮೂಕವಿಸ್ಮಿತರ ಹಾಗೆ ವಿಸ್ಮಯಕಾರಕ ಕತೆಯನ್ನು ಲಾಲಿಸುತ್ತಿದ್ದಾಗ ಸದ್ಭಕ್ತನಾದ ಮಹಲಿಂಗನ ಅಂತರಂಗದಲ್ಲಿ ಒಮ್ಮೆಲೆ ಚಂಡಮಾರುತ ಬೀಸಿದಂತಾಯಿತು. ಹಾ! ಸಿದ್ಧಾ ಸಿದ್ಧಾ ಎಂದವನೇ ಮಹಲಿಂಗ ಲಿಂಗದೇವನಲ್ಲಿ ಅಂಗಬೆರೆಸಿದನು. ಬಯಲಿನಲ್ಲಿ ಬಯಲು ರೂಪಿಯಾದನು. ನಿರ್ವಾಡದ ಇತಿಹಾಸದಲ್ಲಿ ಮರೆತರೂ ಮರೆಯಲಾಗದ ಚಮತ್ಕಾರಕ ಘಟನೆ ಕ್ಷಣಾರ್ಧದಲ್ಲಿಯೇ ಜರುಗಿ ಮಾನವ ಕುಲದ ಹೃದಯ ಮಂದಿರದಲ್ಲಿ ಹಾಸು ಹೊಕ್ಕಿತು.

"ಶ್ರೀ ಬಿಸಲಸಿದ್ಧೇಶ್ವರ ಲೀಲೆ" ಲೇ : ಶ್ರೀ ಲಕ್ಷ್ಮಣ. ಎಸ್. ಬಳ್ಳೊಳ್ಳಿ ೧೯೯೨ರಲ್ಲಿ ಅನುಪಮ ಪ್ರಕಾಶನ ಅಥಣಿ.

❄❄❄❄

ಅಧ್ಯಾಯ – ಆರು :

ಇತರ ಸಾಹಿತ್ಯದ ಅಧ್ಯಯನ

ಅಧ್ಯಾಯ – ಆರು :

ಇತರ ಸಾಹಿತ್ಯದ ಅಧ್ಯಯನ

೧.೧	ಖರೆ ಖರೆ ಸಂಗ್ಯಾ ಬಾಳ್ಯಾ	–	ಡಾ. ಅ. ರಾ. ಯಾರ್ದಿ
೧.೨	ವಚನೋದ್ಯಾನ	–	ಡಾ. ಸಿದ್ದಯ್ಯಾ ಪುರಾಣಿಕ
		–	ಡಿ. ವಿ. ಪೋತದಾರ
೧.೩	ಸತ್ತಿ ವೆಂಕಟಪ್ಪನವರ ವಂಶ ರಹಸ್ಯ	–	ಶ್ರೀ ಎ. ಎಸ್. ಕುಲಕರ್ಣಿ
೧.೪	ಶ್ರೀ ಮುರುಘೇಂದ್ರ ಮಹಾಶಿವಯೋಗಿ	–	ದಿ. ಶ್ರೀ ಬಿ. ಎಸ್. ಕಲ್ಯಾಣಿ

೧.೧ ಖರೆ ಖರೆ ಸಂಗ್ಯಾ ಬಾಳ್ಯಾ :

ನಿಜವಾದ ಸಂಗ್ಯಾ ಬಾಳ್ಯಾ ಎಂಬ ಬೀದಿ ನಾಟಕವನ್ನು ಮೂಲತಃ ಕನ್ನಡದಲ್ಲಿ ಡಾ. ಎಂ. ಎಂ. ಕಲಬುರ್ಗಿಯವರು ರಚಿಸಿದ್ದಾರೆ. ಇದನ್ನು ಡಾ. ಅ. ರಾ. ಯಾರ್ದಿಯವರು ಮರಾಠಿ ಭಾಷೆಗೆ ಅನುವಾದಿಸಿದ್ದಾರೆ. ಈ ಬೀದಿ ನಾಟಕವನ್ನು ಅನುಮಪಮ ಪ್ರಕಾಶನವು ಪ್ರಕಟಿಸಿದೆ.

ಸಂಗ್ಯಾ ಬಾಳ್ಯಾ ಇದು ಒಂದು ಸಣ್ಣಾಟವಾಗಿದೆ. ನಂತರ ಮರಾಠಿ ಭಾಷೆಗೆ ಅನುವಾದಿಸಿದ "ನಿಜವಾದ ಸಂಗ್ಯಾ ಬಾಳ್ಯಾ" ಈ ನಾಟಕವು ಕೂಡಾ ಸಣ್ಣಾಟದ ಒಂದು ಪ್ರಕಾರವಾಗಿದೆ. ಪ್ರಾಚೀನ ಕರ್ನಾಟಕದ ವೀರಯುಗದಲ್ಲಿ ದೊಡ್ಡಾಟ ಹಾಗೂ ಭಕ್ತಿಯುಗದಲ್ಲಿ ಸಣ್ಣಾಟ ಎಂಬ ನಾಟಕಗಳು ಜನ್ಮ ತಾಳಿದವು. ಇಂದಿನ ಯುಗದಲ್ಲಿ ಬಹಳಷ್ಟು ನಾಟಕಗಳು ಸಾಮಾಜಿಕ ಕಾರ್ಯಗಳಿಗೆ ಅನುಗುಣವಾಗಿದ್ದು ಸಂಗ್ಯಾ ಬಾಳ್ಯಾ ನಾಟಕವೂ ಕೂಡಾ ಸಮಾಜದ ಒಂದು ಘಟನೆಯನ್ನು ವರ್ಣಿಸಕ್ಕ ಲೋಕಪ್ರಿಯ ನಾಟಕವಾಗಿದೆ. ಸಂಗ್ಯಾ ಬಾಳ್ಯಾ ನಾಟಕವು ವೀರಯುಗ ಹಾಗೂ ಭಕ್ತಿಯುಗಗಳ ಮಧ್ಯದಲ್ಲಿ ಜನಿಸಿದ ಒಂದು ಸಾಮಾಜಿಕ ಸುಂದರ ಬೀದಿ ನಾಟಕವಾಗಿದೆ.

"ಖರೆ ಖರೆ ಸಂಗ್ಯಾ ಬಾಳ್ಯಾ" ಲೇ : ಡಾ. ಅ. ರಾ. ಯಾರ್ದಿ ೨೦೦೮ರಲ್ಲಿ ಅನುಪಮ ಪ್ರಕಾಶನ ಅಥಣಿ.

ಸಜ್ಜನರ ಮೇಲೆ ಶಕ್ತಿಯುತರ ಬಲವಾಗಿ ಯಾವ ರೀತಿ ಅರೋಪಗಳನ್ನು ಹೊರಿಸುತ್ತಾರೆ ಹಾಗೂ ಸಮಾಜ ಅಂತಹ ಘಟನೆಗಳನ್ನು ಯಾವ ರೀತಿ ಮಾನ್ಯತೆ ನೀಡುತ್ತದೆ ಎಂಬುದನ್ನು ವಿವರವಾಗಿ ಈ ನಾಟಕದಲ್ಲಿ ವರ್ಣಿಸಲಾಗಿದೆ. ಸುಮಾರು ನೂರು ವರ್ಷಗಳ ಹಿಂದೆ 'ಗಂಗಾ' ಎಂಬ ಸಜ್ಜನ ಯುವತಿಯ ಮೇಲೆ ಅರ್ಥವಿಲ್ಲದ ದೋಷಾರೋಪಣೆ ಮಾಡಲಾಗಿತ್ತು. ಈ ಘಟನೆಯನ್ನು ಕನ್ನಡದಲ್ಲಿ ಡಾ. ಎಂ. ಎಂ. ಕಲಬುರ್ಗಿಯವರು ವಿವರವಾಗಿ ವರ್ಣಿಸಲಾಗಿದೆ. ಅದುವೇ ಸಂಗ್ಯಾ ಬಾಳ್ಯಾ ನಾಟಕವಾಗಿದೆ. ಈ ನಾಟಕದಲ್ಲಿ ಎಲ್ಲ ಪಾತ್ರದಾರಿಗಳು ಒಬ್ಬರಿಗೊಬ್ಬರು ನೇರವಾಗಿ ಎದುರಿಸಿ ವಿಶೇಷವಾದ ಪಾತ್ರಗಳನ್ನು ಬಳಸಿದ್ದಾರೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಬೈಲವಾಡ ಗ್ರಾಮದ ಸೊಸೆಯಾಗಿದ್ದ ಗಂಗಾ ಸಜ್ಜನ ಸ್ವರೂಪಿಯಾಗಿದ್ದಳು. ಕಾಮರೂಪಿಯಾದ ಸಂಗ್ಯಾ ಆಕೆಯ ಪತಿ ಈರಪ್ಪ ಇಲ್ಲದನ್ನು ಕಂಡು ಬಾಳ್ಯಾನ ಸಹಯೋಗದೊಂದಿಗೆ ಗಂಗೆಯ ಮನೆಯನ್ನು ಪ್ರವೇಶಿಸುತ್ತಾನೆ. ಆಕೆ ಅವನ ಜೊತೆಗೆ ಸಹಕಾರ ನೀಡದಿದ್ದಾಗ ವ್ಯಭೀಚಾರದ ಆರೋಪವನ್ನು ಮಾಡುತ್ತಾನೆ. ಕೆಲವೊಂದು ದಿನಗಳ ನಂತರ ಈರಪ್ಪ ತಮ್ಮ ಊರಿಗೆ ಮರಳಿದಾಗ ಘಟನೆಯ ನಿಜಾಂಶ ಗೊತ್ತಾಗುತ್ತದೆ. ಅದಕ್ಕಾಗಿ ಈರಪ್ಪ ತನ್ನ ಪತ್ನಿ ಗಂಗೆಯನ್ನು ಮನೆಯಿಂದ ಹೊರ ಹಾಕುತ್ತಾನೆ. ನಂತರದ ದಿನಗಳಲ್ಲಿ ಈರಪ್ಪ ಇವನಿಗೆ ಗಲ್ಲು ಶಿಕ್ಷೆಯಾಗುತ್ತದೆ. ಸಂಗ್ಯಾ ಬಾಳ್ಯಾ ಇದು ಕಾಲ್ಪನಿಕ ಕತೆಯಲ್ಲದೆ ನಿಜವಾದ ಘಟನೆಯಾಗಿದೆ. ವಾಸ್ತವಿಕವಾಗಿ ಅಲ್ಲಿದ್ದ ಒಬ್ಬ ಪತ್ತಾರನು (ಬಂಗಾರದ ವ್ಯಾಪಾರಿ) ಗಂಗೆಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದ್ದ ಆದರೆ ಆತ ವಿಫಲನಾದಾಗ ನಿಜವಾದ ಘಟನೆಯನ್ನು ಈರಪ್ಪನಿಗೆ ತಿಳಿಸುತ್ತಾನೆ. ವಾಸ್ತವಿಕವಾಗಿ ಸಂಗ್ಯಾ ಹಾಗೂ ಗಂಗೆಯ ನಡುವೆ ಯಾವುದೇ ಅಸಭ್ಯವಾದ ಸಂಬಂಧವಿರಲಿಲ್ಲ ಆದರೆ ಬಂಗಾರದ ವ್ಯಾಪಾರಿಯು ಆಕೆಯ ವಿರೋಧವಾಗಿ ಸೇಡನ್ನು ತೀರಿಸಿಕೊಳ್ಳಲು ಈ ರೀತಿ ಸಮಸ್ಯೆಯನ್ನು ನಿರ್ಮಿಸುತ್ತಾನೆ. ಗಂಗೆಯ ಕುಟುಂಬದ ಎಲ್ಲ ಸದಸ್ಯರು ವ್ಯಾಪಾರಿಯ ಮೇಲೆ ವಿಶ್ವಾಸವನ್ನಿಟ್ಟು ಗಂಗೆಯನ್ನು ಮನೆಯಿಂದ ಹೊರದೂಡುತ್ತಾರೆ.

ಡಾ. ಎಂ. ಎಂ. ಕಲಬುರ್ಗಿಯವರು ಸಮಾಜದಲ್ಲಿ ಸಜ್ಜನರ ಮೇಲೆ ಯಾವ ರೀತಿ ಅರ್ಥವಿಲ್ಲದ ಆರೋಪಗಳನ್ನು ಮಾಡಲಾಗುತ್ತದೆ ಎಂಬುದನ್ನು ಈ ನಾಟಕದ ಮೂಲಕ ಜನರಿಗೆ ತಿಳಿಸಿದ್ದಾರೆ.

ಇಂತಹ ಘಟನೆಗಳನ್ನು ವರ್ಣಿಸುವಾಗ ಲೇಖಕರ ಮೇಲೆ ಬಹಳಷ್ಟು ಜವಾಬ್ದಾರಿಗಳು ಇರುತ್ತವೆ. ಕಾರಣ ಘಟನೆ ಅಶ್ಲೀಲವಾದರೂ ಕೂಡಾ ಲೇಖಕ ಅದನ್ನು ಯೋಗ್ಯ ರೂಪದಲ್ಲಿ ನಿರ್ಮಿಸಿ ಸಮಾಜಕ್ಕೆ ಕಳಂಕ ಬರದಂತೆ ವಿಚಾರಧಾರೆಯನ್ನು ವ್ಯಕ್ತಪಡಿಸಬೇಕಾಗುತ್ತದೆ.

ಮರಾಠಿ ಭಾಷೆಗೆ ಅನುವಾದಿಸಿದ ಡಾ. ಅ. ರಾ. ಯಾರ್ದಿ ಅವರು ಸುಮಾರು ದಿನಗಳ ಹಿಂದೆಯಷ್ಟೇ ಕನ್ನಡದ ಮೂಲ ಪ್ರತಿಯನ್ನು ಪಡೆದುಕೊಂಡು ಮರಾಠಿ ಭಾಷೆಗೆ ವ್ಯವಸ್ಥಿತವಾದ ರೂಪದಲ್ಲಿ ಭಾಷಾಂತರಿಸಿ ಅದರ ಮೂಲ ತತ್ವವನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಡಾ. ಅ. ರಾ. ಯಾರ್ದಿ ಅವರು ತಮ್ಮ ವ್ಯವಸಾಯಿಕ ಜೀವನದ ನಿವೃತ್ತಿ ನಂತರ ಒಂದು ದಿನ ತಮ್ಮ ಮನೆಯಲ್ಲಿದ್ದ ಹಳೆಯ ಕಡತಗಳನ್ನು ಪರಿಶೀಲಿಸುತ್ತಿರುವಾಗ ಆಕಸ್ಮಾತ್ತಾಗಿ ಈ ನಾಟಕದ ಪ್ರತಿ ಅವರ ಕೈ ಸೇರುತ್ತದೆ. ಅ. ರಾ. ಯಾರ್ದಿ ಅವರು ಪಟ್ಟಣದಲ್ಲಿ ತಮ್ಮ ಜೀವನವನ್ನು ಕಳೆಯುತ್ತಿದ್ದರೂ ಕೂಡಾ ಗ್ರಾಮೀಣ ಜನರ ಜೀವನದ ಬಗ್ಗೆ ಅವರಿಗೆ ಒಳ್ಳೇಯ ಅನುಭವ ಇತ್ತು. ಅದಕ್ಕಾಗಿ ಅವರು ದೊಡ್ಡಾಟ, ಸಣ್ಣಾಟ ಮುಂತಾದ ಬೀದಿ ನಾಟಕಗಳನ್ನು ಸಂಸ್ಕಾರಬದ್ಧವಾಗಿ ಭಾಷಾಂತರಿಸಿದ್ದಾರೆ. ಲೇಖಕರ ವಿಚಾರದಲ್ಲಿ ಅವರು ಕೂಡಾ ಗ್ರಾಮೀಣ ಸಂಸ್ಕಾರದಲ್ಲಿಯೇ ಬೆಳೆದವರು ಕಾರಣ ಅವರು ಸುಲಭವಾಗಿ ಸನ್ನಿವೇಶವನ್ನು ಅರ್ಥೈಯಿಸಿ ಯಥಾವತ್ತಾಗಿ ಮರಾಠಿ ಭಾಷೆಗೆ ಅನುವಾದಿಸಿದ್ದಾರೆ.

ಸಂಗ್ಯಾ ಬಾಳ್ಯಾ ನಾಟಕವನ್ನು ಬೇರೆ ಬೇರೆ ಲೇಖಕರು ಘಟನೆಯ ಮೂಲವನ್ನು ಯತಾವತ್ತಾಗಿ ಇಟ್ಟುಕೊಂಡು ತಮ್ಮದೇ ಶೈಲಿಯಲ್ಲಿ ವರ್ಣಿಸಿದ್ದಾರೆ. ಮರಾಠಿ ಅನುವಾದ ಸಹಜವಾಗಿ ಬಂದಿದೆ, ಮೂಲವನ್ನೇ ಓದಿದಂತಾಗುತ್ತದೆ.

೨.೨ ವಚನೋದ್ಯಾನ :

ಡಾ. ಸಿದ್ದಯ್ಯ ಪುರಾಣಿಕ ಅವರು ರಚಿಸಿದ "ವಚನೋದ್ಯಾನ" ಎಂಬ ಕವನ ಸಂಕಲನವನ್ನು ಅನುಪಮ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ರವೀಂದ್ರನಾಥ ಟ್ಯಾಗೋರರವರು ನೊಬೆಲ್ ಪಾರಿತೋಷಕ ಪಡೆದಂತಹ ಕೃತಿ "ಗೀತಾಂಜಲಿ"ಯನ್ನು ಆಂಗ್ಲಭಾಷೆಗೆ ಪರಿವರ್ತಿಸಿ ಜಗತ್ತಿನಾದ್ಯಂತ ಭಾರತದ ಸಂಸ್ಕೃತಿ ಹಾಗೂ ಪರಂಪರೆಯನ್ನು ಮೆರೆದಿದ್ದಾರೆ. ತದನಂತರ ಬಹಳಷ್ಟು ಭಾರತೀಯ ಸಾಹಿತಿಗಳು ತಮ್ಮ ಕೃತಿಗಳನ್ನು ಆಂಗ್ಲ ಭಾಷೆಗೆ ಪರಿವರ್ತಿಸಿ ಭಾರತದ ಸಂಸ್ಕೃತಿ ಹಾಗೂ ಆಧ್ಯಾತ್ಮಿಕ ವಿಚಾರಗಳನ್ನು ಜಗತ್ತಿಗೆ ಸಾರಿದ್ದಾರೆ. ಅಂತಹವರಲ್ಲಿ ಸಿದ್ದಯ್ಯಾ ಪುರಾಣಿಕ ಅವರೂ ಒಬ್ಬರಾಗಿದ್ದಾರೆ.

ಡಾ. ಸಿದ್ದಯ್ಯಾ ಪುರಾಣಿಕರವರು ಕನ್ನಡದ ಕವಿಗಳಲ್ಲಿ ಪ್ರಮುಖರು ಹಾಗೂ ಅವರು ಆಂಗ್ಲಭಾಷೆಗೆ ಪರಿವರ್ತಿಸಿದ "ವಚನೋದ್ಯಾನ" ಕಾವ್ಯ ಕೃತಿಯು ಭಾರತದ ಪರಂಪರೆ ಹಾಗೂ ಆಧ್ಯಾಮಿಕ ವಿಚಾರಗಳನ್ನು ಜಗತ್ತಿಗೆ ಪರಿಚಯಿಸಿದೆ.

"ವಚನೋದ್ಯಾನ" ಕವನ ಸಂಕಲನ ಲೇ : ಡಾ. ಸಿದ್ದಯ್ಯಾ ಪುರಾಣಿಕ ೧೯೯೧ರಲ್ಲಿ ಅನುಪಮ ಪ್ರಕಾಶನ ಅಥಣಿ.

"ವಚನೋದ್ಯಾನ" ಪದ್ಯ – ೧, ಪುಟ – ೧.

ಈ ಕಾವ್ಯ ಸಂಗ್ರಹದಲ್ಲಿ ಕವಿ ಡಾ. ಸಿದ್ದಯ್ಯಾ ಪುರಾಣಿಕ ಅವರು ಒಳ್ಳೇಯ ಚಾರಿತ್ರ್ಯ ಆತ್ಮದ ಶುದ್ಧೀಕರಣ ಹಾಗೂ ಮಾನವ ಸಂಕುಲಕದಲ್ಲಿ ಪ್ರತಿಯೊಬ್ಬರಲ್ಲಿ ಇರಬೇಕಾದ ಒಳ್ಳೇಯ ಗುಣಗಳ ಬಗ್ಗೆ ವರ್ಣಿಸಿದ್ದಾರೆ. ಆತ್ಮವು ಪರಿಶುದ್ಧ ಹಾಗೂ ಸ್ವತಂತ್ರವಾಗಿರಬೇಕು ಹಾಗೂ ಅದು ಪರಮಾತ್ಮನಲ್ಲಿ ತನ್ನ ಒಳ್ಳೇಯ ನಡುವಳಿಕೆಗಳ ಮುಖಾಂತರ ಸೇವೆ ಸಲ್ಲಿಸಬೇಕು. ಮಾನವನಲ್ಲಿ ಆತ್ಮವಿಶ್ವಾಸ ಹಾಗೂ ದೃಢವಾದ ಬಯಕೆ ಮುಖಾಂತರ ದ್ವೈತವನ್ನು ಸಾಧಿಸಬಹುದು. ಆತ್ಮವಿಶ್ವಾಸ ಹಾಗೂ ದೃಢವಾದ ಬಯಕೆ ಇರದೆ ಇದ್ದರೆ ಮಾನವ ಜೀವನ ಅರ್ಥಹೀನವಾಗುತ್ತದೆ. ಜಗತ್ತಿನಲ್ಲಿ ಗಂಗಾ, ಓಲಗಾ, ಮೆಸಸಿಪಿ ಮುಂತಾದ ನದಿಗಳಲ್ಲಿ ಸಾಕಷ್ಟು ನೀರನ್ನು ಕಂಡರು ಯಾವುದೇ ಮಹತ್ವ ಇರುವುದಿಲ್ಲ. ಕಾರಣ ಭಗವಂತನಲ್ಲಿ ಮೊರೆ ಹೋಗಿ ಒಂದಿಷ್ಟು ಕಣ್ಣಿನ ಧಾರೆ ಎರೆದರೆ ಅದು ಈ ಪ್ರಾಪಂಚಿಕ ನದಿಗಳ ನೀರಿಗಿಂತಲೂ ಶ್ರೇಷ್ಠವಾದದ್ದು. ಅದಕ್ಕಾಗಿ ಸಿದ್ದಯ್ಯಾ ಪುರಾಣಿಕ ಅವರು ತಮ್ಮ ಆತ್ಮವನ್ನು ದೇವರಿಗಾಗಿ ಸಮರ್ಪಿಸಬೇಕು ಎಂದು ಹೇಳಿದ್ದಾರೆ. ಮುಂಖ್ಯವಾಗಿ ಅದನ್ನು ನಾವು ನಮ್ಮ ಕಾರ್ಯಗಳ ಮುಖಾಂತರ ವ್ಯಕ್ತಪಡಿಸಬೇಕೆಂಬುದು ಅವರ ಪ್ರಬಲವಾದ ವಿಚಾರ. ನಿಸರ್ಗದಲ್ಲಿ ಇದ್ದಂತೆ ಎಲ್ಲ ವಸ್ತುಗಳು ದೇವ ನಿರ್ಮಿತ ಅದಕ್ಕಾಗಿ ಅವೆಲ್ಲವೂ ತಮ್ಮ-ತಮ್ಮ ಕಾರ್ಯಗಳ ಮುಖಾಂತರ ಸಮಾಜ ಸೇವೆ ಮಾಡಿ ದೇವರನ್ನು ಪ್ರಾರ್ಥಿಸುತ್ತವೆ ಹಾಗೆಯೇ ಬಲದಿಂದ ಶ್ರೀ ಕ್ಷೇತ್ರವನ್ನು ಈ ಭೂಮಿಯ ಮೇಲೆ ಇದ್ದಂತಹ ಪವಿತ್ರ ಸ್ವರ್ಗದಂತೆ ಮಾರ್ಪಾಡು ಮಾಡಿದರು. ಕರ್ನಾಟಕದ ಗಡಿ ಭಾಗದಲ್ಲಿ ಮುರಿಗೆಪ್ಪಾ ಸ್ವಾಮೀಜಿಯವರ ಆಶೀರ್ವಾದ ಪಡೆದುಕೊಂಡು ಶಕ್ತಿ ವಿಶಿಷ್ಟಾದ್ವೈತ್ ತತ್ವವನ್ನು ಪಾಲಿಸಿದರು. ಮಾನವ ತನ್ನಲ್ಲಿ ದ್ವೈತವನ್ನು ಕಂಡುಕೊಳ್ಳಬೇಕಾದರೆ ಈ ಕೆಳಗಿನ ಹತ್ತು ಹಂತಗಳ ಮುಖಾಂತರ ಸಾಗಬೇಕು.

೧) ದೇವರನ್ನು ಅರ್ಥೈಸುವುದು.

೨) ಪರಿಶುದ್ಧತೆ.

೩) ಪ್ರೀತಿ ಮತ್ತು ವಿಶ್ವಾಸ.

೪) ಕಾಯಕ.

೫) ಇಷ್ಟಲಿಂಗ.

೬) ಯೋಗ.

೭) ಶಿವಯೋಗ ದೀಕ್ಷೆ.

೮) ಅಷ್ಟವರ್ಣ.

೯) ಪಂಚಚಾರ.

೧೦) ಮುಕ್ತಿ.

ಶ್ರೀ ಮುರುಘೇಂದ್ರ ಶಿವಯೋಗಿಯವರು ತಮ್ಮ ಅನಂತ ಶಕ್ತಿಯನ್ನು ಭಕ್ತಿ, ಜ್ಞಾನ ಹಾಗೂ ವೈರಾಗ್ಯದಿಂದ ಪಡೆದುಕೊಂಡು ಈ ಭೂಮಿಯ ಮೇಲೆ ಆಧ್ಯಾತ್ಮದ ಸ್ವರ್ಗವನ್ನು ಸ್ಥಾಪಿಸಿದರು. ಲಿಂಗಪೂಜೆ ಮನುಷ್ಯನು ಕಾಲ್ಪನಿಕ ವಿಚಾರಗಳಿಗೆ ಮೊರೆ ಹೋಗದೆ ತನ್ನ ಕಾರ್ಯಗಳ ಮುಖಾಂತರ ಸಮಾಜ ಸೇವೆಗೈದು ದೇವರನ್ನು ಸಂತೈಸಬೇಕು ಎಂಬ ವಿಚಾರವನ್ನು ಡಾ. ಸಿದ್ದಯ್ಯಾ ಪುರಾಣಿಕ ಅವರು ತಮ್ಮ ಕಾವ್ಯ ಸಂಕಲನದಲ್ಲಿ ವ್ಯಕ್ತಪಡಿಸಿದ್ದಾರೆ.

ಸಿದ್ದಯ್ಯಾ ಪುರಾಣಿಕ ಅವರು ವಸುದೈವ ಕುಟುಂಬಕ್ಕೆ ಬದ್ಧರಾಗಿದ್ದರು. ಪ್ರತಿಯೊಬ್ಬರಲ್ಲಿ ಮಾನವೀಯತೆಯ ಗುಣಗಳಿದ್ದರೆ ಅದುವೇ ಅವರ ವಿಚಾರದಲ್ಲಿ ಶ್ರೇಷ್ಠವಾದ ಧರ್ಮ. ಡಾ. ಪುರಾಣಿಕ ಅವರ ಕಾವ್ಯ ಸಂಕಲನದಲ್ಲಿ ಒಳ್ಳೆಯ ಗುರಿ, ಒಳ್ಳೆಯ ನಡತೆ ಹಾಗೂ ಮಹಾತ್ಮರ ಸಂಕ್ಷಿಪ್ತ ಚರಿತ್ರೆಯನ್ನು ಕಾಣುತ್ತೇವೆ.

"The earth is my Mother
The sky is my Father
But thou, birthless one
The father and mother of both
Swatantra dheera Siddeshwara!"

ಡಾ. ಪುರಾಣಿಕ ಅವರು ಭೂಮಿಯನ್ನು ತಾಯಿ ಹಾಗೂ ಆಕಾಶವನ್ನು ತಂದೆ ಎಂದು ಸಂಭೋದಿಸಿದ್ದಾರೆ. ಕಾರಣ ಜನ್ಮ ಕೊಟ್ಟಂತಹ ತಂದೆ ತಾಯಿಗಳು ಪೋಷಿಸುವ ರೂಪದಲ್ಲಿ ಆಕಾಶ ಹಾಗೂ ಭೂಮಿ ಮಾನವನನ್ನು ಪೋಷಿಸುತ್ತವೆ. ಅದಕ್ಕಾಗಿ ಅವರು ಸ್ವತಂತ್ರ ಧೀರ ಸಿದ್ಧೇಶ್ವರ ಎಂಬ ಅಂಕಿತನಾಮದೊಂದಿಗೆ ದೇವರಲ್ಲಿ ಪ್ರಾರ್ಥಿಸುತ್ತಾರೆ.

"A life without pastimes
Is a fruit worm eaten;
A life without love
Is a flower without fragrance;
An aimless life
Is a featherless bird;
An immoral life
Is a tree wosened at the roots;
A life without pals
Is a candle without fallow;
A life without recreation
Is a trumpet out of tune;
Swatantra Dheera Siddeshwara,
A life oblivious of thee
Is a lake that's dried up.

ಸಿದ್ದಯ್ಯಾ ಪುರಾಣಿಕ ಅವರು ಹಿಂದಿನ ಕಾಲದ ಆಧಾರವಲ್ಲದ ಜೀವನ ಹುಳು ತಿಂದ ಹಣ್ಣಿನಂತೆ ಅರ್ಥವಿಲ್ಲದಾಗುತ್ತದೆ. ಪ್ರೀತಿ–ವಿಶ್ವಾಸವಲ್ಲದ ಜೀವನ ಸುಗಂಧರಹಿತ ಹೂವಿನಂತೆ, ಗುರಿ ಇಲ್ಲದ ಜೀವನ ರೆಕ್ಕೆಗಳಿಲ್ಲದ ಹಕ್ಕಿಯಂತೆ ಆಧ್ಯಾತ್ಮವಲ್ಲದ ಜೀವನ ಬೇರಿಲ್ಲದ ಮರದಂತೆ, ಜ್ಞಾನವಿಲ್ಲದ ಜೀವನ ಬೆಳಕು ಇಲ್ಲದ ಮೇಣದ ಬತ್ತಿಯಂತೆ, ಕ್ರಿಯಾಶೀಲವಲ್ಲದ ಜೀವನ ಇದ್ದು ಸತ್ತಂತೆ ಸ್ವತಂತ್ರಧೀರ ಸಿದ್ಧೇಶ್ವರ.

"The move in water
for survival,
not for spart;
The warkman digs the foundation
for wages,
not for study;
The boatman rows his ferry
To earn his bread,
not for pleasure;
The juggler keeps a snake
for his maintainance,
not out of compassion;
Swatantra Dheera Siddeshwara
I meditake on thee
for my benefit, not thine."

ಸಿದ್ದಯ್ಯಾ ಪುರಾಣಿಕ ಅವರು ಕ್ರಿಯಾಶೀಲತೆಯ ಬಗ್ಗೆ ವರ್ಣಿಸಿದ್ದಾರೆ. ಒಂದು ಮೀನು ನೀರಿನಲ್ಲಿ ಈಜುವುದು ನಿರ್ದಿಷ್ಟ ಗುರಿ ತಲುಪಲು ಅಲ್ಲ ಆದರೆ ಜೀವಂತವಾಗಿ ಇರಲು ಪ್ರಯತ್ನಿಸುತ್ತದೆ. ಒಬ್ಬ ಕೂಲಿಕಾರ ಅಡಿಪಾಯವನ್ನು ಹಡ್ಡುವುದು ತನ್ನ ಕೂಲಿಗಾಗಿ ಹೊರತು ಅಭ್ಯಾಸಕ್ಕಾಗಿ ಅಲ್ಲ, ಒಬ್ಬ ನಾವಿಕ ಹಡಗನ್ನು ಮುಂದೆ ಚಲಿಸುವುದು ಆನಂದಗೋಸ್ಕರ ಅಲ್ಲ ಆದರೆ ತನ್ನ ಜೀವನದ ಅವಶ್ಯಕ ವಸ್ತುಗಳನ್ನು ಪಡೆಯಲು ಪ್ರಯತ್ನಿಸುತ್ತಾನೆ. ಒಬ್ಬ ಹಾವಾಡಿಗ ಹಾವನ್ನು ಜನರಿಗೆ ಮೋಜು ಮಾಡಲು ಇಡುವುದಿಲ್ಲ ಹೊರತು ತನ್ನ ಉದರವನ್ನು ಪೋಷಿಸಲು ಇಟ್ಟಿರುತ್ತಾನೆ. ಅದಕ್ಕಾಗಿ ಸ್ವತಂತ್ರ ಧೀರಸಿದ್ಧೇಶ್ವರ ನಾನು ನಿಮ್ಮನ್ನು ತಪಸನ್ನು ಮಾಡುತ್ತಿರುವುದು ನನ್ನ ಲಾಭಕ್ಕಾಗಿ ಅಲ್ಲ ಹೊರತು ನಿಮ್ಮನ್ನು ಸಂತೈಸುವಗೋಸ್ಕರವಾಗಿ.

"ವಚನೋದ್ಯಾನ" ಪದ್ಯ – ೧೨, ಪುಟ – ೨.

"ವಚನೋದ್ಯಾನ" ಪದ್ಯ – ೨೯, ಪುಟ – ೧೫.

ಡಾ. ಸಿದ್ದಯ್ಯಾ ಪುರಾಣಿಕ ಅವರು ತಮ್ಮ ವಚನಗಳಲ್ಲಿ ಆತ್ಮದ ಚರಿತ್ರೆ ಹಾಗೂ ಕಾರ್ಯವನ್ನೂ ವಿವರವಾಗಿ ವರ್ಣಿಸಿದ್ದಾರೆ. ಹಾಗೂ ಸಮಾಜದ ಮೇಲೆ ಬೀರುವ ಕೆಟ್ಟ ಪರಿಣಾಮಗಳನ್ನು ಹೋಗಲಾಡಿಸಲು ಈ ಕೃತಿಯ ಮುಖಾಂತರ ಮಾರ್ಗದರ್ಶನ ಮಾಡಿದ್ದಾರೆ. ಅದಕ್ಕಾಗಿ ಎಲ್ಲ ಮನುಜರು ಮಾನವೀಯತೆಯ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿ, ಜೀವನ ಸ್ವಾರ್ಥಕಪಡಿಸಿಕೊಳ್ಳಬೇಕು ಎಂದು ಹೇಳಿದ್ದಾರೆ.

೨.೩ ಸತ್ತಿ ವೆಂಕಪ್ಪನವರ ವಂಶ ರಹಸ್ಯ :

ಎ. ಎಸ್. ಕುಲಕರ್ಣಿಯವರು ಬರೆದ 'ಸತ್ತಿ ವೆಂಕಪ್ಪನವರ ವಂಶ ರಹಸ್ಯ' ಎಂಬ ವಂಶ ಚರಿತ್ರೆಯನ್ನು ಅಥಣಿಯ ಅನುಪಮ ಪ್ರಕಾಶನವು ಪ್ರಕಟಿಸಿದೆ.

ಭಾರತವು ಪುಣ್ಯಭೂಮಿ ಎಂದು ಧರ್ಮಕ್ಷೇತ್ರವೆಂದು ಜಗತ್ತಿನಲ್ಲಿ ಪ್ರಸಿದ್ಧವಾದ ದೇಶ. ಆ ಗುಣಗಳನ್ನು ಲಕ್ಷಣಗಳನ್ನು ಹೊಂದಿದೆ ಸತ್ತಿ ಗ್ರಾಮವು. ಕೃಷ್ಣಾನದಿಯು ಈ ಗ್ರಾಮವನ್ನು ನಿತ್ಯ ಶುದ್ಧಗೊಳಿಸುತ್ತದೆ. ಐದು ಸಾವಿರ ವರ್ಷದ ಇತಿಹಾಸವಿರುವ ಸತ್ತಿ ಗ್ರಾಮವು ಚಾಲುಕ್ಯರ ಕಾಲದಲ್ಲಿ ಮಹ್ವತದ ಧರ್ಮಕೇಂದ್ರವಾಗಿತ್ತು. ಈಗ ನೂರಾರು ವರ್ಷಗಳ ಹಿಂದೆ ಬಾಳ ಬೆಳಗಿದ ವ್ಯಕ್ತಿಗಳ ಹೆಸರು ಅವರವರ ಚಾರಿತ್ರ್ಯ ಕೇಳಿ ಅಭಿಮಾನ ಹೊಂದುತ್ತೇವೆ. ಐಹಿಕ ಸಂಪತ್ತಿ, ವೀರಸೇನಾನಿಗಳ ಸಾಹಸವೂ ಇಲ್ಲಿ ಬೆರಗುಗೊಳಿಸುತ್ತದೆ. ಹಳ್ಳಿ ಇದ್ದರೂ ಇದು ಇತಿಹಾಸ ನಿರ್ಮಾಣ ಮಾಡಿದೆ. ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಸ್ಫೂರ್ತಿದಾಯಕವಾಗಿದೆ. ಉತ್ತರಾದಿ ಮಠದ ಶ್ರೀಗಳು ಈಗ ಮೂರುನೂರು ವರ್ಷಗಳ ಹಿಂದೆ ಇಲ್ಲಿ ದಿಗ್ವಿಜಯ ಮಾಡಿದರು. ಈಗಲೂ ಸತ್ತಿ ಗ್ರಾಮವೂ ಶ್ರೀಗಳಿಗೆ ತವರು ಮನೆಯೆಂದು ಹೇಳುವುದು ಭಕ್ತರಿಗೆ ಅದೊಂದು ಅವರ ವಿಶೇಷ ಅನುಗ್ರಹವಾಗಿದೆ.

ದೇಶವಿದೇಶಗಳಲ್ಲಿ ಈ ಮನೆತನದ ಈಗಿನವರು ಕೀರ್ತಿವಂತರಾಗಿದ್ದಾರೆ. ಹೆಣ್ಣುಮಕ್ಕಳು ಈ ಮನೆತನದ ರಾಯಭಾರಿಗಳಾಗಿ ಇಲ್ಲಿಯ ಉಚ್ಛಸಂಸ್ಕೃತಿ ತೋರಿಸುತ್ತಿದ್ದಾರೆ. ಈ ವಂಶ ದೇವರ ಅನುಗ್ರಹದಿಂದ ಒಬ್ಬ ವೆಂಕಪ್ಪವೆಂಬುವ ಪುತ್ರನನ್ನು ಪಡೆದಿದ್ದರಿಂದಲೇ ಈ ವಂಶ ಇಂದಿಗೂ ವಿಶಾಲ ವೃಕ್ಷವಾಗಿ ಬೆಳೆದು ನಿಂತಿದೆ. ಒಬ್ಬೊಬ್ಬರ ಚರಿತ್ರೆ ಮಹತ್ವಪೂರ್ಣವಾಗಿದೆ. ನೂರಾರು ಚಿತ್ರಗಳಿಂದ ಕೂಡಿದ ನಕ್ಷತ್ರಗಳ ಸಮೂಹವಾಗಿದೆ. ಅವರೆಲ್ಲರ ಮಹಿಮೆಯನ್ನು ಈ ಕೃತಿಯಲ್ಲಿ ಹೇಳಲಾಗಿದೆ.

ಈ ವಂಶದ ರಹಸ್ಯವೇನು ಎಂದು ತಿಳಿದರೆ ಅದು ಮುಂದಿನ ಜನಾಂಗಕ್ಕೆ ಸ್ಫೂರ್ತಿದಾಯಕವೂ, ನಂದಾದೀಪವೂ ಆಗಬಹುದು. ಸತ್ತಿ ಗ್ರಾಮವೂ ಗಡಿನಾಡಿನ ಸೀಮೆಯಲ್ಲಿದ್ದು ಎರಡೂ ಭಾಗಗಳಿಗೂ ಬಾಂಧವ್ಯದ ಸೇತುವೆಯಾಗಿದೆ. ವಿಶ್ವ ಕುಟುಂಬದ ಶಕ್ತಿ ಹೊಂದಿದೆ.

"ಸತ್ತಿ ವೆಂಕಪ್ಪನವರ ವಂಶ ರಹಸ್ಯ: ಲೇ : ಎ. ಎಸ್. ಕುಲಕರ್ಣಿ ೧೯೯೦ರಲ್ಲಿ ಅನುಪಮ ಪ್ರಕಾಶನ ಅಥಣಿ.

ಈ ಕೃತಿಯು ವಾಸ್ತವತೆಯ ವಸ್ತುವಿನಿಂದ ಕೂಡಿದೆ. ಓದುಗರಿಗೆ ಆನಂದವನ್ನು ನೀಡುವುದು ಸತ್ಯವೇ ಸಾಹಿತ್ಯ ಅನ್ನುವ ಮಾತಿನ ಮರ್ಮ ಈ ಕೃತಿಯಲ್ಲಿದೆ.

೨.೪ ಶ್ರೀ ಮುರುಘೇಂದ್ರ ಮಹಾಶಿವಯೋಗಿ :

ದಿ. ಬಸವಣೆಪ್ಪಾ ಷಣ್ಮುಖಪ್ಪಾ ಕಲ್ಯಾಣಿ ಅವರು ಬರೆದ "ಶ್ರೀ ಮುರುಘೇಂದ್ರ ಮಹಾಶಿವಯೋಗಿ"ಗಳ ಜೀವನ ಚರಿತ್ರೆಯನ್ನು ಅನುಮಪ ಪ್ರಕಾಶನ ಅಥಣಿಯವರು ಪ್ರಕಟಿಸಿದ್ದಾರೆ.

ಶ್ರೀ ಮುರುಘೇಂದ್ರ ಮಹಾಶಿವಯೋಗಿ ಅವರ ಜೀವನ ಚರಿತ್ರೆಯನ್ನು ವರ್ಣಿಸತಕ್ಕಂತ ಯೋಗ್ಯತೆ ನಮ್ಮಲ್ಲಿ ಇಲ್ಲ ಆದರೂ ನಾನು ತಿಳಿದುಕೊಂಡಂತಾ ಅಲ್ಪ ಜ್ಞಾನದಿಂದ ಮಹಾತ್ಮರ ಜೀವನವನ್ನು ಪ್ರಸ್ತುತಪಡಿಸಿದ್ದಾರೆ. ಈ ಮುಂದುವರೆದ ಭೌತಿಕ ಜಗತ್ತಿನಲ್ಲಿ ಮಾನವನಲ್ಲಿ ಮಾನವೀಯತೆಯ ಉದ್ಭವ ಹಾಗೂ ಆಧ್ಯಾತ್ಮದ ಹಸಿಯನ್ನು ಮಹಾತ್ಮನು ಗಡಿಭಾಗದಲ್ಲಿ ಮೂಡಿಸಿದ್ದಾರೆ.

ಒಳ್ಳೇಯ ಕಾರ್ಯದಿಂದ ಆತ್ಮವು ಪವಿತ್ರಗೊಳ್ಳುತ್ತದೆ. ಜಾಗತಿಕ ಲೋಭಗಳನ್ನು ಮರೆತು ಆಧ್ಯಾತ್ಮದ ಕಡೆಗೆ ಚಿಂತಿಸಿ ಮತ್ತು ಪಾಲನೆ ಮಾಡಿ ಜೀವನವನ್ನು ಸಾರ್ಥಕಗೊಳಿಸಬೇಕೆಂದು ಮಹಾತ್ಮರು ಹೇಳಿದ್ದಾರೆ. ದೇವರು ಪ್ರತಿಯೊಬ್ಬರಲ್ಲಿಯೂ ವಾಸವಾಗಿದ್ದಾನೆ. ಆದರೆ ಅವನನ್ನು ಕಂಡುಕೊಳ್ಳುವ ಯೋಗ್ಯತೆ ನಮ್ಮಲ್ಲಿರಬೇಕು. ದೇವರು ತನ್ನ ಕಲ್ಪನೆಯ ಮುಖಾಂತರ ಮಾನವನನ್ನು ಸೃಷ್ಟಿಸಿದ್ದಾನೆ. ಅದಕ್ಕಾಗಿ ನಾವೆಲ್ಲರೂ ಆ ದೇವರ ದಾಸರು. ದರ್ಶನ, ಪ್ರಾರ್ಥನೆ ಭಜನೆ, ವರ್ಣನೆ, ತಪಸ್ಸು ಹಾಗೂ ಶರಣಾಗತಿ ಇವೆಲ್ಲವೂ ದೇವರನ್ನು ಪೂಜಿಸುವ ಹಂತಗಳು ಅನುಸರಿಸಿದರೆ, ಈ ಹಂತಗಳನ್ನು ಮಾನವ ಸಾರ್ವತ್ರಿಕ ಅಂತರಾತ್ಮದ ಶಕ್ತಿಯನ್ನು ಪಡೆದುಕೊಳ್ಳುತ್ತಾನೆ. ಅದುವೇ ಮಾನವ ಜೀವನದ ದೈವತ್ವಕ್ಕೆ ಪಾತ್ರವಾಗುತ್ತದೆ.

ಮಹರ್ಷಿ ಅರವಿಂದರು ಹೇಳಿದಂತೆ "ಮಾನವ ದೇವರಲ್ಲ ಆದರೆ ಪ್ರತಿಯೊಬ್ಬ ಮಾನವನಲ್ಲಿ ದೇವರು ವಾಸಿಸಿದ್ದಾನೆ." ಈ ವಿಚಾರವನ್ನು ಮುರುಘೇಂದ್ರ ಶಿವಯೋಗಿಗಳು ೧೯ನೇ ಶತಮಾನದಲ್ಲಿ ಜಗತ್ತಿಗೆ ಸಾರಿ ದೈವತ್ವವನ್ನು ಪಡೆದುಕೊಳ್ಳುವಂತೆ ಸೂಚಿಸಿದರು.

ಭೂಮಿ ಸಮಸ್ತ ಜೀವಿಗಳು ದೇವರಿಂದ ಸೃಷ್ಟಿಯಾಗಿವೆ. ಅದಕ್ಕಾಗಿ ಆ ದೇವರು ಸೂಚಿಸಿದ ಮಾರ್ಗದಲ್ಲಿ ನಾವೆಲ್ಲರೂ ಮುನ್ನಡೆಯಬೇಕಾಗಿದೆ. ಶ್ರೀ ಮುರುಘೇಂದ್ರ ಶಿವಯೋಗಿಗಳು ಯಾವುದೇ ಸಾಹಿತ್ಯಿಕ ಪುಸ್ತಕವನ್ನು ಬರೆಯಲಿಲ್ಲ ಹಾಗೂ ಯಾವುದೇ ಆಧ್ಯಾತ್ಮಿಕ ಭಾಷಣ ಮಾಡಲಿಲ್ಲಾ ಆದರೂ ತಮ್ಮ ತತ್ವ-ಸಿದ್ಧಾಂತಗಳ ಮುಖಾಂತರ ಜಗತ್ತಿಗೆ ಒಳ್ಳೇಯ ಆಚಾರ-ವಿಚಾರಗಳನ್ನು ಬೋಧಿಸಿದ್ದಾರೆ. ತನ್ನಲ್ಲಿ ದೈವತ್ವವನ್ನು ಕಂಡುಕೊಂಡ ನಂತರ ಲಿಂಗಪೂಜೆ ಹಾಗೂ

ನಡೆವಂತೆ ನುಡಿ ಎಂಬ ಸದಾಚಾರವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಮಹಾತ್ಮರು ಸೂಚಿಸಿದ್ದಾರೆ.

ಸದಾಚಾರ ಮಾನವನ ಆತ್ಮವನ್ನು ಶುದ್ಧಗೊಳಿಸುತ್ತದೆ ಹಾಗೂ ಪ್ರತಿಯೊಂದು ವ್ಯವಹಾರಗಳಲ್ಲಿ ಆದರ್ಶ ಗುಣಗಳನ್ನು ವ್ಯಕ್ತಪಡಿಸುತ್ತದೆ. ಭೌತಿಕ ಜಗತ್ತಿನ ಬಗ್ಗೆ ವಿಚಾರ ಮಾಡುವಾಗ ಮಾನವ ತನ್ನಲ್ಲಿ ಕಲ್ಪನೆ ಮುಖಾಂತರ ದೇವರನ್ನು ಕಂಡುಕೊಳ್ಳಬೇಕು. ಕಾರಣ ನಾವು ಪ್ರತಿಯೊಬ್ಬರು ದೇವರ ದಾಸರು. ಇಂತಹ ಮಹಾತ್ಮರು ಅಥಣಿ ಸಮೀಪದ ನದಿ ಇಂಗಳಗಾಂವ ಗ್ರಾಮದಲ್ಲಿ ಶ್ರೀಮತಿ ನೀಲಮ್ಮ ಹಾಗೂ ರಾಚಯ್ಯನವರ ಮಗುವಾಗಿ ಜನಿಸಿದರು. ಪ್ರಾರಂಭದಿಂದಲೇ ಅವರ ಮುಖ ತೇಜವನ್ನು ಕಂಡು ಎಲ್ಲರೂ ಇವರೊಬ್ಬ ಮಹಾತ್ಮರಾಗುತ್ತಾರೆ ಎಂದು ಅವರ ಬಾಲ್ಯದಲ್ಲಿಯೇ ಭಾವಿಸಿದ್ದರು.

ತನ್ನ ಬಾಲ್ಯಾವಸ್ಥೆಯ ಐದನೆಯ ವರ್ಷದಲ್ಲಿ ಗುರುಲಿಂಗದೀಕ್ಷೆಯನ್ನು ಪಡೆದುಕೊಂಡು ಗುರು ಸೇವೆಯೇ ಮುಖ್ಯ ಎಂದು ಭಾವಿಸಿದರು. ಆಧ್ಯಾತ್ಮದ ವಿಷಯದಲ್ಲಿ ಇವರಿಗೆ ಬಾಲ್ಯದಿಂದಲೇ ಆಸಕ್ತಿ ಇತ್ತು. ಕಾರಣ ಇವರ ಎರಡನೆಯ ವಿದ್ಯಾಗುರು ಮುರಿಗೆಪ್ಪಾ ಸ್ವಾಮೀಜಿಯವರಿಂದ ವೇದ, ಉಪನಿಷತ್ ಭಗವದ್ಗೀತಾ ಮತ್ತು ಶಾಸ್ತ್ರಗಳ ಜ್ಞಾನವನ್ನು ಪಡೆದುಕೊಂಡರು. ತದನಂತರದ ದಿನಗಳಲ್ಲಿ ಜ್ಞಾನ ಮತ್ತು ತಪಸ್ಸಿನ ಮುಖಾಂತರ ಪವಿತ್ರವಾದ ಆತ್ಮ ಹಾಗೂ ನಡತೆ ಇದರಿಂದ ದೀಕ್ಷೆಯನ್ನು ಪಡೆದುಕೊಂಡು ಜೀವ ಮುಕ್ತಿಯನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ಜಗತ್ತಿಗೆ ಸಾರಿದರು.

ಇತ್ತಿಚೇನ ದಿನಗಳಲ್ಲಿ ಲಕ್ಷಾಂತರ ಭಕ್ತರು ಅಥಣಿಯ ಶ್ರೀ ಶಿವಯೋಗಿ ಮಠಕ್ಕೆ ದರ್ಶನ ನೀಡಿ ತಾವು ಪವಿತ್ರರಾದೆವು. ಎಂಬ ಭಾವನೆ ಭಕ್ತರಲ್ಲಿ ಮೂಡುತ್ತದೆ. ಮಹಾತ್ಮರು ಪ್ರಾರಂಭಿಸಿದ ಆಧ್ಯಾತ್ಮದ ಮಾರ್ಗವನ್ನು ತಮ್ಮ ಜೀವನದಲ್ಲಿ ಅಳವಡಿಸಿ ಎಷ್ಟೋ ಭಕ್ತಾಧಿಗಳು ಆನಂದದಿಂದ ಜೀವನವನ್ನು ಕಳೆಯುತ್ತಿದ್ದಾರೆ. ಶ್ರೀ ಮಹಾಶಿವಯೋಗಿ ಶಿವಯೋಗಿಗಳು ಜಗತ್ತಿಗೆ ಆಧ್ಯಾತ್ಮದ ಅಮೂಲ್ಯವಾದ ಕಾಣಿಕೆ ನೀಡಿ ಕರ್ನಾಟಕದ ಗಡಿಭಾಗ ಅಷ್ಟೇ ಅಲ್ಲ ಇಡಿ ಮನುಕುಲಕವನ್ನು ಪವಿತ್ರಗೊಳಿಸಿದ್ದಾರೆ. ಅವರ ಬದುಕಿನ ಕ್ರಮ ಭಕ್ತಿಯ ಪರಾಕಾಷ್ಠತೆ ಇದರಲ್ಲಿ ಸೊಗಸಾಗಿ ನಿರೂಪಣೆಯಾಗಿದೆ.

"ಶ್ರೀ ಮುರುಘೇಂದ್ರ ಮಹಾಶಿವಯೋಗಿ" ಲೇ : ದಿ. ಬಸವಣೆಪ್ಪಾ ಕಲ್ಯಾಣಿ ೨೦೦೬ರಲ್ಲಿ ಅನುಪಮ ಪ್ರಕಾಶನ ಅಥಣಿ.

****

ಅಧ್ಯಾಯ – ಏಳು :

ಸಮಾರೋಪ

ಅಧ್ಯಾಯ – ಏಳು :

ಸಮಾರೋಪ

ಈವರೆಗೆ ಪರಿಶೀಲಿಸಿದ ಆರು ಅಧ್ಯಾಯಗಳು "ಅನುಪಮ ಪ್ರಕಾಶನ"ವು ಯಾವ ರೀತಿಯಾಗಿ ಅಸ್ತಿತ್ವಕ್ಕೆ ಬಂದಿತು. ಅದರ ಧ್ಯೇಯ ಧೋರಣೆ, ಸಾಧನೆಗಳನ್ನು ವಿವರಿಸುತ್ತದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ಧೇಶ, ಸ್ವರೂಪ ಮತ್ತು ವ್ಯಾಪ್ತಿಯಿದೆ. ಅಧ್ಯಾಯ ಎರಡರಲ್ಲಿ ಅನುಪಮ ಪ್ರಕಾಶನವು ನಡೆದು ಬಂದ ದಾರಿಯ ಸಂಪೂರ್ಣವಾದ ಮಾಹಿತಿಯನ್ನು ನೀಡಲಾಗಿದೆ. ಅದರ ಹುಟ್ಟು ಬೆಳವಣಿಗೆಯು ಯಾವ ರೀತಿಯಿಂದಾಯಿತು ಎಂಬುದನ್ನು ವಿಶ್ಲೇಷಿಸಲಾಯಿತು. ಲೋಕಾರ್ಪಣೆ ಮಾಡಿದ ಕೃತಿಗಳು, ಅವುಗಳ ಮಹತ್ವ, ಕೃತಿಯ ಸ್ಥೂಲ ಪರಿಚಯವನ್ನು ಕೊಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಅನುಪಮ ಪ್ರಕಾಶನದ ಪದ್ಯ ಸಾಹಿತ್ಯವನ್ನು ವಿವೇಚಿಸಲಾಗಿದೆ. ಇಲ್ಲಿ ಅವಲೋಕಿಸಲಾದ ಪ್ರಮುಖವಾದ ಕವನ ಸಂಕಲನಗಳೆಂದರೆ 'ಅಹಿಂಸೆಯ ವಿಜಯ', 'ಬಾಳ ಸಂಗಾತಿ', 'ಜೈನ ಜನಪದ ಹಾಡುಗಳು', 'ನನ್ನ ಧ್ವನಿ', 'ಸ್ಮೃತಿಗಂಧ'ಗಳ ಕುರಿತು ಸಂಕ್ಷಿಪ್ತವಾಗಿ ಮಾಹಿತಿಯನ್ನು ತಿಳಿಯಬಹುದು.

ಪ್ರಕಾಶನವು ಪ್ರಕಟಿಸುವ ಪದ್ಯಸಾಹಿತ್ಯವೂ ಎಂತಹ ಮೌಲ್ಯಗಳನ್ನು ಸಮಾಜಕ್ಕೆ ನೀಡಿದ್ದವು ಎಂಬುದನ್ನು ಕಾಣಬಹುದು. ಅದೇ ರೀತಿಯಲ್ಲಿ ಅನುಪಮ ಪ್ರಕಾಶನದ ಗದ್ಯ ಸಾಹಿತ್ಯದಲ್ಲಿ ಸೃಜನಶೀಲ ಸಾಹಿತ್ಯ ಮತ್ತು ಸೃಜನೇತರ ಸಾಹಿತ್ಯವಾಗಿ ಎರಡು ಭಾಗಗಳನ್ನಾಗಿ ಮಾಡಿಕೊಂಡು ಅವಲೋಕಿಸಲಾಗಿದೆ. ಹಾಗೆಯೇ ಅಧ್ಯಾಯ ಆರರಲ್ಲಿ ಇತರ ಗ್ರಂಥಗಳನ್ನು ವಿಶ್ಲೇಷಣೆಗೆ ತೆಗೆದುಕೊಂಡು ಅಲ್ಲಿರುವ ಪ್ರಮುಖ ಮೌಲ್ಯಗಳನ್ನು ಕುರಿತು ತಿಳಿಸಲಾಗಿದೆ.

ಇದುವರೆಗೆ ಲಭ್ಯವಾದ ಪುಸ್ತಕಗಳ ಬಗ್ಗೆ ಮಾಹಿತಿಯನ್ನು ನೀಡಲು ಪ್ರಾಮಾಣಿಕವಾಗಿ ಪ್ರಯತ್ನಪಟ್ಟಿದ್ದೇನೆ. ಇಲ್ಲಿ ಪ್ರಕಟಿಸಿರುವ ಬಹುಪಾಲು ಕೃತಿಯೂ ಸಮಾಜದಲ್ಲಿನ ಜನರ ಮನಸ್ಸನ್ನು

ಬದಲಾವಣೆ ಮಾಡುವಲ್ಲಿ ಭಾಗಶಃ ಸಹಾಯಕವಾಗಿದೆ. ಸಮಾಜದಲ್ಲಿನ ಮೌಢ್ಯತೆಯನ್ನು ಹೋಗಲಾಡಿಸಲು ಅನುಪಮ ಪ್ರಕಾಶನದ ಪಾತ್ರ ಹಿರಿದಾಗಿದೆ. ಪದ್ಯ ಸಾಹಿತ್ಯದಲ್ಲಿ ಕನ್ನಡ ಸೃಜನಶೀಲ ಸಾಹಿತ್ಯದ ಎತ್ತರ ಬಿತ್ತರಗಳು ದರ್ಶನವಾದರೆ ಗದ್ಯಸಾಹಿತ್ಯದ ವಸ್ತುವಿನ ಆಳ, ವಿಷಯದ ವೈವಿಧ್ಯತೆಗಳು ಪರಿಚಯವಾಗುತ್ತವೆ. ಗಡಿನಾಡಿನ ಪ್ರಕಾಶನ ಸಂಸ್ಥೆಯೊಂದು ಹೇಗೆ ಕನ್ನಡ ಕಟ್ಟಲು ಪ್ರಾಮಾಣಿಕವಾಗಿ ಪ್ರಯತ್ನಿಸಿದೆ ಎಂಬುದು ಮನವರಿಕೆಯಾಗುತ್ತದೆ.

ಗಡಿನಾಡಿನಲ್ಲಿ ತಲೆಯೆತ್ತಿದ ಅನುಪಮ ಪ್ರಕಾಶನವು ಕನ್ನಡ ನಾಡು-ನುಡಿ, ಭಾಷೆ, ನೆಲ-ಜಲವನ್ನು ಸುರಕ್ಷಿಸಲು ನಾಡವರ ಹಿತಾಸಕ್ತಿಗಳನ್ನು ಕಾಪಾಡುವ ಕೈಂಕರ್ಯ ಕೈಗೊಂಡಿದೆ. ಗಡಿನಾಡಿನ ಜನರ ಆಶೋತ್ತರಗಳಿಗೆ ಸ್ಪಂಧಿಸುತ್ತಾ ಬಂದಿದೆ. ಪ್ರಕಾಶನ ಸಂಸ್ಥೆ ಆರಂಭಿಸುವುದು ಮುಖ್ಯವಲ್ಲ. ಅದನ್ನು ಯಶಸ್ವಿಯಾಗಿ ಮುನ್ನಡೆಸುವುದು ಬಹಳ ಜವಾಬ್ದಾರಿಯ ಕಾಯಕವಾಗಿದೆ. ಆರಂಭದಲ್ಲಿ ಘೋಷಿಸಿದ ಧ್ಯೇಯ-ಉದ್ದೇಶಗಳನ್ನು ಕೊನೆಯವರೆಗೆ ನಿಭಾಯಿಸಿಕೊಂಡು ಹೋಗುವುದು ಕಷ್ಟಸಾಧ್ಯ ಆದರೆ ಅಥಣಿಯ ಅನುಪಮ ಪ್ರಕಾಶನವು ತನ್ನ ಬದ್ಧತೆಯನ್ನು ಪ್ರಾಮಾಣಿಕತೆಯನ್ನು ಪ್ರದರ್ಶಿಸಿದೆ. ಪ್ರೊ. ಎಸ್. ಬಿ. ಉತ್ನಾಳ ಅವರು ಒಂದು ವ್ರತದಂತೆ ಪ್ರಕಾಶನ ಸಂಸ್ಥೆಯನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಅಖಂಡ ೨೫ ವರ್ಷದವರೆಗೆ ಪ್ರಕಾಶನ ಸಂಸ್ಥೆಯನ್ನು ನಡೆಸಿಕೊಂಡು ಬರುವುದು ಸಾಮಾನ್ಯ ಸಾಧನೆಯಲ್ಲ. ಪ್ರೊ. ಉತ್ನಾಳ ಅವರು ಅಸಾಮಾನ್ಯವಾದುದನ್ನು ಸಾಧಿಸಿದ್ದರೆ, ಅಥಣಿಯ ಅನುಪಮ ಪ್ರಕಾಶನವು ಗಡಿನಾಡಿನಲ್ಲಿ ಕನ್ನಡದ ಶಕ್ತಿಕೇಂದ್ರವನ್ನಾಗಿ ರೂಪಿಸಿದ್ದು ಪ್ರಶಂಸನೀಯವಾಗಿದೆ. ಇದರ ಅಧ್ಯಯನವೇ ಈ ನಿಬಂಧದ ಆಶಯವಾಗಿದೆ.

✡✡✡✡✡

ಅನುಬಂಧಗಳು :

೧. ಅನುಪಮ ಪ್ರಕಾಶನದ ಪ್ರಕಟಣೆಗಳು

೨. ಪರಾಮರ್ಶನ ಗ್ರಂಥಗಳು

೩. ಛಾಯಾಚಿತ್ರಗಳು

೪. ಪ್ರಶಸ್ತಿ ಪತ್ರಗಳು

ಅನುಬಂಧಗಳು

೧) **ಅನುಪಮ ಪ್ರಕಾಶನದ ಪ್ರಕಟಣೆಗಳು**

೨) **ಪರಾಮರ್ಶನ ಗ್ರಂಥಗಳು**

೧) ಅನುಪಮ ಪ್ರಕಾಶನದ ಪ್ರಕಟಣೆಗಳು

೧)	ಶರಣ ಸೌರಭ	–	ಪ್ರೊ. ಎಸ್. ಬಿ. ಉತ್ನಾಳ	೧೯೮೭
೨)	ಶಿವಯೋಗಿ ಶಿವಲೀಲೆ	–	ಶ್ರೀ ಎಮ್. ಎಸ್. ಆಣೆಪ್ಪನವರ	೧೯೮೯
೩)	ಷಹೀದೆ ಕರ್ಬಲಾ	–	ಶ್ರೀ ಗ. ಶಿ. ಹುರಳಿ	೧೯೯೦
೪)	ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ	–	ಪ್ರೊ. ಎಸ್. ಬಿ. ಉತ್ನಾಳ	೧೯೯೦
೫)	ಅಥಣಿಶ್ರೀ ಮುರುಘೇಂದ್ರ ಶಿವಯೋಗಿಗಳವರ ಚರಿತ್ರೆ	–	ಶ್ರೀ ಹಿರೇಮಠದ ವೇ ರುದ್ರಾಶಾಸ್ತ್ರಿ, ಪ್ರೊ. ಎಸ್. ಬಿ. ಉತ್ನಾಳ	೧೯೯೦
೬)	ರುದ್ರಪುತ್ರ ವೀರಭದ್ರ	–	ಶ್ರೀ ಎಮ್. ಎಸ್. ಆಣೆಪ್ಪನವರ	೧೯೯೦
೭)	ಹಾಲ್ದೆನೆ	–	ಡಾ. ಸಿದ್ದಯ್ಯ ಪುರಾಣಿಕ	೧೯೯೦
೮)	ಸತ್ತಿವೆಂಕಟಪ್ಪನವರ ವಂಶ ರಹಸ್ಯ	–	ಶ್ರೀ ಎ. ಎಸ್. ಕುಲಕರ್ಣಿ	೧೯೯೦
೯)	ಶಾಂತ ಸಾಗರ	–	ಶ್ರೀಮತಿ ಲೀಲಾ ಕಲಕೋಟಿ	೧೯೯೦
೧೦)	ಜೈನ ಜನಪದ ಹಾಡುಗಳು	–	ಪ್ರೊ. ಎಸ್. ಬಿ. ಉತ್ನಾಳ	೧೯೯೦
೧೧)	ನನ್ನ ಧ್ವನಿ	–	ಶ್ರೀಮತಿ ಲೀಲಾ ಕಲಕೋಟಿ	೧೯೯೦
೧೨)	ರುದ್ರಪುತ್ರ ಅಣಿವೀರಭದ್ರ	–	ಶ್ರೀ ಎಮ್. ಎಸ್. ಆಣೆಪ್ಪನವರ	೧೯೯೦
೧೩)	ಮರುಳಶಂಕರ ದೇವರು	–	ಶ್ರೀ ಎಮ್. ಎಸ್. ಆಣೆಪ್ಪನವರ	೧೯೯೦
೧೪)	ಕರ್ನಾಟಕ ಕೇಸರಿ	–	ಶ್ರೀ ಲಕ್ಷ್ಮಣ. ಎಸ್. ಬಳ್ಳೊಳ್ಳಿ	೧೯೯೧
೧೫)	ಮೈಲಾರ ದೇವರ ದಿವ್ಯ ಕ್ಷೇತ್ರಗಳು	–	ಡಾ. ಎಂ. ಬಿ. ನೇಗಿನಹಾಳ	೧೯೯೧
೧೬)	ವಚನೋದ್ಯಾನ	–	ಡಾ. ಸಿದ್ದಯ್ಯ ಪುರಾಣಿಕ	೧೯೯೧
೧೭)	ಬಸವಸ್ತೋತ್ರ	–	ಶರಣ ಶ್ರೀ ಸಿದ್ದರಾಮಣ್ಣನವರು	೧೯೯೧
೧೮)	ಧನ್ವಂತರಿ ಹಾಡು	–	ಡಾ. ವಸಂತ ಕುಲಕರ್ಣಿ	೧೯೯೨
೧೯)	ಅರವಳ್ಳಿ ಮಲ್ಲಿಗೆ	–	ಶ್ರೀ ಲಕ್ಷ್ಮಣ. ಎನ್. ಬಳ್ಳೊಳ್ಳಿ	೧೯೯೨
೨೦)	ಶ್ರೀ ಬಿಸಿಲಸಿದ್ಧೇಶ್ವರ ಲೀಲೆ	–	ಶ್ರೀ ಲಕ್ಷ್ಮಣ. ಎನ್. ಬಳ್ಳೊಳ್ಳಿ	೧೯೯೨
೨೧)	ಅಹಿಂಸೆಯ ವಿಜಯ	–	ಶ್ರೀ ವೀ. ಅ. ಸರಗಣಾಚಾರಿ	೧೯೯೨
೨೨)	ದಾಸ ಭಕ್ತಿ	–	ಪ್ರೊ. ಎಸ್. ಬಿ. ಉತ್ನಾಳ	೧೯೯೨

೨೩) ಶರಣ ದಾಸರ ಭಕ್ತಿ – ಪ್ರೊ. ಎಸ್. ಬಿ. ಉತ್ನಾಳ ೧೯೯೨

೨೪) ಗುಡ್ಡಾಪೂರ ದಾನಮ್ಮ – ಪ್ರೊ. ಎಸ್. ಬಿ. ಉತ್ನಾಳ ೧೯೯೪

೨೫) ಗ್ರಾಮ ಸ್ವರಾಜ್ಯ – ಶ್ರೀ ಶಿವದೇವ ಒಡೆಯರ ೧೯೯೪

೨೬) ಡಾ. ಎನ್. ಎಸ್. ಬಿರಾದಾರ – ಡಾ. ದೇವೇಂದ್ರ ಕುಮಾರ ಹಕಾರಿ ೧೯೯೭

೨೭) ಶ್ರೀ ಮದಥಣಿ ಮುರುಘೇಂದ್ರ ಶಿವಯೋಗಿಗಳು – ಪ್ರೊ. ಎಸ್. ಬಿ. ಉತ್ನಾಳ ೧೯೯೭

೨೮) ಲಚ್ಯಾಣ ಶ್ರೀ ಸಿದ್ಧಲಿಂಗ ಮಹಾರಾಜರು – ಪ್ರೊ. ಎಸ್. ಬಿ. ಉತ್ನಾಳ ೧೯೯೭

೨೯) ಜನತೆಯ ಶಿವಶಕ್ತಿ – ಶ್ರೀ ಲಕ್ಷ್ಮಣ. ಎನ್. ಬಳ್ಳೊಳ್ಳಿ ೧೯೯೮

೩೦) ಶಿವಶರಣ ಮಹಾಪ್ರಸಾದಿ ಡೋಹರ ಕಕ್ಕಯ್ಯ– ಶ್ರೀ ಗುಂಬೀಶಂ ೨೦೦೧

೩೧) ಕಾರ್ಗಿಲ್ ಕದನ ವೀರಗಾಥೆ – ಶ್ರೀ ವಾಯ್. ಸಿ. ಬನ್ನಪ್ಪಗೋಳ ೨೦೦೧

೩೨) ದಳವಾಯಿ – ಪ್ರೊ. ಎಸ್. ಬಿ. ಉತ್ನಾಳ ೨೦೦೨

೩೩) ಬಾಳ ಸಂಗಾತಿ – ಕುಮಾರಿ ರಶ್ಮಿ. ದು. ಮಾಚಕನೂರ ೨೦೦೨

೩೪) ಗಾಲಿಬ್ ಗಜಲ್ – ಶ್ರೀ ವಿಜಯ. ಎಸ್. ಕರೋಲಿ ೨೦೦೬

೩೫) ಸ್ಮೃತಿಗಂಧ – ಶ್ರೀ ವಿಜಯ. ಎಸ್. ಕರೋಲಿ ೨೦೦೬

೩೬) ಭಕ್ತಾಮರ ಸ್ತೋತ್ರ – ಶ್ರೀ ವಿಜಯ. ಎಸ್. ಕರೋಲಿ ೨೦೦೬

೩೭) ಮೂರು ರೇಡಿಯೋ ರೂಪಕಗಳು – ಶ್ರೀ ಆಯ್. ಬಿ. ಹಿರೇಮಠ ೨೦೦೬

೩೮) ಶ್ರೀ ಮುರುಘೇಂದ್ರ ಮಹಾಶಿವಯೋಗಿಗಳು– ದಿ. ಶ್ರೀ ಬಿ. ಎಸ್. ಕಲ್ಯಾಣಿ ೨೦೦೬

೩೯) ಖರೇ ಖರೇ ಸಂಗ್ಯಾಬಾಳ್ಯಾ – ಡಾ. ಅ. ರಾ. ಯಾರ್ದಿ ೨೦೦೮

೪೦) ಕುಡುಒಕ್ಕಲಿಗರು ಒಂದು ಕೈಪಿಡಿ – ಪ್ರೊ. ಸಿದ್ದಣ್ಣ. ಬಿ. ಉತ್ನಾಳ ೨೦೦೯

೪೧) ಕುಡುಒಕ್ಕಲಿಗರು – ಪ್ರೊ. ಸಿದ್ದಣ್ಣ. ಬಿ. ಉತ್ನಾಳ ೨೦೧೨

ಪರಾಮರ್ಶನ ಗ್ರಂಥಗಳು

೧	ಶಾಸನ ಮತ್ತು ಗದ್ಯ	ಹು. ಕಾ. ಜಯದೇವ	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು	೧೯೭೫
೨	ಬೆಳಗಾವಿ ಜಿಲ್ಲೆ ದರ್ಶನ	ಕೃಷ್ಣಮೂರ್ತಿ ಪುರಾಣಿಕ	ಬೆಂಗಳೂರು	೧೯೭೭
೩	ಕರ್ನಾಟಕ ಶಾಸನ ಪದ್ಯ ಮಂಜರಿ	ಆರ್. ನರಸಿಂಹಾಚಾರ್.	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು	೧೯೭೭
೪	ಕನ್ನಡ ವಿಶ್ವಕೋಶ ಸಂ :	ಎಚ್. ತಿಪ್ಪೇರುದ್ರಸ್ವಾಮಿ.	ಮೈಸೂರು	೧೯೭೯
೫	ಸಂಶೋಧನಾ ತರಂಗ–೨	ಡಾ. ಎಂ ಚಿದಾನಂದ ಮೂರ್ತಿ	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು	೧೯೮೫
೬	ವಿಮೋಚನಾ ಜ್ಯೋತಿ	ಶ್ರೀ ವ್ಹಿ. ಎಸ್. ಮನವಾಡೆ	ವಿಮೋಚನಾ ಸಂಘದ ಪ್ರಸಾರಂಗ, ಅಥಣಿ	೧೯೮೭
೭	ಬೆಳಗಾವಿ ಜಿಲ್ಲೆ ಮಾರ್ಗದರ್ಶಿ	ಮನೋಜ ಪಾಟೀಲ	ಪವನ ಪ್ರಕಾಶನ ಟಿಳಕವಾಡಿ	೧೯೮೭
೮	ಸಂಶೋಧನಾ ಸ್ವರೂಪ	ಬಿ. ವಿ. ಶಿರೂರ	ಅನ್ನಪೂರ್ಣ ಪ್ರಕಾಶನ ಹುಬ್ಬಳ್ಳಿ	೧೯೯೨
೯	ವಚನ ಸನ್ನಿಧಿ	ಚೆನ್ನಕ್ಕ ಪಾವಟೆ	ಧಾರವಾಡ	೧೯೯೩
೧೦	ಶರಣರ ಆಂದೋಲನ ಹಾಗೂ ಹೊಸ ಸಮಾಜದ ಪರಿಕಲ್ಪನೆ	ಡಾ. ಎಂ. ಬಿ. ಹೂಗಾರ	ವಿಮೋಚನಾ ಸಂಘದ ಪ್ರಸಾರಂಗ, ಅಥಣಿ	೧೯೯೫
೧೧	ಹೊಸಗನ್ನಡ ಸಾಹಿತ್ಯ ಚರಿತ್ರೆ	ಪ್ರೊ. ಎಲ್. ಎಸ್. ಶೇಷಗಿರಿರಾವ್	ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು	೧೯೯೬
೧೨	ಮಹಾಮಾರ್ಗ ಡಾ. ಎಂ. ಎಂ. ಕಲಬುರ್ಗಿ ಅಭಿನಂದನ ಗ್ರಂಥ	ಡಾ. ವೀರಣ್ಣಾ ರಾಜೂರ ಸದಾನಂದ ಕಣವಳ್ಳಿ	ಕಲಬುರ್ಗಿ ಅಭಿನಂದನ ಸಮಿತಿ, ಧಾರವಾಡ	೧೯೯೮
೧೩	ಕನ್ನಡ ಭಾಷೆಯ ಚರಿತ್ರೆ	ಕೃಷ್ಣಯ್ಯ. ಎಂ. ಎಚ್.	ಅಂಕಿತ ಪ್ರಕಾಶನ, ಬೆಂಗಳೂರು	೧೯೯೯
೧೪	ಏಕಲವ್ಯನ ಪಾತ್ರ ಒಂದು ಅಧ್ಯಯನ	ಡಾ. ಅಶೋಕ. ಎಂ. ನರೋಡೆ	ಶ್ರೀ ಸಿದ್ಧೇಶ್ವರ ಪ್ರಕಾಶನ, ಹಂದಿಗುಂದ	೨೦೦೦
೧೫	ಹೊಸಗನ್ನಡ ಸಾಹಿತ್ಯದ ರೂಪಗಳು ಸಂ :	ಡಾ. ವೀರಣ್ಣಾ ರಾಜೂರ ಡಾ. ಬಿ. ಆರ್. ಹಿರೇಮಠ	ಕ. ವಿ. ವಿ. ಧಾರವಾಡ	೨೦೦೦
೧೬	ಬೆಳಗಾವಿ ಬೆಳಕು	ಗುಂಜಾಳ ಎಸ್. ಆರ್.(ಸಂ)	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು	೨೦೦೩
೧೭	ರಸಾಲ	ಡಾ. ವ್ಹಿ. ಎಸ್. ಮಾಳಿ	ಮೋಟಗಿ ಮಠ ಪ್ರಕಾಶನ ಅಥಣಿ	೨೦೦೬

೧೮	ಐಸಿರಿ (ಶತಮಾನೋತ್ಸವ ಸ್ಮರಣ ಸಂಚಿಕೆ)	ಡಾ. ವ್ಹಿ. ಎಸ್. ಮಾಳಿ	ಐನಾಪುರ ಪ್ರಕಾಶನ ಐನಾಪುರ	೨೦೦೬
೧೯	ಅಥಣಿ ಜಂಗಮ ಲಿಂಗ ಮೋಟಗಿ ಮಠದ ಸಂಸ್ಕೃತಿ ಅಧ್ಯಯನ ಎಂ.ಫಿಲ್. ಕಿರು ನಿಬಂಧ	ಪ್ರೊ. ವಸಂತಾ ಕಲ್ಯಾಣಿ	ಅಪ್ರಕಟಿತ	೨೦೦೮
೨೦	ಅಥಣಿ ತಾಲೂಕು : ಸಾಹಿತ್ಯ ದರ್ಶನ	ಡಾ. ವ್ಹಿ. ಎಸ್. ಮಾಳಿ	ವಿಮೋಚನಾ ಸಂಘದ ಪ್ರಸಾರಾಂಗ, ಅಥಣಿ	೨೦೦೮
೨೧	ಕನ್ನಡ ಸಾಹಿತ್ಯ ನಡೆದು ಬಂದ ದಾರಿ	ಪ್ರೊ. ಎನ್. ವ್ಹಿ. ದೊಡ್ಡಮನಿ	ಸಿ.ವಿ.ಜಿ ಇಂಡಿಯಾ	೨೦೦೯
೨೨	ಆಧುನಿಕ ವಚನಕಾರರು	ಡಾ. ಅಶೋಕ. ಎಂ. ನರೋಡೆ	ಮೋಟಗಿ ಮಠ ಪ್ರಕಾಶನ ಅಥಣಿ	೨೦೦೯
೨೩	ಅಥಣಿ ತಾಲೂಕಿ ಸಾಂಸ್ಕೃತಿಕ ದರ್ಶನ	ಅಪ್ಪಾಸಾಬ ಆಲಿಬಾದಿ	ಅನಿಕೇತನ ಪ್ರಕಾಶನ, ಅಥಣಿ	೨೦೦೯
೨೪	ಗದ್ಯ ಸಂಗಾತಿ	ಡಾ. ಅಶೋಕ. ಎಂ. ನರೋಡೆ	ಕಣ್ವ ಪ್ರಕಾಶನ, ಬೆಂಗಳೂರು	೨೦೧೦
೨೫	ಕಾವ್ಯ ಸಂಗಾತಿ	ಡಾ. ಅಶೋಕ. ಎಂ. ನರೋಡೆ	ಸಿ.ವಿ.ಜಿ ಇಂಡಿಯಾ	೨೦೧೦
೨೬	ಅಮೃತದ ಬೆಳಸು	ಡಾ. ವ್ಹಿ. ಎಸ್. ಮಾಳಿ	ಕಣ್ವ ಪ್ರಕಾಶನ, ಬೆಂಗಳೂರು	೨೦೧೦
೨೭	ಬೆಳಗಾವಿ ಜಿಲ್ಲೆಯ ಸ್ಥಳನಾಮಗಳು (ಪಿ.ಎಚ್.ಡಿ ಮಹಾಪ್ರಬಂಧ)	ಡಾ. ಪಿ. ಬಿ. ಕೊರವಿ	ಅಪ್ರಕಟಿತ	೨೦೧೦
೨೮	ಪ್ರಚಲಿತ	ಡಾ. ಅಶೋಕ. ಎಂ. ನರೋಡೆ	ಸಿ.ವಿ.ಜಿ ಇಂಡಿಯಾ	೨೦೧೧
೨೯	ಜನಪದ ವಸುಧಾವಲಯಂ	ಡಾ. ಅಶೋಕ. ಎಂ. ನರೋಡೆ	ವಿಶ್ವ ಮಂಟಪ ಪ್ರಕಾಶನ, ಬೆಂಗಳೂರು	೨೦೧೧
೩೦	ಸಮಕಾಲೀನ	ಡಾ. ಅಶೋಕ. ಎಂ. ನರೋಡೆ	ಸಚಿನ ಪಬ್ಲಿಶರ್ಸ್ ಬೆಂಗಳೂರು	೨೦೧೧
೩೧	ಪ್ರಚಲಿತ	ಡಾ. ಅಶೋಕ. ಎಂ. ನರೋಡೆ	ಸಿ.ವಿ.ಜಿ ಇಂಡಿಯಾ	೨೦೧೧
೩೨	ವಿಮೋಚನಾ ಸಂಘದ ಪ್ರಸಾರಂಗ (ಎಂ.ಫಿಲ್ ಕಿರು ಪ್ರಬಂಧ)	ಪ್ರಕಾಶ. . ಶಿವಾಪೂರ	ಅಪ್ರಕಟಿತ	೨೦೧೧



ದಿನಾಂಕ : ೨೦-೦೯-೧೯೯೦ ರಂದು ಅನುಪಮ ಪ್ರಕಾಶನದ ೧೨ ಕೃತಿಗಳನ್ನು ಏಕಕಾಲಕ್ಕೆ ಬಿಡುಗಡೆ ಮಾಡಲಾಯಿತು ಚಿತ್ರದಲ್ಲಿ ಡಾ. ಜ.ಚ.ನಿ, ಡಾ. ಸಿದ್ಧಯ್ಯಾ ಪುರಾಣಿಕ, ಶ್ರೀಮತಿ ಶಾಂತಾದೇವಿ ಮಾಳವಾಡ, ಡಾ. ಆರ್. ಸಿ. ಹಿರೇಮಠ, ಶ್ರೀಮತಿ ಲೀಲಾ ಕಲಕೋಟಿ ಮುಂತಾದವರಿದ್ದಾರೆ.



೧೯೮೭-೮೮ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ರಾಜ್ಯಮಟ್ಟದ ಜಾನಪದ ಕಲಾ ಮಹೋತ್ಸವ ಮತ್ತು ಪ್ರಶಸ್ತಿ ಸಂದರ್ಭದಲ್ಲಿ ಅನುಪಮ ಪ್ರಕಾಶನದ 'ಶರಣ ಸೌರಭ' ಕೃತಿಯ ೪ನೇ ಮುದ್ರಣವನ್ನು ಡಾ. ಜವರೇಗೌಡರು ಬಿಡುಗಡೆಗೊಳಿಸಿದರು. ಚಿತ್ರದಲ್ಲಿ ಶ್ರೀಮತಿ ಲೀಲಾದೇವಿ. ಆರ್. ಪ್ರಸಾದ, ಡಾ. ಪ್ರಭಾಕರ ಕೋರೆ, ಡಾ. ದೇವೇಂದ್ರಕುಮಾರ ಹಕಾರಿ ಡಾ. ಎಸ್.ಕೆ. ಕರೀಂಖಾನ ಹಾಜರಿದ್ದರರು.







ಅನುಪಮ ಪ್ರಕಾಶನದ ೫ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಡಾ. ಮಲ್ಲೇಪುರಂ ವೆಂಕಟೇಶ, ವಿಜಯ ಕರೋಲಿ, ಸಿದ್ಧಣ್ಣ ಉತ್ನಾಳ, ಅವರನ್ನು ಕಾಣಬಹುದು.



ಅನುಪಮ ಪ್ರಕಾಶನದ ೭ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾದ ರಾಣೀ ಸತೀಶ, ಡಾ. ದೇವೆಂದ್ರಕುಮಾರ ಹಕಾರಿ, ಶ್ರೀ ಮ. ನಿ. ಪ್ರ. ಚನ್ನಬಸವ ಮಹಾಸ್ವಾಮಿಗಳು ಗಚ್ಚಿನ ಮಠ ಅಥಣಿ, ಹಾಗೂ ಲೇಖಕರಾದ ಪ್ರೊ. ಸಿದ್ಧಣ್ಣ ಉತ್ನಾಳ, ಪ್ರೊ. ವಸಂತಾ ಕಲ್ಯಾಣಿ ಮುಂತಾವದರನ್ನು ಕಾಣಬಹುದು.







ಹಳಕಟ್ಟಿಯವರ ವಚನೋತ್ಸವ ಅನುಪಮ ಪ್ರಕಾಶನದ ಶ್ರೀ ಮುರುಘೇಂದ್ರ ಶಿವಯೋಗಿಗಳು ಕೃತಿಯ ಬಿಡುಗಡೆ ಗದಗದಲ್ಲಿ ಈ ಸಂದರ್ಭದಲ್ಲಿ ಗೊ. ರು. ಚನ್ನಬಸಪ್ಪ, ಮಂತ್ರಿಗಳಾದ ಗೋವಿಂದ ಕಾರಜೋಳ, ಪ್ರಾಚಾರ್ಯರಾದ ಬಿ. ಎಂ. ಪಾಟೀಲ ಸಿದ್ದಣ್ಣ. ಬಿ. ಉತ್ನಾಳರು ಹಾಜರಿದ್ದರು.



ಅನುಪಮ ಪ್ರಕಾಶನದ ಕುಡು ಒಕ್ಕಲಿಗರ ಕೈಪಿಡಿಯ ಪ್ರಥಮ ಮುದ್ರಣದ ಬಿಡುಗಡೆ ಬೆಂಗಳೂರಲ್ಲಿ. ಸಿದ್ದಣ್ಣ. ಉತ್ನಾಳ, ಜಿ. ಕೆ. ಪಾಟೀಲ, ಎಸ್. ಎಸ್. ಖೇಡ, ವ್ಹಿ. ಆರ್. ಮಾಳಗೊಂಡ ಹಾಗೂ ವಿಠ್ಠಲ ದೇವುರ ಅವರನ್ನು ಕಾಣಬಹುದು.







ಉಚ್ಚಾನದ ಶ್ರೀ ಸಿದ್ಧಲಿಂಗ ಮಹಾರಾಜರ ಮಠದಲ್ಲಿ ಚಿನ್ಮಯ ಚೇತನ ಲಚ್ಚಾನ ಸಿದ್ಧಲಿಂಗ ಮಹಾರಾಜರು ಕೃತಿಯ ಬಿಡುಗಡೆ ಸಮರಾಂಭ. ಶ್ರೀ ಷಡಕ್ಷರಿ ಸಿದ್ಧರಾಮೇಶ್ವರ ಮಹಾಸ್ವಾಮಿಗಳು, ಮೂರುಸಾವಿರಮಠದ ಹುಬ್ಬಳ್ಳಿಯ ಗಂಗಾಧರ ಮಹಾಸ್ವಾಮಿಗಳು ಹಾಗೂ ಸಿದ್ದಣ್ಣ ಉತ್ನಾಳ ಅವರನ್ನು ಕಾಣಬಹುದು.



ಬೆಳಗಾವಿ ಜಿಲ್ಲಾ ಪುಸ್ತಕ ಮೇಳದಲ್ಲಿ ಅನುಪಮ ಪ್ರಕಾಶನದ ಕೃತಿಗಳನ್ನು ನೋಡುತ್ತಿರುವ ಡಾ. ಎಂ. ಎಂ. ಕಲಬುರ್ಗಿ, ಡಾ. ಪಾಟೀಲ ಪುಟ್ಟಪ್ಪ, ಡಾ. ಮಲ್ಲೇಪುರಂ ವೆಂಕಟೇಶ, ಡಾ. ಚನ್ನವೀರ ಕಣವಿ ಹಾಗೂ ಸಿದ್ದಣ್ಣ ಉತ್ನಾಳರು.








ರಾಷ್ಟ್ರೀಯ ಪ್ರತಿಷ್ಠಿತ ಪ್ರಕಾಶಕರ ಪ್ರಶಸ್ತಿಯನ್ನು ಕನ್ನಡ ಭಾಷೆಯ ಅನುಪಮ ಪ್ರಕಾಶನ ಅರ್ಥಣಿಗೆ ಲಭಿಸಿದೆ. ಸಂಚಾಲಕರಾದ ಪ್ರ. ಸಿದ್ದಣ್ಣ ಉತ್ನಾಳ ಅವರು ಮಧ್ಯಪ್ರದೇಶದ ರಾಜ್ಯಪಾಲರಾದ ಭಾಯಿ ಮಹಾವೀರ ಜೈನರಿಂದ ಕಳೆದ ದಿ. ೨೧ರಂದು ಪುಣೆಯಲ್ಲಿ ಸ್ವೀಕರಿಸಿದರು. (೨೮-೦೨-೧೯೯೯)



ಶೃಂಗಾರ ಪ್ರಕಾಶನದ ದಶಮಾನೋತ್ಸವ ಸಮಾರಂಭದಲ್ಲಿ ಸರ್ವಶ್ರೇಷ್ಠ ಕನ್ನಡ ೧೦ ಪ್ರಕಾಶಕರ ಸನ್ಮಾನದಲ್ಲಿ ಅನುಪಮ ಪ್ರಕಾಶನವು ಒಂದಾಗಿದೆ. ಸಿದ್ದಣ್ಣ. ಬಿ. ಉತ್ನಾಳ, ಎಲ್. ಎಸ್. ಶೇಷಗಿರಿರಾವ್, ಡಾ. ಎನ್. ಬಸವಾರಾಧ್ಯ, ಡಾ. ಜವರೇಗೌಡ, ಡಾ. ಎಚ್. ಆರ್. ದಾಸೆಗೌಡರು.






Distinguished
PUBLISHER AWARD
1999
This Award is being given to
Prof. Siddanna Utnal, Anupam Prakashan (Kannada)
for significant and innovative work
done with a spirit of dedication
to serve the
Reading Public.
D.N. MALHOTRA
The Federation of Indian Publishers
Third National Convention of
Indian Languages Publishers
Pune, February

ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನ, ಬೆಳಗಾವಿ.

ಕೆಳಕರಬಾಗ, ಬೆಳಗಾವಿ.

ಶ್ರೀಮತಿ ತಾರಾಮತಿ ಪರ್ವತರಾಜ ಪಾಟೀಲ ದತ್ತಿ ಪ್ರಶಸ್ತಿ - ೨೦೦[illegible]

ಉತ್ತಮ ಪ್ರಕಾಶಕರೆಂದು

ಅನುಪಮ ಪ್ರಕಾಶನ, ಅಥಣಿ ಅವರಿಗೆ

ಅದರ ಒಡೆಯರಾದ ಶ್ರೀ ಸಿದ್ದಣ್ಣ ಉತ್ನಾಳ

ನಿರ್ಧರಿಸಿ ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನವು ಅವರಿಗೆ

'ಶ್ರೀಮತಿ ತಾರಾಮತಿ ಪರ್ವತರಾಜ ಪಾಟೀಲ ದತ್ತಿ ಪ್ರಶಸ್ತಿ' ಯನ್ನು ನೀಡಿ ಗೌರವಿಸುತ್ತದೆ.

ದಿನಾಂಕ: ೨೭-೧-೨೦೦೮

ಭೀಮಸೇನ ತೊರಗಲ್ಲ
ಕಾರ್ಯದರ್ಶಿ

ಎಸ್. ಎಂ. ಕುಲಕರ್ಣಿ
ಅಧ್ಯಕ್ಷರು